₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶುಕ್ರವಾರ 21.06.2024 ಸಂಪುಟ: 67 ಸಂಚಿಕೆ: 47 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

7ನೇ ವೇತನ ಆಯೋಗದ ಜಾರಿ ಸಿಎಂ ವಿವೇಚನೆಗೆ
ಕೆಜಿಎಫ್‌ನಲ್ಲಿ ಮರುಗಣಿಗಾರಿಕೆಗೆ ಸಂಪುಟ ಸಮ್ಮತಿ
ಸರಕಾರಿ ಶಾಲಾ-ಕಾಲೇಜುಗಳಿಗೆ ಉಚಿತ ವಿದ್ಯುತ್

ಸರಕಾರಿ ನೌಕರರಿಗೆ ಶೀಘ್ರವೇ ಸಿಹಿ ಸುದ್ದಿ

ಬೆಂಗಳೂರು: ರಾಜ್ಯ ಸರಕಾರಿ ನೌಕರರ ಬಹುದಿನದ ಬೇಡಿಕೆಯಾಗಿರುವ ಏಳನೇ ವೇತನ ಆಯೋಗದ ವರದಿ ಜಾರಿಗೆ ಸರಕಾರ ಸಿದ್ಧತೆ ನಡೆಸಿಕೊಂಡಿದ್ದು, ಶೀಘ್ರದಲ್ಲಿಯೇ ವೇತನದ ಬಗ್ಗೆ ಅಧಿಕೃತ ಪ್ರಕಟಣೆ ಹೊರಬೀಳಲಿದೆ ಎನ್ನಲಾಗಿದೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಸರಕಾರಿ ನೌಕರರ ಬಹುದಿನಗಳ ಬೇಡಿಕೆಯಾಗಿದ್ದ ಏಳನೇ ವೇತನ ಆಯೋಗದ ಶಿಫಾರಸು ಜಾರಿಗೊಳಿಸಲು ಒಪ್ಪಿದ್ದು, ವರದಿ ಜಾರಿಗೊಳಿಸುವ ಅಧಿಕಾರವನ್ನು ಸಿಎಂ ಸಿದ್ದರಾಮಯ್ಯನವರಿಗೆ ನೀಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸರಕಾರಿ ನೌಕರರ ವೇತನವನ್ನು ಶೇ.25ರಷ್ಟು ಹೆಚ್ಚಿಸ ಬೇಕೆನ್ನುವ ಸಲಹೆಯನ್ನು ಕೆಲ ಸಚಿವರು ನೀಡಿದ್ದಾರೆ. ಸಿಎಂ ಸೇರಿದಂತೆ ಕೆಲ ಸಚಿವರು ಶೇ.27ರಷ್ಟು ವೇತನ ಹೆಚ್ಚಿಸಲು ಒಲವು ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಆದರೆ ಯಾವ ತಿಂಗಳಿನಿಂದ ಈ ಪರಿಷ್ಕೃತ ವೇತನ ಜಾರಿಯಾಗಲಿದೆ ಎನ್ನುವ ಸ್ಪಷ್ಟನೆ ಸಿಕ್ಕಿಲ್ಲ.

→ 4

ದರ್ಶನ್ ವಿಷಯದಲ್ಲಿ ನನ್ನ ಬಳಿ ಬರಬೇಡಿ

ಸಚಿವ ಸಂಪುಟ ಸಭೆಯ ಆರಂಭದಲ್ಲಿಯೇ ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಕೆಲ ಸಚಿವರು ಮುಂದಾದರು. ಈ ಮಾತು ಬರುತ್ತಿದ್ದಂತೆ, ಸಿಎಂ ಸಿದ್ದರಾಮಯ್ಯ ಅವರು ಗರಂ ಆಗಿದ್ದು 'ಇಂತಹ ಕ್ರೂರತನವನ್ನು ಎಂದಿಗೂ ನಾನು ನೋಡಿಲ್ಲ'. ಆದ್ದರಿಂದ ಈ ಪ್ರಕರಣದಲ್ಲಿ ಯಾರು ನನ್ನ ಬಳಿ ಬರಬೇಡಿ. ಪೊಲೀಸರು ಏನು ಮಾಡಬೇಕೋ ಅದನ್ನು ಮಾಡಲಿ ಎಂದು ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ.

ಸಂಪುಟದ ಪ್ರಮುಖಾಂಶ

- ಪಿಎಂ ಉಷಾ ಯೋಜನೆಯಲ್ಲಿ ರಾಜ್ಯ 6ವಿವಿಗಳ ಮೇಲ್ದರ್ಜೆಗೆ 111.91 ಕೋಟಿ
- ರಾಜ್ಯದ ಸರಕಾರಿ ಶಾಲೆ, ಪದವಿಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್, ನೀರಿನ ಸೌಲಭ್ಯಕ್ಕೆ 29 ಕೋಟಿ
- 7,110 ಕಿ.ಮೀ.ಗಳ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ 5,190 ಕೋಟಿ ರು. ವೆಚ್ಚದಲ್ಲಿ ಅನುಷ್ಠಾನಕ್ಕೆ ಒಪ್ಪಿಗೆ
- ಸರಕಾರಿ ಸಮಾರಂಭಗಳಲ್ಲಿ ಮಹಾತ್ಮ ಗಾಂಧಿ ಭಾವಚಿತ್ರ ದೊಂದಿಗೆ ಅಂಬೇಡ್ಕರ್ ಭಾವಚಿತ್ರ ಕಡ್ಡಾಯ

ಇನ್ಮುಂದೆ ಅಂಬೇಡ್ಕರ್ ಫೋಟೊ ಕಡ್ಡಾಯ

ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಸೇರಿದಂತೆ ಸರಕಾರಿ ಕಾರ್ಯಕ್ರಮಗಳಲ್ಲಿ ಇನ್ನು ಮುಂದೆ ಗಾಂಧೀಜಿ ಅವರ ಭಾವಚಿತ್ರದೊಂದಿಗೆ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಫೋಟೋವನ್ನು ಕಡ್ಡಾಯವಾಗಿ ಇಡಬೇಕು ಎಂದು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಸಂಪಾದಕೀಯ ಪುಟಗಳಲ್ಲಿ

ಕತ್ತೆಗೆ ಅನಾರೋಗ್ಯ - ಮುಗಿಬಿದ್ದು ದರ್ಶನ ಪಡೆದ ಅಭಿಮಾನಿಗಳು!
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಸುರಿವ ಮಳೆ ತಂದ ಸಂಕದ ನೆನಪು
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ದಾರಿದೀಪೋಕ್ತಿ

ಕಷ್ಟಗಳು ನಿಮಗೆ ವೇದನೆಯನ್ನು ಮಾತ್ರ ಕೊಡುತ್ತವೆ ಎಂದು ಭಾವಿಸಬಾರದು. ನೀವು ಕಷ್ಟದಲ್ಲಿದ್ದಾಗ ನಿಜವಾದ ಮಿತ್ರರು ಯಾರು, ಹಿತಚಿಂತಕರು ಯಾರು ಎಂಬುದು ಗೊತ್ತಾಗುತ್ತದೆ. ನೀವು ಯಾರನ್ನು ಆಪ್ತರು ಎಂದುಕೊಳ್ಳುತ್ತೀರೋ ಅವರು ನಿಮ್ಮ ಕಷ್ಟದಲ್ಲಿ ನಿಜ ಬಣ್ಣ ತೋರುತ್ತಾರೆ.

ವಕ್ರತುಂಡೋಕ್ತಿ

ಹೆಂಡತಿ ದುರ್ಬಲಳಲ್ಲ. ಅದರಲ್ಲೂ ನೀವಿಬ್ಬರೂ ಒಂದೇ ಚಾದರ ಹೊದ್ದು ಮಲಗಿದ್ದಾಗಂತೂ ಅಲ್ಲವೇ ಅಲ್ಲ.

ಫನ್‌ತರಂಗ
- ರಘುಪತಿ ಶೃಂಗೇರಿ -



ಪವಿತ್ರಾ ಸೇರಿದಂತೆ ಹತ್ತು ಆರೋಪಿಗಳು ಪರಪ್ಪನ ಅಗ್ರಹಾರಕ್ಕೆ
ದರ್ಶನ್, ವಿನಯ್, ಧನರಾಜ್, ಪ್ರದೋಶ್ ಪೊಲೀಸ್ ಕಸ್ಟಡಿಗೆ

ದರ್ಶನ್ ಕಸ್ಟಡಿಗೆ; ಪವಿತ್ರಾ ಜೈಲಿಗೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ನ್ಯಾಯಾಂಗ ಬಂಧನದ ನಿರೀಕ್ಷೆಯಲ್ಲಿದ್ದ ದರ್ಶನ್‌ಗೆ ಆಘಾತವಾಗಿದ್ದು, ಇನ್ನೆರಡು ದಿನ ಪೊಲೀಸ್ ಠಾಣೆಯಲ್ಲಿಯೇ ಸವೆಯಬೇಕಿದೆ. ಆದರೆ ಪ್ರಕರಣದ ಎ1 ಆರೋಪಿಯಾಗಿರುವ



ಪವಿತ್ರಾ ಗೌಡ ಸೇರಿದಂತೆ 10 ಆರೋಪಿಗಳಿಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ದರ್ಶನ್, ಪವಿತ್ರಾ ಗೌಡ ಮತ್ತು ಸಹಚರರ ಪೊಲೀಸ್ ಕಸ್ಟಡಿ ಗುರುವಾರ ಅಂತ್ಯವಾಗಿದೆ. ಪವಿತ್ರಾ ಗೌಡ ಸೇರಿದಂತೆ ಒಂಬತ್ತು ಜನರನ್ನು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದು, ದರ್ಶನ್, ಧನರಾಜ್ ಸೇರಿದಂತೆ ನಾಲ್ವರನ್ನು ಎರಡು ದಿನದ ಮಟ್ಟಿಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ನ್ಯಾಯಾಲಯದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನಷ್ಟು ವಿಚಾರಣೆ ನಡೆಸಬೇಕಿದ್ದು, ಆದ್ದರಿಂದ ಆರೋಪಿಗಳನ್ನು ನಾಲ್ಕು ದಿನದ ಮಟ್ಟಿಗೆ ಪೊಲೀಸ್ ಕಸ್ಟಡಿಗೆ ನೀಡಬೇಕು ಎಂದು ಎಸ್‌ಪಿಪಿ ಪ್ರಸನ್ನಕುಮಾರ್ ಮನವಿ ಮಾಡಿದರು. ಆದರೆ ಈ ವಾದವನ್ನು ವಿರೋಧಿಸಿ ದರ್ಶನ್ ಪರ ವಕೀಲರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಮನವಿ ಮಾಡಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಪವಿತ್ರಾ ಗೌಡ ಸೇರಿದಂತೆ ಒಂಬತ್ತು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದರೆ, ದರ್ಶನ್‌ಗೆ ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದೆ. ಮುಂದಿನ ಎರಡು ದಿನದಲ್ಲಿ ಮೈಸೂರು ಸೇರಿದಂತೆ ಅಪರಾಧ ನಡೆದ ವಿವಿಧ ಸ್ಥಳದಲ್ಲಿ ಮಹಜರು ಮಾಡಲು ಕರೆದುಕೊಂಡು ಹೋಗುವ ಸಾಧ್ಯತೆಯಿದೆ ಎನ್ನಲಾಗಿದೆ.

- ಮುಂದಿನ 2 ದಿನದಲ್ಲಿ ಅಪರಾಧ ನಡೆದ ಸ್ಥಳದಲ್ಲಿ ಮಹಜರು ಮಾಡಲು ಕರೆದುಕೊಂಡು ಹೋಗುವ ಸಾಧ್ಯತೆ
- ಶವ ಎಸೆಯಲು ನೀಡಲಾಗಿದ್ದ 37 ಲಕ್ಷ ರುಪಾಯಿಯ ಮೂಲ ಪತ್ತೆ ಮಾಡಲು ಪೊಲೀಸರ ಸಿದ್ಧತೆ

ಮತ್ತೆ ಪೊಲೀಸ್ ಕಸ್ಟಡಿ ಏಕೆ?

ದರ್ಶನ್ ಹಾಗೂ ಇತರರನ್ನು ಮತ್ತೆ ಕಸ್ಟಡಿಗೆ ನೀಡಲು ಕೆಲವು ಕಾರಣಗಳನ್ನು ನೀಡಿರುವ ಪೊಲೀಸರು, ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿ ಇದ್ದಾರೆ ಎಂಬುದು ಪ್ರಮುಖ ಕಾರಣವಾಗಿತ್ತು. ಪ್ರತ್ಯಕ್ಷ ಸಾಕ್ಷಿ ನೀಡಿರುವ ಹೇಳಿಕೆಗಳ ಆಧಾರದಲ್ಲಿ ದರ್ಶನ್ ಅವರ ವಿಚಾರಣೆ ಮಾಡಬೇಕು. ಇದರೊಂದಿಗೆ ಕೆಲ ತಾಂತ್ರಿಕ ಸಾಕ್ಷ್ಯಗಳು, ಎಫ್‌ಎಸ್‌ಎಲ್ ವರದಿಗಳು ಇವುಗಳ ವರದಿಗಳ ಆಧಾರದಲ್ಲಿ ವಿಚಾರಣೆ ಮಾಡಬೇಕೆನ್ನುವ ಕಾರಣವನ್ನು ಪೊಲೀಸರು ನೀಡಿದರು. ಇದರ ಜತೆಗೆ ಶವ ಎಸೆಯಲು ನೀಡಲಾಗಿದ್ದ 37 ಲಕ್ಷ ರುಪಾಯಿ ಹಣದ ಮೂಲವನ್ನು ಸಹ ಪತ್ತೆ ಮಾಡಬೇಕಿದೆ ಎಂದಿದ್ದಾರೆ. ಇದಕ್ಕೆ ಒಪ್ಪಿ ಪೊಲೀಸ್ ಕಸ್ಟಡಿಗೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಇನ್ನಷ್ಟು ಸೆಕ್ಷನ್ ಹೇರಿಕೆ?

ಈಗಾಗಲೇ ದರ್ಶನ್ ಆ್ಯಂಡ್ ಗ್ಯಾಂಗ್ ವಿರುದ್ಧ ಕೊಲೆ, ಅಪಹರಣದ ಪ್ರಕರಣವನ್ನು ದಾಖಲಿಸಲಾಗಿತ್ತು. ಆದರೀಗ ದರೋಡೆ, ಸಾಕ್ಷ್ಯ ನಾಶ ಸೇರಿದಂತೆ ವಿವಿಧ ಆರೋಪಗಳನ್ನು ಹೊರಿಸಲಾಗಿದೆ ಎಂದು ಹೇಳಲಾಗಿದೆ. ಎಂಟತ್ತು ಸೆಕ್ಷನ್‌ಗಳಲ್ಲಿ ಪ್ರಕರಣ ದಾಖಲಾಗಿದ್ದು, ಬಹುತೇಕ ಜಾಮೀನು ರಹಿತ ಆರೋಪವಾಗಿದೆ ಎಂದು ತಿಳಿದುಬಂದಿದೆ.

ಹಾಸನದಲ್ಲಿ ಶೂಟೌಟ್ ಉದ್ಯಮಿಗಳಿಬ್ಬರ ಸಾವು

ಹಾಸನ: ಇಲ್ಲಿನ ಹೊಯ್ಸಳನಗರ ಬಡಾವಣೆಯಲ್ಲಿ ಗುರುವಾರ ಮಧ್ಯಾಹ್ನ ನಡೆದ ಶೂಟೌಟ್ ಪ್ರಕರಣದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೆಂಗಳೂರಿನ ಆಸೀಫ್ (46) ಮತ್ತು ಹಾಸನದ ಆಡುವಳ್ಳಿಯ ಶರಾಫತ್ ಅಲಿ (52) ಮೃತರು. ಇಬ್ಬರೂ ಮಧ್ಯಾಹ್ನ ಕಾರಿನಲ್ಲಿ ಹೊಯ್ಸಳ ನಗರಕ್ಕೆ ಬಂದಿದ್ದರು. ಒಬ್ಬರು ಇನ್ನೊಬ್ಬರಿಗೆ ಗುಂಡಿಕ್ಕಿ, ತಾವೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದು ಎನ್ನಲಾಗಿದೆ.

ಕ್ರಿಕೆಟಿಗ ಡೇವಿಡ್ ಜಾನ್ಸನ್ ಆತ್ಮಹತ್ಯೆ

ಬೆಂಗಳೂರು: ಟೀಂ ಇಂಡಿಯಾ ಮಾಜಿ ಕ್ರಿಕೆಟಿಗ ಡೇವಿಡ್ ಜಾನ್ಸನ್ (52) ಅಪಾರ್ಟ್‌ಮೆಂಟ್‌ನಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಂಗಳೂರಿನ ಎಸ್‌ಎಲ್‌ವಿ ಪ್ಯಾರಡೈಸ್ ಅಪಾರ್ಟ್‌ಮೆಂಟ್‌ನಲ್ಲಿ 4ನೇ ಮಹಡಿಯಿಂದ ಜಾನ್ಸನ್ ಜಿಗಿದಿದ್ದಾರೆ. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಅವರು ಖಿನ್ನತೆಯಿಂದ ಬಳಲುತ್ತಿದ್ದರು ಎಂದು ತಿಳಿದುಬಂದಿದೆ.

ನಕಲಿ ಮದ್ಯ ಸೇವಿಸಿ 37 ಜನ ಸಾವು

ಚೆನ್ನೈ: ತಮಿಳುನಾಡಿನ ಕಲ್ಲಕುರಿಚಿ ಜಿಲ್ಲೆಯ ಕರುಣಾಪುರಂನಲ್ಲಿ ನಕಲಿ ಮದ್ಯ ಸೇವಿಸಿ 37 ಮಂದಿ ಸಾವನ್ನಪ್ಪಿದ್ದು, 80ಕ್ಕೂ ಅಧಿಕ ಮಂದಿ ಅಸ್ವಸ್ಥರಾಗಿದ್ದಾರೆ. ಜಿ.ಪ್ರವೀಣ್‌ಕುಮಾರ್ (26), ಡಿ.ಸುರೇಶ್(40), ಕೆ.ಶೇಖರ್(59), ಎಸ್.ವಡಿವುಕ್ಕರಸಿ, ಸಿ.ಕಂದನ್, ಪಿ.ಜಗದೀಶನ್, ಆರ್.ಸುರೇಶ್, ಎಂ.ಸೆಲ್ವಂ ಮತ್ತು ಎಂ.ಆರುಮುಗಂ ಮೃತರು. ಉಳಿದವರ ಗುರುತು ಪತ್ತೆಗೆ ಯತ್ನಿಸಲಾಗುತ್ತಿದೆ.

ಮೆಕ್ಕಾದಲ್ಲಿ ರಾಜ್ಯದ ಮೂವರು ಬಲಿ



ಜೆರುಸಲೇಂ: ಮುಸಲ್ಮಾನರ ಪವಿತ್ರ ಸ್ಥಳ ಮೆಕ್ಕಾದಲ್ಲಿ ತಾಪಮಾನ ಏರಿಕೆ-ಬಿಸಿಲ ಆಘಾತದಿಂದ ಗುರುವಾರದವರೆಗೆ 1081 ಯಾತ್ರಾರ್ಥಿಗಳು ಸಾವನ್ನಪ್ಪಿದ್ದಾರೆ. ಇವರಲ್ಲಿ ಬೆಂಗಳೂರಿನ ಇಬ್ಬರು ಮತ್ತು ಚಿತ್ರದುರ್ಗದ ಒಬ್ಬ ಯಾತ್ರಿ ಸೇರಿ ಭಾರತದ 92 ಯಾತ್ರಿಕರು ಮೃತರಾಗಿದ್ದಾರೆ. ಯಾತ್ರೆಯಲ್ಲಿ ಈ ಬಾರಿ ಬಿಸಿಗಾಳಿ ಹೊಡೆತದ ನಡುವೆ ಯಾತ್ರಿಕರ ಜೀವ ರಕ್ಷಣೆ ಸೌದಿ ಆಡಳಿತಕ್ಕೆ ಸವಾಲಾಗಿದೆ.

ಬಿಹಾರ: ಶೇ.65ರ ಮೀಸಲಾತಿ ರದ್ದು

ಪಟನಾ: ಸಂವಿಧಾನದಲ್ಲಿ ಉಲ್ಲೇಖಿಸಿದ ಮೀಸಲು ಮಿತಿ ಶೇ.50 ಅನ್ನು ಮೀರುವಂತಿಲ್ಲ ಎಂದು ಹೇಳಿರುವ ಪಟನಾ ಹೈಕೋರ್ಟ್, ಬಿಹಾರ ಸರಕಾರ ಜಾರಿಗೊಳಿಸಿದ್ದ ಶೇ.65 ಮೀಸಲು ಸೌಲಭ್ಯ ಆದೇಶವನ್ನು ರದ್ದುಗೊಳಿಸಿದೆ. ಹಿಂದಿನ ಜೆಡಿಯು, ಆರ್‌ಜೆಡಿ ಮತ್ತು ಕಾಂಗ್ರೆಸ್ ಮೈತ್ರಿ ಸರಕಾರವಿದ್ದಾಗ ಜಾರಿಗೊಳಿಸಿದ್ದ ಮೀಸಲು ಹೆಚ್ಚಳ ಕ್ರಮವನ್ನು ಹೈಕೋರ್ಟ್ ಆದೇಶ ರದ್ದುಗೊಳಿಸಿದೆ.

ಡಿಕೆಶಿ ಸ್ಪರ್ಧೆಗೆ ಕಾಂಗ್ರೆಸ್ ಪಕ್ಷದಲ್ಲೇ ವಿರೋಧ

ಬೆಂಗಳೂರು: ಚನ್ನಪಟ್ಟಣ ಉಪಚುನಾವಣೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಪರ್ಧಿಸಲು ಮುಂದಾಗಿರುವುದಕ್ಕೆ ಕಾಂಗ್ರೆಸ್‌ನಲ್ಲೇ ವಿರೋಧ ವ್ಯಕ್ತವಾಗಿದೆ. ಡಿಕೆಶಿ ಕನಕಪುರದ ಹಾಲಿ ಶಾಸಕರಾಗಿದ್ದಾರೆ. ಚನ್ನಪಟ್ಟಣ ಉಪಚುನಾವಣೆಗೆ ಸ್ಪರ್ಧಿಸಿ, ಗೆದ್ದರೆ ಕನಕಪುರಕ್ಕೆ ಮತ್ತೊಂದು ಉಪಚುನಾವಣೆ ನಡೆಯುತ್ತದೆ. ಇದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು ಎನ್ನುವುದು ನಾಯಕರ ಅಭಿಪ್ರಾಯವಾಗಿದೆ.

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ
ಹೈಟೆಕ್ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ
"ಕಾರ್ಯಾಚರಣೆ ಮತ್ತು ನಿರ್ವಹಣೆಯ" ಲೋಕಾರ್ಪಣೆ ಕಾರ್ಯಕ್ರಮ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

21 ಜೂನ್ 2024
ಸಮಯ : ಮಧ್ಯಾಹ್ನ 3.00 ಗಂಟೆಗೆ
ಸ್ಥಳ : ಸ್ವಾತಂತ್ರ್ಯ ಉದ್ಯಾನವನದ ಆವರಣ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು

-: ಉದ್ಘಾಟನೆ :-
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರು ಈ ಹಿಂದೆ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ಕಾಮಗಾರಿ ಕಾರ್ಯವನ್ನು ಪರಿಶೀಲಿಸುತ್ತಿರುವುದು

ಹೈಟೆಕ್ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ ವೈಶಿಷ್ಟ್ಯ
- ದೇಶದಲ್ಲೇ ಮೊದಲ ಬಾರಿಗೆ ಸರ್ಕಾರಿ ಒಡೆತನದ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದಲ್ಲಿ ಅಡ್ವಾನ್ಸ್ ಸ್ಮಾರ್ಟ್ ಪಾರ್ಕಿಂಗ್ ತಂತ್ರಜ್ಞಾನ ಹಾಗೂ ಕ್ಯಾಶ್‌ಲೆಸ್ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಲಾಗಿದೆ.
- 600 ಕಾರುಗಳು ಮತ್ತು 750 ದ್ವಿಚಕ್ರ ವಾಹನಗಳನ್ನು ಏಕಕಾಲದಲ್ಲಿ ನಿಲುಗಡೆ ವ್ಯವಸ್ಥೆ.
- ಮಹಿಳೆಯರು, ಹಿರಿಯ ನಾಗರೀಕರು ಹಾಗೂ ವಿಶೇಷ ಚೇತನರಿಗೆ ಪ್ರತ್ಯೇಕವಾಗಿ ಕಾರ್ ಪಾರ್ಕಿಂಗ್ ವ್ಯವಸ್ಥೆ.
- ಉಚಿತ ವೈಫೈ, ಇವಿ ಚಾರ್ಜಿಂಗ್, ಶೌಚಾಲಯ, ಶುದ್ಧ ಕುಡಿಯುವ ನೀರಿನ ಸೌಲಭ್ಯ.

ಪ್ರಗತಿಯತ್ತ ಬೆಂಗಳೂರು
ನೆಮ್ಮದಿಯತ್ತ ನಾಗರಿಕರು

ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ QR ಕೋಡ್ ಬಳಸಿ

ನುಡಿದಂತೆ ನಡೆದಿದ್ದೇವೆ...
ಶಕ್ತಿ ಗೃಹ ಜ್ಯೋತಿ ಅನ್ನಭಾಗ್ಯ ಗೃಹಲಕ್ಷ್ಮಿ ಯುವನಿಧಿ

ಸಮಾಚಾರ ಸಣ್ಣದಲ್ಲ

ಯುವನಿಧಿ; 25 ರೊಳಗೆ ಸ್ವಯಂ ಘೋಷಣೆ ಸಲ್ಲಿಸಿ

ಕಾರವಾರ: ಯುವನಿಧಿ ಯೋಜನೆಯ ಅರ್ಹ ಫಲಾನುಭವಿಗಳು ಮಾಸಿಕ ನಿರುದ್ಯೋಗ ಭತ್ಯೆ ಪಡೆಯಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಪ್ರತಿ ತಿಂಗಳು 25 ನೇ ತಾರೀಖಿನ ಒಳಗಾಗಿ ಸ್ವಯಂ ಘೋಷಣೆ ಸಲ್ಲಿಸಬೇಕು. ಕಳೆದ ತಿಂಗಳುಗಳಲ್ಲಿ ಸ್ವಯಂ ಘೋಷಣೆ ಮಾಡಲು ಸಾಧ್ಯವಾಗದೆ ಇರುವ ಫಲಾನುಭವಿಗಳು ಈ ತಿಂಗಳು ಜೂನ್ 25 ರೊಳಗಾಗಿ ಸೇವಾ ಸಿಂಧೂ ಪೋರ್ಟಲ್‌ನಲ್ಲಿ ಲಾಗಿನ್ ಆಗಿ ಸ್ವಯಂ ಘೋಷಣೆ ಮಾಡಲು ಅವಕಾಶವಿರುತ್ತದೆ ಎಂದು ಯೋಜನಾ ಉದ್ಯೋಗ ವಿನಿಮಯ ಕಚೇರಿಯ, ಉದ್ಯೋಗಾಧಿಕಾರಿ, ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಕಾರವಾರ: 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ. 21ರಂದು ಬೆಳಗ್ಗೆ 6.30 ಗಂಟೆಗೆ ಕಾಜುಬಾಗದ ಪೋಲಿಸ್ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ಉಸ್ತುವಾರಿ ಸಚಿವ ಮಾಂಕಾಳ ಎಸ್ ವೈದ್ಯ, ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ದಿನೇಶ್ ಗುಂಡೂರಾವ್, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಎಜನ್ಸಿ ಲಿಮಿಟೆಡ್ ನ ಅಧ್ಯಕ್ಷ ಸತೀಶ್ ಕೆ. ಸೈಲ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಉಳ್ವೇಕರ ಮತ್ತಿತರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮವನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಆಯುಷ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್, ಆರೋಗ್ಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ, ಶಿಕ್ಷಣ ಇಲಾಖೆ, ನಗರಸಭೆ ಎನ್.ಸಿ.ಸಿ, ಎನ್.ಎಸ್.ಎಸ್, ರೆಡ್ ಕ್ರಾಸ್, ರೋಟರಿ ಕ್ಲಬ್, ಜಿಲ್ಲಾ ನೌಕರರ ಸಂಘ, ಪತಂಜಲಿ, ರೋಟರಿ ಸಿಸೈಡ್, ರೋಟರಿ ಪಶ್ಚಿಮ, ಹಾಗೂ ವಿವಿಧ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಲಾಗಿದೆ.

ಮಲೆನಾಡು ಮೇಳ, ವಿಚಾರ ಸಂಕಿರಣ ಜೂ.29, 30ಕ್ಕೆ

ಶಿರಸಿ: ಸಾವಯವ ಒಕ್ಕೂಟ, ತೋಟಗಾರಿಕಾ ಇಲಾಖೆ, ಜೀವವೈವಿಧ್ಯ ಮಂಡಳಿ ತಾಲೂಕಾ ಪಂಚಾಯತ ಶಿರಸಿ, ಹಾಗೂ ವನಸ್ತ್ರೀ ಸಂಸ್ಥೆ ಇವರ ಸಹಯೋಗದಲ್ಲಿ ಜೂನ್ 29 ಹಾಗೂ 30 ರಂದು ಹಲಸು ಮತ್ತು ಮಲೆನಾಡು ಮೇಳ ಆಯೋಜಿಸಲಾಗಿದೆ. ಶಿರಸಿ ಎಪಿಎಮ್‌ಸಿ ಯಾರ್ಡ್ ನಲ್ಲಿ, ಟಿಆರ್‌ಸಿ ಬ್ಯಾಂಕ್ ಪಕ್ಕದಲ್ಲಿರುವ ಉತ್ತರಕನ್ನಡ ಸಾವಯವ ಒಕ್ಕೂಟದ ಕಚೇರಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು ಜೂನ್ 29 ರಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆ ನೆರವೇರಲಿದೆ. ಮೇಳದಲ್ಲಿ ಹಲಸಿನ ಮತ್ತು ಹಲಸಿನ ಬೀಜದ ವಿಶೇಷ ಖಾದ್ಯ ಸ್ಪರ್ಧೆ ನಡೆಯಲಿದ್ದು, ಆಸಕ್ತ ಮಹಿಳೆಯರು ಭಾಗವಹಿಸಬಹುದಾಗಿದೆ. ಹಲಸಿನ ಸಾಂಪ್ರದಾಯಿಕ ವಿವಿಧ ಖಾದ್ಯಗಳ ಕ್ಯಾಂಟಿನ್ ಇರಲಿದ್ದು ರುಚಿಕರ ತಿಂಡಿ ತಿನಿಸುಗಳು ಮಾರಾಟಕ್ಕೆ ಲಭ್ಯವಿರಲಿದೆ. ವಿವಿಧ ತಳಿಯ ಹಲಸಿನ ಸಸಿಗಳ ಪ್ರದರ್ಶನ ಮತ್ತು ಮಾರಾಟವನ್ನೂ ಆಯೋಜಿಸಲಾಗಿದೆ. ವನಸ್ತ್ರೀ ಸಂಸ್ಥೆಯ ಮೂಲಕ ಕೈ ತೋಟದಲ್ಲಿ ಬೆಳೆಸಿದ ನಾಟಿ ತರಕಾರಿ ಬೀಜಗಳ ಪ್ರದರ್ಶನ ಹಾಗೂ ಮಾರಾಟವೂ ಪ್ರಮುಖ ಆಕರ್ಷಣೆಯಾಗಿರಲಿದೆ. ಸೆಲ್ಕೊ ಫೌಂಡೇಶನ್ ಹಾಗೂ ಸೆಲ್ಕೊ ಸೋಲಾರ್ ವತಿಯಿಂದ ಸೋಲಾರ್ ಆಧಾರಿತ ಆಹಾರ ಸಂಸ್ಕರಣಾ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಇರಲಿದ್ದು, ಉದ್ದಿಮೆದಾರರಿಗೆ ಅಗತ್ಯವಿರುವ ಸರ್ಕಾರದ ವಿವಿಧ ಯೋಜನೆಗಳು ಸಹಾಯಧನ ವಿವರವನ್ನೂ ಹಂಚಿಕೊಳ್ಳಲು ಉದ್ದೇಶಿಲಾಗಿದೆ. ಹಲಸಿನ ಮೌಲ್ಯವರ್ಧಿತ ಆಹಾರ ಉತ್ಪನ್ನ ತಯಾರಿಸುತ್ತಿರುವ ಜಿಲ್ಲೆಯ ಸ್ವಸಹಾಯ ಸಂಘ ಹಾಗೂ ಉದ್ದಿಮೆದಾರರು, ಅಧಿಕಾರಿಗಳು ಹಾಗೂ ವಿಜ್ಞಾನಿಗಳೊಂದಿಗೆ ವಿಚಾರ ಸಂಕಿರಣ ನಡೆಯಲಿದೆ. ಮೇಳದಲ್ಲಿ ಮಲೆನಾಡಿನ ಮೌಲ್ಯವರ್ಧಿತ ಆಹಾರ ಉತ್ಪನ್ನಗಳಿಗೆ ಮಾತ್ರ ಮಾರಾಟ ಮಾಡಲು ಅವಕಾಶವಿದೆ. ಹಲಸಿನ ಹಾಗೂ ಹಲಸಿನ ಬೀಜದ ಖಾದ್ಯ ಸ್ಪರ್ಧೆಗೆ ಹೆಸರು ನೊಂದಾಯಿಸಿಕೊಳ್ಳಲು ಆಸಕ್ತರಿಗೆ ಜೂನ್ 27ರ ತನಕ ಅವಕಾಶವಿದ್ದು ಸಂಸ್ಥೆಗೆ ಭೆಟ್ಟಿ ನೀಡಬಹುದು ಅಥವಾ 8660553054 ದೂರವಾಣಿ ಸಂಖ್ಯೆಗೆ ಕರೆಮಾಡಬಹುದೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರೈತರು ಎಂದಿಗೂ ಎದೆಗುಂದಬೇಡಿ

ಜಿಲ್ಲಾಡಳಿತ ರೈತರ ಸಂಪೂರ್ಣ ನೆರವಿಗಿದೆ ಎಂದು ಜಿಲ್ಲಾಧಿಕಾರಿ ಭರವಸೆ

ಕಾರವಾರ: ಎಲ್ಲಾ ಸಮಸ್ಯೆಗಳಿಗೆ ಸಾವು ಒಂದೇ ಅಂತಿಮ ಪರಿಹಾರವಲ್ಲ. ದೇಶಕ್ಕೆ ಅನ್ನ ನೀಡುವ ರೈತರು ಯಾವುದೇ ಕಾರಣಕ್ಕೂ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳಬಾರದು, ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಜಿಲ್ಲಾಡಳಿತ ಸಂಪೂರ್ಣ ನೆರವು ನೀಡಲಿದೆ ಎಂದು ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ಹೇಳಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರೈತರ ಆತ್ಮಹತ್ಯೆ ಪ್ರಕರಣ ಕುರಿತ ವಿಡಿಯೋ ಕಾನ್ಫರೆನ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೇಶದ ಬೆನ್ನೆಲುಬಾದ ರೈತರು ಯಾವುದೇ ಕಾರಣಗಳಿಗೂ ಆತ್ಮಹತ್ಯೆ ಮಾಡಿಕೊಳ್ಳಬಾರದು. ಜಿಲ್ಲೆಯಲ್ಲಿ 2019 ರಿಂದ 2023-24ನೇ ಸಾಲಿನ ವರೆಗೆ 43 ರೈತರು ಆತ್ಮಹತ್ಯೆ ಮಾಡಿ ಕೊಂಡಿದ್ದು, ಮುಂಡಗೋಡ ತಾಲ್ಲೂಕಿನಲ್ಲಿ ಹೆಚ್ಚಿನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಂಡರೆ ಅವರ ಕುಟುಂಬ ಸಾಕಷ್ಟು ಸಂಕಷ್ಟ ಅನುಭವಿಸುವುದರಿಂದ ರೈತರು ಯಾವುದೇ ಕಾರಣಕ್ಕೂ ಆತ್ಮಹತ್ಯೆ ಹಾದಿ ತುಳಿಯಬಾರದು ಎಂದರು.

ಸರ್ಕಾರ ಮತ್ತು ಜಿಲ್ಲಾಡಳಿತ ಸದಾ, ರೈತರೊಂದಿಗಿದ್ದು, ರೈತರಿಗೆ ಯಾವುದೇ ಸಮಸ್ಯೆ ಎದುರಾದರೆ ಸ್ಥಳೀಯ ತಹಶೀಲ್ದಾರರಿಗೆ, ಜಿಲ್ಲಾಡಳಿತಕ್ಕೆ ಅಥವಾ ಜಿಲ್ಲಾ ಉಚಿತ ಸಹಾಯವಾಣಿ ದೂ.ಸಂ: 1950ಗೆ ಕರೆ ಮಾಡಿ ಗಮನಕ್ಕೆ ತಂದಲ್ಲಿ ರೈತರ ಸಮಸ್ಯೆಗಳನ್ನು ಬಗೆಹರಿಸಲು ಜಿಲ್ಲಾಡಳಿತ ಸದಾ ಸಿದ್ದವಿದೆ ಎಂದರು.

ಬ್ಯಾಂಕ್‌ಗಳು ರೈತರಿಗೆ ನೀಡಿರುವ ಸಾಲ ವಸೂಲಿಗೆ ಸಂಬಂಧಿಸಿದಂತೆ ರೈತರು ಆರ್ಥಿಕವಾಗಿ ಸಬಲವಾಗುವರೆಗೂ ಸಾಲ ಪಾವತಿಸಲು ಒತ್ತಡ ಹಾಗೂ ಕಿರುಕುಳ ನೀಡದಂತೆ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಲಾಗಿದ್ದು, ಜಿಲ್ಲೆಯ ರೈತರು ಯಾವುದೇ ಕಾರಣಕ್ಕೂ ಎದೆಗುಂದದೇ ಧೈರ್ಯವಾಗಿರುವಂತೆ ತಿಳಿಸಿದ ಜಿಲ್ಲಾಧಿಕಾರಿ, ರೈತರ ಕುಟುಂಬದ ಜೊತೆ ಸರ್ಕಾರ ಮತ್ತು ಜಿಲ್ಲಾಡಳಿತವಿದ್ದು, ಯಾವುದೇ ರೀತಿಯ ಸಹಾಯ ಬೇಕಾದಲ್ಲಿ ರೈತರು ಮುಕ್ತವಾಗಿ ತಹಶೀಲ್ದಾರ ಮೂಲಕ ಅರ್ಜಿ ಸಲ್ಲಿಸಿದ್ದಲ್ಲಿ ಆದ್ಯತೆ ಮೇಲೆ ಅಗತ್ಯ ಸಹಕಾರ ನೀಡಲಾಗುತ್ತದೆ ಎಂದರು.

> ರೈತರು ಆತ್ಮಹತ್ಯೆಯ ಸಂದರ್ಭದಲ್ಲಿ ಪಂಚನಾಮೆ ವರದಿಯ ಜೊತೆ ರೈತರ ಕುಟುಂಬದ ಬೇಡಿಕೆ ವರದಿಯನ್ನು ಲಗತ್ತಿಸಬೇಕು. ಕಂದಾಯ, ತೋಟಗಾರಿಕೆ ಹಾಗೂ ಕೃಷಿ ಇಲಾಖೆಗಳು ರೈತರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕು.
> –ಗಂಗೂಬಾಯಿ ಮಾನಕರ, ಜಿಲ್ಲಾಧಿಕಾರಿ

ಈಗಾಗಲೇ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಗಳಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳನ್ನು ವಿತರಿಸಲಾಗಿದ್ದು, ರೈತರು ಮರಣ ಹೊಂದಿದ ನಂತರ ರೈತನ ಪತ್ನಿಗೆ ಪ್ರತಿ ತಿಂಗಳು ರೂ. 2 ಸಾವಿರ ಮಾಸಾಶನ ಹಾಗೂ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳು ಕುಟುಂಬಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ತಲುಪಿಸಲಾಗಿದೆಯೇ ಎಂಬುದರ ಬಗ್ಗೆ ಆತ್ಮಹತ್ಯೆ ಮಾಡಿಕೊಂಡ ಕುಟುಂಬ ಸದಸ್ಯರಿಂದ ಖಾತರಿಪಡಿಸಿಕೊಂಡ ಜಿಲ್ಲಾಧಿಕಾರಿ, ಪ್ರತಿ ಮಾಹೆಯಾನ ಮಾಸಾಶನ ರೈತರ ಪತ್ನಿಯ ಖಾತೆಗೆ ಜಮಾವಾಗಿರುವ ಬಗ್ಗೆ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಹಾಗೂ ಉಚಿತ ವಿದ್ಯಾಭ್ಯಾಸ ವ್ಯವಸ್ಥೆ ಕಲ್ಪಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಎಲ್ಲಾ ರೈತರು ತಮ್ಮ ಜಮೀನಿನ ಪಹಣಿಗೆ ಆಧಾರ್ ಜೋಡಣೆ ಮಾಡಿಕೊಳ್ಳುವ ಮೂಲಕ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳ ಲಾಭ ಪಡೆಯಬಹುದಾಗಿದೆ ಎಂದರು.

ಇತ್ತೀಚಿಗೆ ಮಾನಸಿಕ ಖಿನ್ನತೆ, ಆರ್ಥಿಕ ಒತ್ತಡ, ಸಾಲಭಾದೆ ಮುಂತಾದ ಕಾರಣಗಳಿಂದ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದ ಉಚಿತ ಸಹಾಯವಾಣಿ ದೂ. ಸಂ:14416 ಗೆ ಕರೆ ಮಾಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ರೈತರು ಕೂಡ ಈ ದೂ.ಸಂಖ್ಯೆಗೆ ಕರೆ ಮಾಡಿ ತಮ್ಮ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪ್ರಕಾಶ ರಜಪೂತ, ಜಂಟಿ ಕೃಷಿ ನಿರ್ದೇಶಕ ಹೊನ್ನಪ್ಪ ಗೌಡ, ಜಿಲ್ಲೆಯ ಎಲ್ಲಾ ತಾಲೂಕುಗಳ ತಹಸೀಲ್ದಾರರು, ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದ ಸದಸ್ಯರು ಇದ್ದರು.

ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಸಹಾಯಕಾರಿ: ಡಿಸಿ

ಕಾರವಾರ: ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಯೋಗ ಅತ್ಯಂತ ಸಹಾಯಕಾರಿಯಾಗಿದ್ದು, ಪ್ರತಿಯೊಬ್ಬರು ತಮ್ಮ ದೈನಂದಿನ ಜೀವನ ಶೈಲಿಯಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ್ ಹೇಳಿದರು.

ಅವರು ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಆಯುಷ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್, ಆರೋಗ್ಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ, ಶಿಕ್ಷಣ ಇಲಾಖೆ, ನಗರಸಭೆ ಎನ್.ಸಿ.ಸಿ, ಎನ್.ಎಸ್.ಎಸ್, ರೆಡ್ ಕ್ರಾಸ್, ರೋಟರಿ ಕ್ಲಬ್ ಜಿಲ್ಲಾ ನೌಕರರ ಸಂಘ ಹಾಗೂ ವಿವಿಧ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 10 ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜಿಲ್ಲಾ ಅಧಿಕಾರಿಗಳ ಕಚೇರಿಯ ಆವರಣದಲ್ಲಿ ಆಯೋಜಿಸಲಾದ ಯೋಗ ನಡಿಗೆ ಜಾಥಾಕ್ಕೆ ಹಸಿರು ನಿಶಾನೆ ತೋರಿಸಿ ಮಾತನಾಡಿದರು.

ಪತಂಜಲಿ ಮಹರ್ಷಿ ಗಳು ಯೋಗದ ಮಹತ್ವವನ್ನು ಕ್ರಿ.ಶ 5 ಶತಮಾನದಲ್ಲಿ ತಿಳಿಸಿಕೊಟ್ಟರು. ಮನುಷ್ಯನಿಗೆ ಸ್ವಾಭಾವಿಕವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಇರುವಂತ ದೊಡ್ಡ ಔಷಧಿ ಯೋಗವಾಗಿದೆ. ಹಿಂದಿನ ಕಾಲದಲ್ಲಿ ಯೋಗ ಮತ್ತು ಧ್ಯಾನವನ್ನು ಮಾಡಿಕೊಂಡು ಆಸ್ಪತ್ರೆಗೆ ಹೋಗದೆ ನೂರು ವರ್ಷಗಳ ಕಾಲ ಆರೋಗ್ಯ ವಂತರಾಗಿ ಜೀವನ ನಡೆಸುತ್ತಿದ್ದರು. ಇಂದಿನ ಕಾಲದಲ್ಲಿ ಆಸ್ಪತ್ರೆಗೆ ಹೋಗದೇ ಇರುವವರು ಯಾರು ಇಲ್ಲ. ಆದ್ದರಿಂದ ಯೋಗವನ್ನು ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತಗೊಳಿಸದೇ, ಪ್ರತಿನಿತ್ಯ ಮಾಡುವುದರ ಮೂಲಕ ಆರೋಗ್ಯದ ಸ್ವಾಸ್ಥವನ್ನು ಕಾಪಾಡಿಕೊಳ್ಳಬೇಕು ಎಂದರು.

ಮನುಷ್ಯನಿಗೆ ನೈಸರ್ಗಿಕವಾಗಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ದೊಡ್ಡ ಔಷಧಿ ಯೋಗ ಎಂದರೇ ತಪ್ಪಿಲ್ಲಾ, ಯೋಗ ದಿನಾಚರಣೆಯ ಅಂಗವಾಗಿ ಜಿಲ್ಲೆಯಲ್ಲಿ 10 ದಿವಸದ ಯೋಗೋತ್ಸವ ಆಚರಣೆಯೊಂದಿಗೆ ಯೋಗದ ಮಹತ್ವವನ್ನು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ, ಸಾರ್ವಜನಿಕರಿಗೆ ಆಯುಷ್ ಇಲಾಖೆ ವತಿಯಿಂದ ಯೋಗಭ್ಯಾಸವನ್ನು ಹೇಳಿಕೊಡಲಾಗುತ್ತಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಲಲಿತಾ ಶೆಟ್ಟಿ ಹೇಳಿದರು. ಯೋಗ ನಡಿಗೆ ಜಾಥಾವು ಜಿಲ್ಲಾಧಿಕಾರಿ ಕಚೇರಿಯಿಂದ ಪ್ರಾರಂಭಗೊ0ಡು ಕೋರ್ಟ್ ರಸ್ತೆ, ಸುಭಾಸ್ ಸರ್ಕಲ್, ಸವಿತಾ ಸರ್ಕಲ್ ಮೂಲಕ ಜಿಲ್ಲಾ ಆಯುಷ್ ಇಲಾಖೆಯಲ್ಲಿ ಮುಕ್ತಾಯಗೊಂಡಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪ್ರಕಾಶ ರಜಪೂತ ಭಾಗವಹಿಸಿದ್ದರು.

ಪೆಟ್ರೋಲ್ ಬೆಲೆ ಏರಿಕೆ ಬಿಜೆಪಿಯಿಂದ ಪ್ರತಿಭಟನೆ

ಮುಂಡಗೋಡ: ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಮಾಡಿದ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಮುಂಡಗೋಡ ಮಂಡಲದ ವತಿಯಿಂದ ಗುರುವಾರ ಪಟ್ಟಣದಲ್ಲಿ ಚಕ್ಕಡಿ ಎತ್ತಿನ ಗಾಡಿ ಮೇಲೆ ಬೈಕ್ ಪ್ರದರ್ಶಿಸಿ, ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಚಕ್ಕಡಿ ಗಾಡಿ ಮೇಲೆ ಬೈಕ್ ಹೇರಿಕೊಂಡು ಆಗಮಿಸಿದ ಬಿಜೆಪಿ ಕಾರ್ಯಕರ್ತರು ಪಟ್ಟಣದ ಶಿವಾಜಿ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಟೈರ್‌ಗೆ ಬೆಂಕಿ ಹಚ್ಚುವ ಮೂಲಕ ರಸ್ತೆ ತಡೆದು ಆಕ್ರೋಷ ಹೊರಹಾಕಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ತಾಲೂಕಾ ಬಿಜೆಪಿ ಉಪಾಧ್ಯಕ್ಷೆ ರೇಖಾ ಅಂಡಗಿ ಮಾತನಾಡಿ, ರಾಜ್ಯ ಸರ್ಕಾರ ಬಿಟ್ಟಿ ಭಾಗ್ಯಗಳಿಗೆ ಹಣ ಹೊಂದಿಸಲಾಗದೆ ತೈಲ ಸೇರಿದಂತೆ ದಿನ ಬಳಕೆ ವಸ್ತುಗಳ ಬೆಲೆ ಏರಿಸಿ ಜನಸಾಮಾನ್ಯರ ಮೇಲೆ ಹೊರೆ ಹಾಕುತ್ತಿದೆ. ಇದರಿಂದ ಬಡ ಹಾಗೂ ಮದ್ಯಮ ವರ್ಗದ ಜನರು ಬದುಕು ಸಾಗಿಸುವುದು ಕಷ್ಟಸಾಧ್ಯವಾಗುತ್ತಿದೆ. ಹಾಗಾಗಿ ತಕ್ಷಣ ವಸ್ತುಗಳ ದರವನ್ನು ಇಳಿಸಬೇಕು ಎಂದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಎಲ್.ಟಿ ಪಾಟೀಲ ಮಾತನಾಡಿ, ತಮಗೆ ಬೇಕಾದಂತೆ ತೈಲ ಬೆಲೆ ಏರಿಸಿರುವ ರಾಜ್ಯ ಸರ್ಕಾರ ಜನಸಾಮಾನರಿಗೆ ತೊಂದರೆ ನೀಡುತ್ತಿದೆ. ತಕ್ಷಣ ದರ ಇಳಿಸಬೇಕು. ಇಲ್ಲದಿದ್ದರೆ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಹೇಳಿದರು.

ನೀರಿನ ಗುಣಮಟ್ಟದ ಕುರಿತು ಜಾಗೃತಿ ವಹಿಸಿ

ಕಾರವಾರ: ಆರೋಗ್ಯದ ಹಿತದೃಷ್ಟಿಯಿಂದ ಪ್ರತಿಯೊಂದು ಗ್ರಾಮ ಪಂಚಾಯತ್ ಗಳಲ್ಲಿಯೂ ಜಾಗೃತಿ ವಹಿಸಿ ನೀರಿನ ಗುಣಮಟ್ಟ ಪರಿಶೀಲನೆ ಹಾಗೂ ಆರೋಗ್ಯವಾಗಿರಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್ ಹೆಗಡೆ ಸೂಚನೆ ನೀಡಿದರು.

ಅವರು ಗುರವಾರ ಜಿಲ್ಲಾ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ತಾಲೂಕು ಪಂಚಾಯತ್ ಶಿರಸಿ ಇವರ ಸಹಯೋಗದಲ್ಲಿ ನಡೆದ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆ ಹಾಗೂ ಅಂದಾಜು ಪತ್ರಿಕೆ ಸಿದ್ದಪಡಿಸುವ ಬಗ್ಗೆ ತಾಂತ್ರಿಕ ತರಬೇತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ತರಬೇತಿಯಲ್ಲಿ ಆರೋಗ್ಯ ನೀರಿನ ಗುಣಮಟ್ಟ ಪರೀಕ್ಷೆ ಮತ್ತು ಕಾರ್ಯ ವಿಧಾನ, ನೀರಿನ ಮೂಲದಿಂದ ಹರಡುವ ಸಾಂಕ್ರಮಿಕ ರೋಗಗಳ ದುಷ್ಪರಿಣಾಮಗಳು ಮತ್ತು ಮಾರ್ಗೋಪಾಯಗಳು, ನೀರಾವರಿ ಕಾಮಗಾರಿಗಳ ಎಸ್ಟಿಮೇಟ್ ಅಂದಾಜು ಪತ್ರಿಕೆ ಸಿದ್ದಪಡಿಸುವ ಕುರಿತು, ವಿಶ್ವ ಬ್ಯಾಂಕ್ ನೆರವು ಯೋಜನೆಯಡಿಯಲ್ಲಿ ಅಧಿಕಾರಿಗಳ, ಸಿಬ್ಬಂದಿ ಜವಾಬ್ದಾರಿ, ಆಧಾರ್ ಕಾರ್ಡ್ ಸಂಗ್ರಹ, ಹರ್ ಘರ್ ಜಲ್ ಘೋಷಣೆ, ಸ್ವಚ್ಛ ಭಾರತ್ ಮಿಷನ್ ಯೋಜನೆಯ ಮಾದರಿ ಗ್ರಾಮ ಘೋಷಣೆ, ಅಂತರ್ಜಾಲ ಮರುಪೂರಣ ವಿಧಾನಗಳು, ಮತ್ತು ಮಳೆ ನೀರಿನ ಕೊಯ್ಲು ತರಬೇತಿಯನ್ನು ನೀಡುವುದರ ಜೊತೆಗೆ ಚರ್ಚೆ ನಡೆಸಲಾಯಿತು.

ತಾಲೂಕು ಪಂಚಾಯತ್ ವ್ಯವಸ್ಥಾಪಕ ಸುಬ್ರಾಯ ಭಟ್, ತಾ.ಪಂ. ಸಹಾಯಕ ನಿರ್ದೇಶಕ ಬಿ.ವೈ. ರಾಮಮೂರ್ತಿ, ಜಿಲ್ಲಾ ಪಂಚಾಯತ ಎಸ್‌ಬಿಎಮ್ ಸಂಯೋಜಕ ಸೂರ್ಯನಾರಾಯಣ ಭಟ್, ಜೆಜೆಎಮ್ ಸಂಯೋಜಕ ವೆಂಕಟೇಶ್ ನಾಯ್ಕ, ತಾಲೂಕಾ ವೈದ್ಯಾಧಿಕಾರಿಗಳಾದ ಡಾ. ವಿನಾಯಕ ಭಟ್, ಡಾ. ಭಾರತಿ ಹೊಸಮನಿ, ಸಿಡಿಪಿಒ ವೀಣಾ ಶಿರ್ಸಿಕರ್ ಹಾಗೂ ಜಿಲ್ಲಾ ಮತ್ತು ತಾಲೂಕು, ಗ್ರಾಮ ಪಂಚಾಯತ್ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.

ತೈಲ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

12 ಮಂಡಳಗಳಿಂದ ಸಂಚಾರ ತಡೆ | ರಾಜ್ಯ ಸರಕಾರದ ವಿರುದ್ಧ ಘೋಷಣೆ | ಜನರಿಗೆ ಬರೆ ಎಳೆದ ಕಾಂಗ್ರೆಸ್ ಕಾಗೇರಿ

ಶಿರಸಿ: ಭಾರತೀಯ ಜನತಾ ಪಾರ್ಟಿ ಶಿರಸಿ ನಗರ ಮತ್ತು ಗ್ರಾಮೀಣ ಮಂಡಲಗಳ ವತಿಯಿಂದ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಖಂಡಿಸಿ ಗುರವಾರ ಕಾಂಗ್ರೆಸ್ ಸರ್ಕಾರದ ವಿರುದ್ಧ ನಗರದ ಐದು ರಸ್ತೆ ವೃತ್ತದಲ್ಲಿ ಸಂಚಾರ ತಡೆ ಮಾಡಿ ರಾಜ್ಯ ಸರ್ಕಾರದ ದುರಾಡಳಿತವನ್ನು ವಿರೋಧಿಸುವ ಮೂಲಕ ಬೃಹತ್ ಪ್ರತಿಭಟನೆಯನ್ನು ಮಾಡಲಾಯಿತು.

ಶಿರಸಿ ನಗರದ ಐದುರಸ್ತೆ ವೃತ್ತದಲ್ಲಿ ಗುರುವಾರ ಬಿಜೆಪಿಯಿಂದ ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ವಹಿಸಿದ್ದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿ ರಾಜ್ಯ ಕಾಂಗ್ರೆಸ್ ಸರ್ಕಾರವು ಎಲ್ಲಾ ವಸ್ತುಗಳ ಬೆಲೆ ಏರಿಕೆ, ನೋಂದಣಿ - ಮುದ್ರಾಂಕ ಶುಲ್ಕ ಹೆಚ್ಚಳ ಮಾಡಿತ್ತು, ಈಗ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿ ಜನರಿಗೆ ಬರೆ ಎಳೆದಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಕಿಡಿಕಾರಿದರು.

ಎಲ್ಲ ರೀತಿಯಲ್ಲಿ ಬೆಲೆ ಏರಿಕೆಯ ಪರಿಣಾಮ ಕಾಣುತ್ತಿದ್ದೇವೆ. ಎಲ್ಲರಿಗೂ ಹೊರೆ ಆಗುವ ಕಾರಣಕ್ಕೆ ಬೆಲೆ ಏರಿಕೆಯ ನಿರ್ಧಾರವನ್ನು ಹಿಂತೆಗೆದು ಕೊಳ್ಳಬೇಕು ಎಂದು ಆಗ್ರಹಿಸಿದ ಅವರು, ಸರ್ಕಾರ ಬೆಲೆ ಇಳಿಕೆ ಮಾಡದೆ ಹೋದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರ ಗೊಳಿಸುತ್ತೇವೆ ಎಂದು ಎಚ್ಚರಿಸಿದರು.

ನಂದನ ಸಾಗರ ಮತ್ತು ಜಿಲ್ಲಾ ವಕ್ತಾರ ಸದಾನಂದ ಭಟ್ ಮಾತನಾಡಿ ಬೆಲೆ ಏರಿಕೆಯನ್ನು ಖಂಡಿಸಿದರು.

ಐದು ರಸ್ತೆ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಲಾಯಿತು, ಟೈರ್ ಗೆ ಬೆಂಕಿ ಹಚ್ಚಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಲಾಯಿತು.

> ಬೆಲೆ ಏರಿಕೆಯಿಂದ ಸರಕು ಸಾಗಾಟದ ಬೆಲೆಯೂ ಏರಿಕೆಯಾಗಿದ್ದು, ಬೆಲೆ ಏರಿಕೆ ಕೇವಲ ಬಿಜೆಪಿಗೆ ಮಾತ್ರವಾಗಿಲ್ಲ, ಕಾಂಗ್ರೆಸ್ ಗೂ ಬೆಲೆ ಏರಿಕೆಯಾಗಿದೆ. ಇದರಿಂದ ಜನ ಸಾಮಾನ್ಯರು ಜೀವನ ಮಾಡಲು ಕಷ್ಟವಾಗಿದೆ. ಕೂಡದೇ ಸರಕಾರ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು.
> –ಶ್ರೀನಿವಾಸ ಹೆಬ್ಬಾರ ಅಧ್ಯಕ್ಷರು, ಜೀವಜಲ ಕಾರ್ಯಪಡೆ ಶಿರಸಿ

ಶಿರಸಿ ನಗರ ಮಂಡಲದ ಅಧ್ಯಕ್ಷ ಆನಂದ ಸಾಲೇರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಪ್ರೇಮಕುಮಾರ ನಾಯ್ಕ, ಗಣಪತಿ ನಾಯ್ಕ, ಆರ್. ಡಿ. ಹೆಗಡೆ, ಶಿಲ್ಪಾ ನಾಯ್ಕ, ನಗರ ಸಭಾ ಸದಸ್ಯರುಗಳು, 200ಕ್ಕೂ ಮೀರಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.133/2024

ಅರ್ಜಿದಾರಳು : ಶ್ರೀಮತಿ ನಿಟ್ಟೂರು ಗಿರಿಜಮ್ಮ
ವಿರುದ್ಧ
ಎದುರುದಾರರು: ಮಾನ್ಯ ಜನನ ಮರಣ ಮತ್ತು ನೊಂದಣಿ ಅಧಿಕಾರಿಗಳು ಪುರಸಭೆ ಕಾರ್ಯಾಲಯ ಹರಪನಹಳ್ಳಿ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲಿನ ಪ್ರಕಣದಲ್ಲಿ ಅರ್ಜಿದಾರಳಾದ ನಿಟ್ಟೂರು ಗಿರಿಜಮ್ಮ ತಂದೆ ದಿ. ಕುಶಾಲಮ್ಮ ,ಕಡತಿ ಗ್ರಾಮ, ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲಾ ಆದ ಇವರ ಗಂಡನ ತಂದೆಯಾದ ಅಂದರೆ ನನಗೆ ಮಾವನಾದ ನಿಟ್ಟೂರು ಮುದಿ ಮಲ್ಲಪ್ಪ ತಂದೆ ದಿ.ಮಲ್ಲಪ್ಪ ಇವರು ದಿನಾಂಕ 19.06.1969 ರಂದು ಕಡತಿ ಗ್ರಾಮದಲ್ಲಿ ಅರ್ಜಿದಾರಳ ಮನೆಯಲ್ಲಿ ಮೃತ ಹೊಂದಿರುವ ಬಗ್ಗೆ ಅವರ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ಪ್ರಕಣದ ದಿನಾಂಕ: 12.07.2024 ರಂದು ಇರುತ್ತದೆ. ಆದ್ದರಿಂದ ಸದರಿ ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರು ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ.ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ, ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರನ ಪರ ವಕೀಲರು
ಶ್ರೀ ರಾಮಚಂದ್ರ ನಾಯ್ಕ
ದಿನಾಂಕ:18.06.2024

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.116/2024

ಅರ್ಜಿದಾರರು : ಶ್ರೀ ದೀವಿಟಿಗಿ ಹಾಲಪ್ಪ ತಂದೆ ಲೇಟ್ ಪರಸಪ್ಪ ವಯಸ್ಸು:56 ವರ್ಷ, ವೃತ್ತಿ ವ್ಯವಸಾಯ, ವಾಸ: ನಿಚ್ಚಾಪುರ ಗ್ರಾಮ, ಹರಪನಹಳ್ಳಿ, ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು,ಕಛೇರಿ ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರನ ತಂದೆಯಾದ ಶ್ರೀ ದೀವಿಟಿಗಿ ಪರಸಪ್ಪ ತಂದೆ ಲೇಟ್ ರಾಮಪ್ಪ ಇವರು ದಿನಾಂಕ: 30. 05.1995 ರಂದು ಹರಪನಹಳ್ಳಿ ತಾಲೂಕು ಕಸಬಾ ಹೋಬಳಿ ನಿಚ್ಚಾಪುರ ಗ್ರಾಮದ ಅರ್ಜಿದಾರನ ಸ್ವ -ಗೃಹದಲ್ಲಿ ಮರಣ ಹೊಂದಿದ್ದು , ಅವರ ಮರಣ ಪತ್ರ ಕೋರಿ ಹರಪನಹಳ್ಳಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ಪ್ರಕಣದ ದಿನಾಂಕ: 06.07.2024 ರಂದು ಇರುತ್ತದೆ. ಆದ್ದರಿಂದ ಸದರಿ ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರು ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ.ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ, ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರನ ಪರ ವಕೀಲರು
ಶ್ರೀ ಎ.ಎಲ್ ರೇವಣಸಿದ್ದಪ್ಪ
ದಿನಾಂಕ: 18.06.2024

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.117/2024

ಅರ್ಜಿದಾರರು : ಶ್ರೀ ದೀವಿಟಿಗಿ ಹಾಲಪ್ಪ ತಂದೆ ಲೇಟ್ ಪರಸಪ್ಪ ವಯಸ್ಸು:56 ವರ್ಷ, ವೃತ್ತಿ ವ್ಯವಸಾಯ, ವಾಸ: ನಿಚ್ಚಾಪುರ ಗ್ರಾಮ, ಹರಪನಹಳ್ಳಿ, ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು,ಕಛೇರಿ ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರನ ತಾಯಿಯಾದ ಶ್ರೀಮತಿ ದೀವಿಟಿಗಿ ಕೆಂಚಮ್ಮ ಗಂಡ ಲೇಟ್ ಪರಸಪ್ಪ ಇವರು ದಿನಾಂಕ: 02. 09.2022 ರಂದು ಹರಪನಹಳ್ಳಿ ತಾಲೂಕು ಕಸಬಾ ಹೋಬಳಿ ನಿಚ್ಚಾಪುರ ಗ್ರಾಮದ ಅರ್ಜಿದಾರನ ಸ್ವ -ಗೃಹದಲ್ಲಿ ಮರಣ ಹೊಂದಿದ್ದು , ಅವರ ಮರಣ ಪತ್ರ ಕೋರಿ ಹರಪನಹಳ್ಳಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ಪ್ರಕಣದ ದಿನಾಂಕ: 06.07.2024 ರಂದು ಇರುತ್ತದೆ. ಆದ್ದರಿಂದ ಸದರಿ ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರು ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ.ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ, ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರನ ಪರ ವಕೀಲರು
ಶ್ರೀ ಎ.ಎಲ್ ರೇವಣಸಿದ್ದಪ್ಪ
ದಿನಾಂಕ: 18.06.2024

ದೇವರ ಅವಾರಿ ಜುಲೈ 10ಕ್ಕೆ

ಅಂಕೋಲಾ: ತಾಲೂಕಿನ ಮಂಜಗುಣಿಯಲ್ಲಿ ಜುಲೈ 9 ರಂದು ನಡೆಯ ಬೇಕಿದ್ದ ಶ್ರೀ ತಾರಿಜಟಕ ದೇವರ ಅವಾರಿಯು ಅನಿವಾರ್ಯ ಕಾರಣ ದಿಂದ ಜುಲೈ 10ಕ್ಕೆ ನಿಗದಿಪಡಿಸಿದ್ದಾರೆ. ಪ್ರತಿವರ್ಷ ಜೂನ್ ಅಥವಾ ಜುಲೈನಲ್ಲಿ ನಡೆಯುವ ಈ ಹಬ್ಬಕ್ಕೆ ಸಾವಿರಾರು ಭಕ್ತರು ವಿವಿಧ ಭಾಗಗಳಿಂದ ಆಗಮಿಸಿ ದೇವರ ದರ್ಶನ ಪಡೆಯುತ್ತಾರೆ. ಈ ದೇವರು ಗಂಗಾವಳಿ ನದಿಯಂಚಿಗೆ ಇರುವುದರಿಂದ ಮಂಜಗುಣಿ, ಗಂಗಾವಳಿ, ಹನೇಹಳ್ಳಿ, ಬಂಕಿಕೊಡ್ಲ ಇನ್ನು ಅಂಕೋಲಾದ ವಿವಿಧ ಗ್ರಾಮದವರು ಕೂಡ ಇಲ್ಲಿಗೆ ಆಗಮಿಸಿ ದೇವರ ದರ್ಶನ ಪಡೆಯುತ್ತಾರೆ.

CHANGE OF NAME

I, **REHANBEGUM SHAIKH** (Old Name) have changed my name and shall hereafter be known as **RIHANA BEGUM SHAIKH** (New Name) #9, Jumma Masjid Galli, Pendar Oni, Dharwad, vide affidavit sworn before notary Venkatesh S.Naik at Dharwad on 19-06-2024.

ನನ್ನ ಜವಾಬ್ದಾರಿ ಹೆಚ್ಚಿದೆ: ಸಂಸದ ಕಾಗೇರಿ

ಮುಂಡಗೋಡ: ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಮಂತ್ರಿಯಾಗಬೇಕೆಂಬ ಜನರ ಹಠ ಮತ್ತು ಸ್ವಾಭಿಮಾನದ ಮತದಿಂದ ಗೆದ್ದಿರುವ ನನ್ನ ಜವಾಬ್ದಾರಿ ಹೆಚ್ಚಿದ್ದು, ಕ್ಷೇತ್ರದ ಜನರು ನನಗೆ ಹೇಳಲಿ ಬಿಡಲಿ ಕ್ಷೇತ್ರದ ಅಭಿವೃದ್ಧಿ ಕೆಲಸವನ್ನು ಮಾಡೇ ಮಾಡುತ್ತೇನೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಬುಧವಾರ ಸಂಜೆ ಪಟ್ಟಣದ ನಗರಸಭಾ ಭವನದಲ್ಲಿ ಜರುಗಿದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳನ್ನು ಕರೆಸಿ ಪ್ರಚಾರ ಮಾಡಿ ಹಣ ಬಲದಿಂದ ಮತ ಪಡೆಯಲು ಹೊರಟಿದ್ದವರಿಗೆ ಮುಂಡಗೋಡಿನ ಸ್ವಾಭಿಮಾನಿ ಜನ ರಾಷ್ಟ್ರೀಯ ವಿಚಾರವನ್ನಿಟ್ಟುಕೊಂಡು ಬಿಜೆಪಿಗೆ ಮತ ಚಲಾಯಿಸಿ ಕಾಂಗ್ರೆಸ್ ತಕ್ಕ ಉತ್ತರ ನೀಡಿದ್ದಾರೆ. ಮತದಾರರು ಯಾವುದೇ ಆಸೆ ಆಮಿಷಕ್ಕೊಳಗಾಗದೆ ಬಿಜೆಪಿಯನ್ನು ಬೆಂಬಲಿಸಿದ್ದಾರೆ ಎಂದರು.

ಪಕ್ಷದಲ್ಲಿದ್ದ ಜೊಳ್ಳು ಕಾಳು ಹೋಗಿದ್ದು, ಗಟ್ಟಿ ಕಾರ್ಯಕರ್ತರು ಮಾತ್ರ ಉಳಿದುಕೊಂಡಿದ್ದು, ಪಕ್ಷ ಮತ್ತಷ್ಟು ಗಟ್ಟಿಯಾಗಿದೆ.

ಹಿಂದೆ ಆಗದ ಅಭಿವೃದ್ಧಿಯನ್ನು ಕೆಲಸವನ್ನು ಮಾಡುವಂತೆ ನನಗೆ ಮತ ನೀಡಿರುವ ಜನತೆಯ ಆಶಯವನ್ನು ಈಡೇರಿಸುವುದಾಗಿ ಹೇಳಿದ ಅವರು, ಹಿಂದೆ ಶಿಕ್ಷಣ ಸಚಿವ ಹಾಗೂ ಸಭಾಧ್ಯಕ್ಷನಾಗಿ ಜಿಲ್ಲೆಗೆ ಅಗತ್ಯವಿರುವ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಶಿರಸಿ ಶೈಕ್ಷಣಿಕ ಜಿಲ್ಲೆಯನ್ನಾಗಿ ಮಾಡಲಾಗಿದೆ. ಜಿಲ್ಲೆಯಲ್ಲಿ ಲೋಡ್ ಶೆಡ್ಡಿಂಗ್ ತಪ್ಪಿಸಿ 24 ಗಂಟೆ ವಿದ್ಯುತ್ ಪೂರೈಕೆಗೆ ಕಾರಣಿಕರ್ತನಾಗಿದ್ದು, ಅನೇಕ ಕೆಲಸವನ್ನು ಮಾಡಿದ್ದೇನೆ. ಮುಂದೆಯೂ ಕೂಡ ಅಭಿವೃದ್ಧಿ ಪರವಾಗಿರುತ್ತೇನೆ. ಅಭಿವೃದ್ಧಿ ಮಾಡುತ್ತೇನೆ. ಈ ಬಗ್ಗೆ ಯಾರಿಗೂ ಸಂಶಯ ಬೇಡ ಎಂದು ಹೇಳಿದರು.

ಕೇಂದ್ರ ಸರ್ಕಾರದ ಯೋಜನೆಯಡಿ ರೈಲ್ವೆ, ರಾಷ್ಟ್ರೀಯ ಹೆದ್ದಾರಿ, ನೀರಾವರಿ, ಉದ್ಯೋಗ ಸೃಷ್ಟಿ ಕ್ರಮ, ಪ್ರವಾಸೋದ್ಯಮ ಸೇರಿದಂತೆ ಅಗತ್ಯ ಅಭಿವೃದ್ಧಿ ಕೆಲಸ ಮಾಡುವುದಾಗಿ ಹೇಳಿದ ಅವರು, ಜಿಲ್ಲೆಯ ಅರಣ್ಯ ಅತಿಕ್ರಮಣದಾರರಿಗೆ ಯಾವುದೇ ತೊಂದರೆಯಾಗದಂತೆ ಅವರ ಪರವಾಗಿ ನಿಲ್ಲುವುದಾಗಿ ಭರವಸೆ ನೀಡಿದರು.

ಗ್ರಾ.ಪಂ ನಿಂದ ಹಿಡಿದು ದೆಹಲಿವರೆಗೆ ಜನರ ಜೊತೆಗೆ ನಿಂತು ಕೆಲಸ ಮಾಡುತ್ತೇನೆ. ನನಗೆ ಆ ಕೆಲಸ ಬರುವುದಿಲ್ಲ ಈ ಕೆಲಸ ಮಾಡುವುದಿಲ್ಲ ಎಂಬ ಪ್ರಶ್ನೆಯೇ ಇಲ್ಲ. ಬದಲಾಗಿ ಜನರ ಭಾವನೆಯನ್ನು ಅರಿತುಕೊಂಡು ಸ್ಪಂದಿಸುವ ಕೆಲಸ ಮಾಡುತ್ತೇನೆ. 10 ವರ್ಷದಲ್ಲಿ ವಂದೇ ಭಾರತ ರೈಲು ಬಂದಿದ್ದು, ಮುಂದಿನ 5 ವರ್ಷದಲ್ಲಿ ಬುಲೆಟ್ ರೈಲು ಕೂಡ ಬರಬಹುದು.

ನರೇಂದ್ರ ಮೋದಿಯವರು ಮತ್ತಷ್ಟು ಒಳ್ಳೆಯ ಕೆಲಸ ಮಾಡುತ್ತಾರೆ. ಜನರು ಪಶ್ಚಾತಾಪಡುವ ರೀತಿಯ ರಾಜ್ಯದ ಕಾಂಗ್ರೆಸ್ ಸರ್ಕಾರ 1 ವರ್ಷದಲ್ಲಿ ದೀವಾತನ ಆಡಳಿತ ನಡೆಸಿದೆ. ಕರ್ನಾಟಕವನ್ನು ಅಪರಾದಿಗಳ ತಾಣವಾಗಿಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರದ ವೈಪಲ್ಯವನ್ನು ಜನರು ಮತ ಚಲಾಯಿಸುವ ಮೂಲಕ ತೋರಿಸಿದ್ದಾರೆ. ಇದಕ್ಕೆ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಎಲ್.ಟಿ. ಪಾಟೀಲ ಮಾತನಾಡಿ, ರಾಜಕೀಯ ಗೊಂದಲದ ನಡುವೆಯು ಸಹ ಎದೆ ಗುಂದದೆ ಹಗಲಿರುಳು ಶ್ರಮಿಸಿ ರಾಜ್ಯದಲ್ಲಿಯೇ ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಿದ ಕೀರ್ತಿ ನಮ್ಮ ಜಿಲ್ಲೆಯ ಕಾರ್ಯಕರ್ತರಿಗೆ ಸಲ್ಲುತ್ತದೆ. ಬಿಜೆಪಿಯಿಂದ ಆಯ್ಕೆಯಾದ ಸ್ಥಳಿಯ ಶಾಸಕರು ತಟಸ್ಥಾಗಿ ಉಳಿದಿದ್ದರೆ ತೊಂದರೆ ಇರಲಿಲ್ಲ ಮಗನನ್ನು ಕಾಂಗ್ರೆಸ್ ಗೆ ಕಳುಹಿಸಿ ಕಾಂಗ್ರೆಸ್ಗೆ ಬೆಂಬಲಿಸಿದರು. ಈ ನಡುವೆಯೂ ಲೀಡ್ ಪಡೆದಿರುವುದು ಕಾರ್ಯಕರ್ತರಿಗೆ ಮತ್ತಷ್ಟು ಬಲ ಬಂದಂತಾಗಿದೆ. ಕಾಂಗ್ರೆಸ್ ಗೆ ಹೋದ ಹೆಬ್ಬಾರ ಬೆಂಬಲಿಗರ ಒಂದು ಮತಗಟ್ಟೆಯಲ್ಲಿ ಕೂಡ ಕಾಂಗ್ರೆಸ್ ಗೆ ಲೀಡ್ ಬಂದಿಲ್ಲ ಎಂದರು

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್ ಹೆಗಡೆ, ಎಲ್.ಟಿ ಪಾಟೀಲ್, ಮಂಜುನಾಥ ಪಾಟೀಲ, ಗುರುಪ್ರಸಾದ ಹೆಗಡೆ, ಶಿವಾಜಿ ನರ್ಸಾನಿ, ಬಸವರಾಜ ಓಶಿಮಠ, ಶ್ರೀಕಾಂತ ಸಾನು, ಮಹೇಶ ಹೊಸಕೊಪ್ಪ, ಅಶೋಕ ಚಲವಾದಿ, ಜಯಸುಧಾ ಭೋವಿ, ಸಿ.ಕೆ ಅಶೋಕ, ವಿನಾಯಕ ರಾಯ್ಕರ, ರೇಖಾ ಅಂಡಗಿ, ಮಂಜುನಾಥ ಶೇಟ್, ಗುರುರಾಜ ಕಾಮತ, ಬಸವರಾಜ ಠಣಕೇದಾರ, ನಿರ್ಮಲಾ ಬೆಂಡ್ಲಗಟ್ಟಿ, ಸುವರ್ಣ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಕೆಂಪೇಗೌಡ, ಡಾ. ಫ.ಗು. ಹಳಕಟ್ಟಿ ಜಯಂತಿ ಇಂದು

ಧಾರವಾಡ: 2024-25 ನೇ ಸಾಲಿನ ಜೂನ್ 27, 2024 ರಂದು ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಹಾಗೂ ಜುಲೈ 2, 2024 ರಂದು ಡಾ. ಫ.ಗು.ಹಳಕಟ್ಟಿ ಅವರ ಜನ್ಮದಿನ-ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಆಯೋಜಿಸುವ ಸಂಬಂಧ ಜೂನ್ 21, 2024 ರಂದು ಸಂಜೆ 4.30 ಕ್ಕೆ ಜಿಲ್ಲಾಧಿಕಾರಿಗಳ ನೂತನ ಸಭಾಭವನದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಮಾಜ ಮುಖಂಡರು ಸಭೆಯಲ್ಲಿ ಭಾಗವಹಿಸಿ, ಸಲಹೆ ಸೂಚನೆಗಳನ್ನು ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಣ್ಣಿಗೇರಿಯಲ್ಲಿ ಉಚಿತ ಲಸಿಕೆ ಅಭಿಯಾನ

ಅಣ್ಣಿಗೇರಿ: ಜಾನುವಾರು ಮತ್ತು ಪ್ರಾಣಿಗಳಿಗೆ ಅಣ್ಣಿಗೇರಿ ತಾಲೂಕಿನ ಪಶು ಸಂಗೋಪನೆ ಕೇಂದ್ರ ವತಿಯಿಂದ ಜಾನುವಾರುಗಳಿಗೆ ಚರ್ಮಗಂಟು ರೋಗ ಲಸಿಕೆ ಗಂಟಲು, ಬೆನ್ನು ನೋವು, ಕುರಿಗಳಿಗಳಿಗೆ ಲಸಿಕೆ, 4ರಿಂದ 8 ತಿಂಗಳ ಹೆಣ್ಣು ಕರುವಿಗೆ ಕಂದು ರೋಗ ವಿರುದ್ದ ಲಸಿಕೆ ಸೇರಿದಂತೆ ಇತರೆ ರೋಗಿಗಳಿಗೆ ಉಚಿತವಾಗಿ ಲಸಿಕೆ ಹಾಕಲಾಗುವುದು. ಸಮಸ್ತ ರೈತ ಬಾಂಧವರು ಇದರ ಸದುಪಯೋಗ ಪಡಿದು ಕೊಳ್ಳಲು ಪಶುಸಂಗೋಪನೆ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಎಸ್.ಡಿ. ಕಲ್ಬುರ್ಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಖಂಡರ ಸಭೆ

ಧಾರವಾಡ: ಜೂನ್ 23 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪೊಲೀಸ್ ಕಚೇರಿಯ ಸಭಾಂಗಣದಲ್ಲಿ, ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರ ಸಭೆಯನ್ನು ಆಯೋಜಿಸಲಾಗಿದೆ. ಜಿಲ್ಲೆಯ ಎಲ್ಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರುಗಳು ಸಭೆಗೆ ಹಾಜರಾಗಬೇಕೆಂದು ಜಿಲ್ಲಾ ಪೊಲೀಸ್ ಅಧಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಲೆ ಏರಿಸಿ ಲೂಟಿ ಮಾಡುವ ಸರಕಾರ ತೊಲಗಲಿ: ಪಾಟೀಲ್

ನವಲಗುಂದ: ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರ ಮಹಿಳೆಯರಿಗೆ ಭಾಗ್ಯಗಳನ್ನ ಕೊಟ್ಟು, ಮನೆಯಲ್ಲಿನ ಎಲ್ಲರಿಂದಲೂ ವಸೂಲಿ ಮಾಡುವ ಹುನ್ನಾರ ಮಾಡಿದೆ. ಇಂತಹ ಸರಕಾರ ತೊಲಗಲಿ ಎಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಆಗ್ರಹಿಸಿದರು. ನವಲಗುಂದ ಪಟ್ಟಣದಲ್ಲಿ ಭಾರತೀಯ ಜನತಾ ಪಕ್ಷದಿಂದ ಬೆಲೆ ಏರಿಕೆ ವಿರೋಧಿಸಿ ನಡೆದ ಹೋರಾಟದಲ್ಲಿ ಭಾಗವಹಿಸಿ ಅವರು ಮಾತನಾಡಿ, ಕಾಂಗ್ರೆಸ್ ಸರಕಾರ ನಮ್ಮೂರಿನ ಮಹಿಳೆಯರಿಗೆ ಎರಡು ಸಾವಿರ ರೂಪಾಯಿ ಕೊಟ್ಟ ಹಾಗೇ ಮಾಡಿ, ಪೆಟ್ರೋಲ್, ಡಿಸೇಲ್, ದಿನಸಿ ಪದಾರ್ಥಗಳ ಬೆಲೆ ಏರಿಸಿ, ಅವರ ಪತಿ, ಮಕ್ಕಳ ಮೂಲಕ ವಸೂಲಿ ಮಾಡುತ್ತಿದೆ. ಇದನ್ನ ಜನರು ಗಂಭೀರವಾಗಿ ಪರಿಗಣಿಸಬೇಕು. ಇಂತಹ ವ್ಯವಸ್ಥೆಗೆ ಮುಂದಾಗಿರುವ ಕಾಂಗ್ರೆಸ್ ಸರಕಾರ ತೊಲಗಲಿ ಎಂದರು. ಭಾರತೀಯ ಜನತಾ ಪಕ್ಷದ ಪ್ರತಿಭಟನೆ ಆರಂಭದ ಮುನ್ನ ಹುತಾತ್ಮ ರೈತನ ವೀರಗಲ್ಲಿಗೆ ನಮನ ಸಲ್ಲಿಸಿ, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಹುಬ್ಬಳ್ಳಿ-ಸೊಲ್ಲಾಪೂರ ರಾಷ್ಟ್ರೀಯ ಹೆದ್ದಾರಿಯನ್ನ ಕೆಲಕಾಲ ಬಂದ್ ಮಾಡಲಾಗಿತ್ತು. ಬಿಜೆಪಿ ತಾಲೂಕು ಅಧ್ಯಕ್ಷ ಶರಣಪ್ಪಗೌಡ ದಾನಪ್ಪಗೌಡ್ರ, ಬಸಣ್ಣ ಬೆಳವಣಿಕಿ, ಷಣ್ಮುಖ ಗುರಿಕಾರ, ಸಿದ್ದಣ್ಣ ಕಿಟಗೇರಿ, ಮುತ್ತಣ್ಣ ಮನಮಿ, ಮೃತ್ಯುಂಜಯ ಹಿರೇಮಠ, ಸೋಮು ಪಟ್ಟಣಶೆಟ್ಟಿ, ರೋಹಿತ ಮತ್ತಿಹಳ್ಳಿ, ಮುತ್ತು ಗಾಳಪ್ಪನವರ, ಪ್ರಭು ಬಳಗಣ್ಣನವರ, ಸಿದ್ಧನಗೌಡ ಪಾಟೀಲ, ಈರಣ್ಣ ಹಸಬಿ, ಮಂಜುನಾಥ ಅಕ್ಕಿ, ಅಣ್ಣಪ್ಪ ಬಾಗಿ, ನಿಂಗಪ್ಪ ಬಾರಕೇರ, ನಾಗಪ್ಪ ಹರ್ತಿ, ಜಕ್ಕನಗೌಡ್ರ, ನಿಂಗಪ್ಪ ಬಿಇದಲೂಮಠ, ದಾಡಿಬಾಯಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜನಸ್ಪಂದನ ಕಾರ್ಯಕ್ರಮ

ಗದಗ: ನಗರದ ಗದಗ-ಬೆಟಗೇರಿ ನಗರಸಭೆಯ ಸಭಾಂಗಣದಲ್ಲಿ ಜೂನ್ 24 ರಂದು ಮದ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜನಸ್ಪಂದನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗದಗ ತಾಲೂಕಿನ ಸಾರ್ವಜನಿಕರು ತಮ್ಮ ಕುಂದು-ಕೊರತೆಗಳನ್ನು ಲಿಖಿತ ರೂಪದಲ್ಲಿ ದಾಖಲೆಗಳ ಸಮೇತ ಅರ್ಜಿಗಳನ್ನು ಸಲ್ಲಿಸಿ ಜನಸ್ಪಂದನ ಕಾರ್ಯಕ್ರಮದ ಸದುಪಯೋಗವನ್ನು ಪಡೆಯಲು ಗದಗ ತಹಸೀಲ್ದಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಭಿವೃದ್ಧಿ ಪಥ ಶೂನ್ಯ

ಮತದಾರರ ಅಭಿನಂದನಾ ಸಮಾರಂಭದಲ್ಲಿ ಗದಗ ಕ್ಷೇತ್ರದ ನೂತನ ಸಂಸದ ಬಸವರಾಜ್ ಬೊಮ್ಮಾಯಿ ಟೀಕೆ

ಬ್ಯಾಡಗಿ: ರಾಜ್ಯದಲ್ಲಿ ಜನತೆಗೆ ಚಿಪ್ಪು ಹಾಗೂ ಚೊಂಬು ಕೊಡುವ ಸರಕಾರ ಅಸ್ತಿತ್ವದಲ್ಲಿದ್ದು, ಅಭಿವೃದ್ಧಿ ಪಥ ಶೂನ್ಯವಾಗಿ ಸುಭದ್ರ ಕರ್ನಾಟಕ ದಿವಾಳಿಯತ್ತ ಸಾಗಿರುವ ಪರಿಣಾಮ ರಾಜ್ಯದ ಅಭಿವೃದ್ಧಿ 10 ವರ್ಷ ಹಿಂದೆ ಹೋಗಿದೆ ಎಂದು ಹಾವೇರಿ ಗದಗ ಕ್ಷೇತ್ರದ ನೂತನ ಸಂಸದ ಬಸವರಾಜ್ ಬೊಮ್ಮಾಯಿ ಟೀಕಿಸಿದರು.

ಪಟ್ಟಣದ ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಬ್ಯಾಡಗಿ ಬಿಜೆಪಿ ತಾಲೂಕಾ ಮಂಡಳದ ವತಿಯಿಂದ ಆಯೋಜನೆ ಮಾಡಲಾಗಿದ್ದ ಮತದಾರರ ಅಭಿನಂದನಾ ಸಮಾರಂಭ ಹಾಗೂ ನೂತನ ಸಂಸದರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ನಂತರ ಅವರು ಮಾತನಾಡಿದರು.

ಲೋಕಸಭೆ ಚುನಾವಣೆಗೂ ಮುನ್ನ ರಾಹುಲ್ ಗಾಂಧಿ ಹೇಳಿದಂತೆ ದೇಶ ಜನರ ಖಾತೆಗೆ ''ಟಕಾ ಟಕ್'' ಎಂದು ಹಣ ಬೀಳುವ ಬದ ಲಾಗಿ ಶೀಘ್ರದಲ್ಲಿಯೇ ರಾಜ್ಯದಲ್ಲಿನ ಕಾಂಗ್ರೆಸ್ ನೀಡುತ್ತಿರುವ ಗ್ಯಾರಂಟಿ ಯೋಜನೆಗಳು ಕಟ್ ಆಗಲಿವೆ ಇದಕ್ಕೆ ತಳೆ ಬುಡವಿಲ್ಲದ ಆರ್ಥಿಕ ನೀತಿಗಳೇ ಕಾರಣವಾಗಿದೆ ಎಂದು ದೂರಿದರು.

ಕರ್ನಾಟಕದಲ್ಲಿನ ಪ್ರಬುದ್ಧ ಮತದಾರರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದಾರೆ, ಗ್ಯಾರಂಟಿಗ ಳನ್ನ ಪಕ್ಕಕ್ಕಿಟ್ಟು ದೇಶದ ಅಭಿವೃದ್ಧಿಯ ಚಿಂತನೆ ಮಾಡುವ ಪಕ್ಷಕ್ಕೆ ಮತವನ್ನು ನೀಡಿ ನಾವೆಷ್ಟು ಪ್ರಭುದ್ದರು ಎಂಬುದನ್ನ ತೋರಿಸಿದ್ದಾರೆ, ರೈತರಿಗೆ 75

ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಬ್ಯಾಡಗಿ ಬಿಜೆಪಿ ತಾಲೂಕಾ ಮಂಡಳದ ವತಿಯಿಂದ ಆಯೋಜನೆ ಮಾಡಲಾಗಿದ್ದ ಮತದಾರರ ಅಭಿನಂದನಾ ಸಮಾರಂಭವನ್ನ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.

ಯುನಿಟ್‌ವರೆಗೆ ವಿದ್ಯುತ್ ಜನತೆಗೆ ಉಚಿತ ಸೇರಿದಂತೆ ಹಲವು ಉಚಿತ ಭಾಗ್ಯಗಳಿಗೆ ಬಿಜೆಪಿ ಸರಕಾರವೇ ಮೊದಲ ಅಡಿ ಪಾಯ ಹಾಕಿದೆ ಆದರೆ ನಾವೆಂದು ಅವುಗಳನ್ನ ಪ್ರಚಾರಕ್ಕೆ ಬಳಸಿಕೊಂಡಿಲ್ಲ ಆದರೆ ಕಾಂಗ್ರೆಸ್ ಅದೇ ಮಾದರಿಯ ಭಾಗ್ಯಗಳಿಗೆ ಗ್ಯಾರಂಟಿ ಹೆಸರು ನೀಡಿ ರಾಜಕೀಯ ಲಾಭ ಮಾಡಿಕೊಳ್ಳುತ್ತಿದೆ ಎಂದರು.

ಹಾಲು ಆಲ್ಕೋಹಾಲು ದುಬಾರಿ: ಕೇವಲ ಗ್ಯಾರಂಟಿ ಯೋಜನೆಗಳಿಗೆ ಹಣ ಮೀಸಲಿಟ್ಟು ಖಜಾನೇ ಖಾಲಿಯಾಗಿ ಒಂದು ಲಕ್ಷ ಕೋಟಿ ಸಾಲ ಮಾಡುವ ಜೊತೆಗೆ ಇದೀಗ ಹಾಲಿನಿಂದ ಹಿಡಿದು ಆಲ್ಕೋಹಾಲವರೆಗೆ ಎಲ್ಲಾ ವಸ್ತುಗಳ ಬೆಲೆ ಏರಿಕೆ ಹಾಗೂ ಎಲ್ಲಾ ತೆರಿಗೆ ಹೆಚ್ಚಳ ಮಾಡಿ ಜನರ ಜೇಬಿಗೆ ಕತ್ತರಿ ಹಾಕಿ ಅದೇ ದುಡ್ಡಿನಿಂದ ಸರಕಾರ ನಡೆಸಿ ಸಾಲವನ್ನು ಜನರ ಮೇಲೆಯೆ ಹೋರಿಸುವ ಕಾರ್ಯ ವನ್ನ ಸರಕಾರ ಮಾಡುತ್ತಿದೆ ಇಂತಹ ಸರಕಾರದಿಂದ ರಾಜ್ಯದ ಅಭಿವೃದ್ದಿಹಗಲು ಹೊತ್ತಲ್ಲಿ ಚಂದ್ರನ ಹುಡುಕಿದಂತೆ ಎಂದು ಲೇವಡಿ ಮಾಡಿದರು.

99 ಸ್ವೀಟ್ ಗೆದ್ದಿದ್ದೆ ದೊಡ್ಡ ಸಾಧನೆ: ಲೋಕಸಭೆ ಚುನಾವಣೆಯಲ್ಲಿ ಕೇವಲ 99 ಸೀಟ್ಗಳನ್ನು ಮಾತ್ರ ಗೆದ್ದಿರುವ ಕಾಂಗ್ರೆಸ್ ಸರಕಾರದ ಯುವ ನಾಯಕ ರಾಹುಲ್ ಗಾಂಧಿ ಉಳಿದ ಐಎನ್ ಡಿಐಎ ಬಳಗದ ಎಲ್ಲಾ ಸೀಟ್‌ಗಳನ್ನ ನಾವೇ ಗೆದ್ದಿದ್ದೇವೆ ಎಂಬಂತೆ ಖುಷಿ ಪಡು ತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ವಿಪಕ್ಷ ನಾಯಕನಾಗಲು ಸಹ ತಯಾರಿಲ್ಲದ ರಾಹುಲ್ ಗಾಂಧಿ 241 ಸೀಟ್ ಗೆದ್ದಿರುವ ಬಿಜೆಪಿ ಪಕ್ಷದ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದ ಎಂದರು.

ಮತ್ತಷ್ಟು ಅಭಿವೃದ್ಧಿ ಕಾರ್ಯ: ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಕಳೆದ ವಿಧಾನಸಭಾ ಕ್ಷೇತ್ರದಲ್ಲಿ ಸೋಲುಕೊಂಡಿದ್ದ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಲ್ಲಿಯೇ ಕಾಂಗ್ರೆಸ್ ಗ್ಯಾರಂಟಿಗಳ ನಡುವೆ ಬಿಜೆಪಿ ಅಭ್ಯರ್ಥಿ ಬಸವರಾಜ್ ಬೊಮ್ಮಾಯಿ ಅವರಿಗೆ ಸುಮಾರು 7 ಸಾವಿರಕ್ಕೂ ಅಧಿಕ ಮತಗಳ ಮುನ್ನಡೆ ಸಿಕ್ಕಿದೆ, ಬ್ಯಾಡಗಿ ವಿಧಾನಸಭಾ ಕ್ಷೇತ್ರಕ್ಕೆ ನೀರಾವರಿ ಯೋಜನೆಗಳನ್ನು ನೀಡಿ ಬಸವರಾಜ ಬೊಮ್ಮಾಯಿಯವರು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಮುಂಬರುವ ದಿನಗಳಲ್ಲಿ ಕ್ಷೇತ್ರದ ಮತ್ತಷ್ಟು ಅಭಿವೃದ್ದಿಗೆ ಸಂಸದರಾಗಿ ಮತ್ತಷ್ಟು ಕಾರ್ಯನಿರ್ವಹಿಸಲಿದ್ದಾರೆ ಎಂದರು.

ಶಿವರಾಜ್ ಸಜ್ಜನ ಹಾಗೂ ಗವಿಸಿದ್ದಪ್ಪ ದ್ಯಾಮಣ್ಣವನರ ಮುರಿಗೆಪ್ಪ ಶೆಟ್ಟರ್ ಮಾತನಾಡಿದರು.

ವೇದಿಕೆಯಲ್ಲಿ ವಿರೂಪಾಕ್ಷಪ್ಪ ಕಡ್ಲಿ, ಶಂಕಣ್ಣ ಮಾತನವರ, ಶಿವಬಸಪ್ಪ ಕುಳೆನೂರ, ವೀರಭದ್ರಪ್ಪ ಗೊಡಚಿ, ನಾಗರಾಜ ಹಾವನೂರ ಹಾ ಲೇಶ ಜಾಧವ, ಹಾಲೇಶ ಜಾಧವ, ರಾಮಣ್ಣ ಕೊಡಿಹಳ್ಳಿ, ಸರೋಜ ಉಳ್ಳಾಗಡ್ಡಿ, ವಿದ್ಯಾಶೆಟ್ಟಿ, ವಿಜಯಭರತ ಬಳ್ಳಾರಿ, ಸೇರಿದಂತೆ ಹಲ ವರು ಭಾಗವಹಿಸಿದ್ದರು.

ಬಿಟ್ಟಿ ಭಾಗ್ಯಕ್ಕೆ ಕೊಕ್

ಬಿಜೆಪಿ ತಾಲೂಕಾಧ್ಯಕ್ಷ ಶಿವಯೋಗಿ ಶಿರೂರ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್‌ನ ಬಿಟ್ಟಿ ಭಾಗ್ಯಗಳು ರಾಜ್ಯದಲ್ಲಿ ವರ್ಕ್ ಆಗಲಿಲ್ಲ ಪ್ರಧಾನಿ ನರೇಂದ್ರ ಮೋದಿಯನ್ನು ಮತ್ತೊಮ್ಮೆ ದೇಶದ ಪ್ರಧಾನಿಯನ್ನಾಗಿಸುವ ನಿಟ್ಟಿನಲ್ಲಿ ನಾವೆ ಲ್ಲರೂ ಸೇರಿ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕಾರ್ಯವನ್ನು ನಿರ್ವಹಿಸಿ ಬಸವರಾಜ್ ಬೊಮ್ಮಾಯಿ ಅವರನ್ನು ಸಂಸದರನ್ನಾಗಿ ಆಯ್ಕೆ ಮಾಡಿ ಕಳಿಸಿದ್ದೇವೆ. ಮುಂಬರುವ ಜಿಪಂ ತಾಪಂ ಚುನಾವಣೆಯಲ್ಲಿ ನಾವೆಲ್ಲರೂ ಮತ್ತೆ ಒಂದಾಗಿ ಬಿಜೆಪಿ ಪಕ್ಷವನ್ನ ಸಂಘಟನೆ ಮಾಡಿ ಚುನಾವಣೆಯಲ್ಲಿ ಗೆಲ್ಲಬೇಕಿದೆ ಎಂದರು.

ಯೋಗ ನಡಿಗೆ ಸಂಪನ್ನ

ಗದಗ: ಜಿಲ್ಲಾ ಆಯುಷ್ ಇಲಾಖೆ ಆಶ್ರಯದಲ್ಲಿ 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ -2024 ಅಂಗವಾಗಿ ಗುರುವಾರ ಸಾಮೂಹಿಕ ಯೋಗ ನಡಿಗೆ ಕಾರ್ಯಕ್ರಮ ಜರುಗಿತು.

ನಗರದ ಮುನ್ಸಿಪಲ್ ಆವರಣದಲ್ಲಿ ಯೋಗ ನಡಿಗೆ ಜಾಥಾಕ್ಕೆ ಮಾನ್ಯ ವಿಧಾನಪರಿಷತ್ ಸದಸ್ಯ ಎಸ್. ವ್ಹಿ. ಸಂಕನೂರ, ಜಿಲ್ಲಾ ಅಪರ ಜಿಲ್ಲಾಧಿಕಾರಿಗಳು, ಗದಗ ಜಿಲ್ಲಾ ಆಯುಷ್ ಅಧಿಕಾರಿ ಮಲ್ಲಿಕಾರ್ಜುನ ಉಪ್ಪಿನ, ಡಾ. ಕಮಲಾಕ್ಷಿ ಅಂಗಡಿ ಚಾಲನೆ ನೀಡಿದರು. ವಿಧಾನ ಪರಿಷತ್ ಸದಸ್ಯ ಎಸ್. ವಿ. ಸಂಕನೂರ ಮಾತನಾಡಿ, ಯೋಗದ ಮಹತ್ವವನ್ನು ಮತ್ತು ಅದರಿಂದ ಎಷ್ಟೊಂದು ಪ್ರಯೋಜನ ಇದೆ ಎಂಬುದರ ಬಗ್ಗೆ ತಿಳಿಸಿದರು.

ಯೋಗದ ವಿದ್ಯೆ ನಮ್ಮ ದೇಶದ ಋಷಿ ಮುನಿಗಳಿಂದ ಬಂದಂತಹ ವಿದ್ಯೆ ಇದಾಗಿದ್ದು ಈ ವಿದ್ಯೆ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧವಾಗಿದೆ. ಮತ್ತು ವಿದೇಶಗಳಲ್ಲಿಯೂ ಸಹ ಹೆಚ್ಚು ಆಸಕ್ತಿಯಿಂದ ಯೋಗಾಭ್ಯಾಸ ಮಾಡುತ್ತಿರುವುದು ನಮ್ಮ ಯೋಗದ ಬಗ್ಗೆ ಹೆಮ್ಮೆ ಎನಿಸುತ್ತದೆ ಎಂದರು. ಈ ಯೋಗವನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಅಪರ ಜಿಲ್ಲಾಧಿಕಾರಿ ಸುರೇಖಾ ಮಾತನಾಡಿ, ಯೋಗ ನಡಿಗೆ ಮೂಲಕ ವಿದ್ಯಾರ್ಥಿಗಳು, ಎಲ್ಲ ವೈದ್ಯಕೀಯ ವಿದ್ಯಾರ್ಥಿಗಳು, ವಿವಿಧ ಯೋಗ ತರಬೇತಿ ಸಂಸ್ಥೆಗಳು ಒಂದೆಡೆ ಸೇರಿ ಯೋಗ ನಡಿಗೆಯಲ್ಲಿ ಪಾಲ್ಗೊಂಡಿರುವುದು ಮತ್ತು ಆಯುಷ್ ಇಲಾಖೆ ಈ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಡಾ. ಕಮಲಾಕ್ಷಿ ಅಂಗಡಿ ಮಾತನಾಡಿ, ಇಂದಿನ ಆಧುನಿಕ ಒತ್ತಡ ಜೀವನದಲ್ಲಿ ಯೋಗ ಅತ್ಯಂತ ಉಪಯುಕ್ತವಾಗಿದ್ದು, ಶಾಲಾ ವಿದ್ಯಾರ್ಥಿಗಳು, ಯುವಕರು, ವಯೋವೃದ್ದರು ತಮ್ಮ ತಮ್ಮ ವಯಸ್ಸಿನ ತಕ್ಕಂತೆ ಯೋಗಾಭ್ಯಾಸವನ್ನು ಪ್ರತಿನಿತ್ಯ ಮಾಡುವುದರಿಂದ ನಮ್ಮ ಆರೋಗ್ಯವು ಉತ್ತಮ ರೀತಿಯಲ್ಲಿ ಇರುತ್ತದೆ ಎಂದು ಹೇಳಿದರು. ಜೂ 21 ರಂದು ಶುಕ್ರವಾರ ಬೆಳಗ್ಗೆ 6.30 ಘಂಟೆಗೆ ನಗರದ ಕೆ. ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಸಾಮೂಹಿಕ ಯೋಗಭ್ಯಾಸ ಜರುಗುವುದು. ಈ ಯೋಗ ಶಿಬಿರದಲ್ಲಿ ಎಲ್ಲರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ವಿನಂತಿಸಿಕೊಂಡರು.

ಈ ಕಾರ್ಯಕ್ರಮದಲ್ಲಿ ಗದಗ ಜಿಲ್ಲಾ ಆಯುಷ್ ಅಧಿಕಾರಿ ಮಲ್ಲಿಕಾರ್ಜುನ ಉಪ್ಪಿನ, ಡಾ. ಸಂಜೀವ ನಾರಪ್ಪನವರ, ಡಿಡಿಪಿಐ ಎಂ. ಎ. ರಡ್ಡೇರ, ಶಿಕ್ಷಣಾಧಿಕಾರಿಗಳಾದ ಆರ್. ಎಸ್. ಬುರಡಿ, ವಿ. ವಿ. ನಡುವಿನಮನಿ, ಜಗದೀಶ ಜಿ. ಎಂ. ಶ್ಯಾಮ ಲಾಂಡೆ, ಬ್ರಹ್ಮ ಕುಮಾರಿ ವಿಶ್ವವಿದ್ಯಾಲಯದವರು, ನರ್ಸಿಂಗ್ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ರಾಷ್ಟ್ರೀಯ ಲೋಕ ಅದಾಲತ್ ಜು.13ಕ್ಕೆ

ಬ್ಯಾಡಗಿ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಜು.13 ರಂದು ಬೆಳಗ್ಗೆ 10 ಗಂಟೆಗೆ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾ ಧೀಶರಾದ ಅಮೋಲ್ ಹಿರೆಕುಡಿ ತಿಳಿಸಿದರು.

ಪಟ್ಟಣದ ನ್ಯಾಯಾಲಯದಲ್ಲಿ ನಡೆದ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು ತಾಲೂಕು ಕಾನೂನುಗಳ ಸೇವೆಗಳ ಸಮಿತಿ, ಹಾಗೂ ತಾಲೂಕಾ ನ್ಯಾಯವಾದಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರಿಗೆ ಸಕಾಲದಲ್ಲಿ ನ್ಯಾಯ ಒದಗಿಸಬೇಕು. ನ್ಯಾಯಾಲಯದಲ್ಲಿ ಸಣ್ಣಪುಟ್ಟ ವಾಜ್ಯಗಳಿಗೆ ಸಮಯ ಹಾಗೂ ಹಣ ವ್ಯರ್ಥವಾಗಬಾರದು ಎನ್ನುವ ಉದ್ದೇಶದಿಂದ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯ ಹಾಗೂ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದಂತೆ ವಾರ್ಷಿಕವಾಗಿ ಮೂರು ತಿಂಗಳಿಗೊಮ್ಮೆ ಈ ಕಾರ್ಯಕ್ರಮ ಜರುಗಲಿದೆ ಪ್ರಸಕ್ತ ಸಾಲಿನ ಮೊದಲ ಹಂತದ ಲೋಕ ಅಧಾಲತ್ ಮಾರ್ಚ ತಿಂಗಳಲ್ಲಿ ಮುಗಿದಿದ್ದು 2 ನೇ ಬಾರಿಗೆ ಜು.13 ರಂದು ಏರ್ಪಡಿಸಲಾಗಿದೆ ಎಂದರು.

ಸಾರ್ವಜನಿಕರು ಅಪಘಾತ ಪ್ರಕರಣ, ಮನೆ, ಇತರೆ ವ್ಯಾಜ್ಯಗಳು, ವೈವಾಹಿಕ ಹಾಗೂ ಕೌಟುಂಬಿಕ ಸಮಸ್ಯೆ, ಚೆಕ್ ಪ್ರಕರಣದ, ಬ್ಯಾಂಕಗಳ ವ್ಯವಹಾರದ ಸಮಸ್ಯೆ, ಭೂಸ್ವಾಧೀನ ಪ್ರಕರಣ ಸಂಬಂದಿಸಿದಂತೆ ಇಲ್ಲಿ ಪರಿಹಾರ ಕಂಡುಕೊಳ್ಳಲು ಅವಕಾಶವಿದೆ. ಕಕ್ಷಿದಾರರಿಗೆ ತ್ವರಿತಗತಿಯಲ್ಲಿ ನ್ಯಾಯ ಸಿಗಬೇಕು ಎನ್ನುವ ಧ್ಯೇಯವಿದ್ದು, ಉಭಯ ಪಕ್ಷಗಾರರು ರಾಜೀ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಇತ್ಯರ್ಥ ಪಡಿಸಲಾಗುವುದು. ಇದಕ್ಕಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.

ರಾಜಿ ಪ್ರಕರಣದಿಂದ ಇಬ್ಬರಿಗೂ ಬಾಂಧವ್ಯದ ಜೊತೆ ಸರಳವಾಗಿ ಸಮಸ್ಯೆಗೆ ಪರಿಹಾರ ಲಭ್ಯವಾಗಲಿದೆ. ಸಂಧಾನಕಾರರು ಇಬ್ಬರೂ ಒಪ್ಪಿಗೆ ನೀಡಿದಲ್ಲಿ ಮಾತ್ರ ರಾಜಿಗೆ ಅವಕಾಶವಿದೆ.

ನ್ಯಾಯಾಲಯದಲ್ಲಿ ದಾಖಲಾಗದೆ ಇರುವ ಪ್ರಕರಣಗಳನ್ನು ಸಹ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ಅವಕಾಶವಿದೆ.

ರಾಜಿ ಸಂಧಾನ ಮೂಲಕ ಪ್ರಕರಣ ಗಳನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯಕ್ಕೆ ಕಕ್ಷಿದಾರರು ಪಾವತಿಸಿದ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುವುದು. ಒಮ್ಮೆ ಈ ಲೋಕ ಅದಾಲತ್‌ನಲ್ಲಿ ಪ್ರಕರಣಗಳನ್ನು ರಾಜಿ ಮಾಡಿಕೊಂಡಲ್ಲಿ ಪುನ: ಅಪೀಲು ಹೋಗಲು ಅವಕಾಶವಿರುವುದಿಲ್ಲ ಎಂದರು.

ಕಿರಿಯ ದಿವಾಣಿ ನ್ಯಾಯಾಧೀಶ ಸುರೇಶ ವಗ್ಗನವರ ಮಾತನಾಡಿ, ಸಾರ್ವಜನಿಕರು ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪರಿಹಾರ ಕಂಡುಕೊಳ್ಳಬಹುದಾಗಿದೆ. ಮಾಹಿತಿಯ ಕೊರ ತೆಯಿದ್ದ ಕಕ್ಷಿದಾರರು ಸ್ಥಳೀಯ ವಕೀಲರಿಂದ ಮಾಹಿತಿ ಪಡೆದು ಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನ್ಯಾಯಾಲಯ ಆವರಣದಲ್ಲಿರುವ ತಾಲೂಕು ಕಾನೂನು ಸೇವೆಗಳ ಸಮಿತಿ ಕಾರ್ಯಾಲಯ ಮೊ.ಸಂಖ್ಯೆ 08375-229220 ಸಂಪರ್ಕಿಸಬಹುದು ಎಂದರು.

ಈ ವೇಳೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಸ್.ಎನ್.ಬಾರ್ಕಿ, ಉಪಾಧ್ಯಕ್ಷ ಬಸಯ್ಯ ಹಿರೇಮಠ, ಕಾರ್ಯದರ್ಶಿ ಎಂ.ಪಿ.ಹಂಜಗಿ, ಪ್ರವೀಣ ಎನ್. ಇದ್ದರು.

ನಾಳೆಯಿಂದ ಉಭಯ ಗುರುಗಳ ಜಾತ್ರಾ ಮಹೋತ್ಸವ

ಗಾನಯೋಗಿ ಶಿವಯೋಗಿ ಲಿಂ. ಪಂ. ಪಂಚಾಕ್ಷರ, ಪದ್ಮಭೂಷಣ ಲಿಂ.ಡಾ. ಪಂ. ಪುಟ್ಟರಾಜ ಕವಿ ಸ್ಮರಣೋತ್ಸವ

ಗದಗ: ಪರಮಪೂಜ್ಯ ಗಾನಯೋಗಿ ಶಿವಯೋಗಿ ಲಿಂ. ಪಂ. ಪಂಚಾಕ್ಷರ ಗವಾಯಿಗಳವರ 80ನೇ ಪುಣ್ಯಸ್ಮರಣೋತ್ಸವ ಹಾಗೂ ಪದ್ಮಭೂಷಣ ಲಿಂ.ಡಾ. ಪಂ. ಪುಟ್ಟರಾಜ ಕವಿಗವಾಯಿಗಳವರ 14ನೇ ಪುಣ್ಯಸ್ಮರಣೋತ್ಸವ ಉಭಯ ಗುರುಗಳ ಜಾತ್ರಾ ಮಹೋತ್ಸವ ಜೂನ್ 22 ರಿಂದ 26 ರವರೆಗೆ ಕೀರ್ತನ, ಸಂಗೀತ, ಉಪನ್ಯಾಸ ಅಂಧರಗೋಷ್ಠಿ ಹಾಗೂ ಗ್ರಂಥ ಬಿಡುಗಡೆ ಕಾರ್ಯಕ್ರಮ ಜರುಗಲಿದೆ. ಜೂನ್ 26 ರಂದು ಉಭಯ ಗುರುಗಳ ಮಹಾರಥೋತ್ಸವ, ಧರ್ಮೋತ್ತೇಜಕ ಮಹಾಸಭೆ ಹಾಗೂ ಅಹೋರಾತ್ರಿ ಸಂಗೀತ ಕಾರ್ಯಕ್ರಮಗಳು ಜರುಗುವವು ಎಂದು ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಪೂಜ್ಯಶ್ರೀ ಕಲ್ಲಯ್ಯಜ್ಜನವರು ಹೇಳಿದರು.

ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪರಮಪೂಜ್ಯ ಗಾನಯೋಗಿ ಶಿವಯೋಗಿ ಪಂ. ಪಂಚಾಕ್ಷರ ಗವಾಯಿಗಳವರ 80ನೇ ಸ್ವರ ಸಮಾರಾಧನೆ ಹಾಗೂ ಪದ್ಮಭೂಷಣ ಡಾ.ಪಂ. ಪುಟ್ಟರಾಜ ಕವಿಗವಾಯಿಗಳವರ 14ನೇ ಪುಣ್ಯಾರಾಧನೆ ಅಂಗವಾಗಿ ಇದೇ ಜೂನ್ 22 ರಿಂದ 26ರ ವರೆಗೆ ಕರ್ತೃ ಗದ್ದುಗೆಗೆ ವೇದೋಕ್ತ ರುದ್ರಾಭಿಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ ಕಾರ್ಯಕ್ರಮವನ್ನು ಗದುಗಿನ ಶ್ರೀ ಕುಮಾರೇಶ್ವರ ವೈದಿಕ ಪಾಠಶಾಲೆ ಇವರಿಂದ ಹಾಗೂ ಆಶ್ರಮದ ವಿದ್ಯಾರ್ಥಿಗಳಿಂದ ಪ್ರಾರ್ಥನೆ ನಂತರ ಪ್ರತಿದಿನ ಬೆಳಗ್ಗೆ 7 ರಿಂದ 8 ಗಂಟೆವರೆಗೆ ಕೈವಲ್ಯ ಪದ್ಧತಿ ಶಿವಯೋಗ ಕುರಿತು ಶಿವಾನುಭವವನ್ನು ರನ್ನಬೆಳಗಲಿ ಶಂಭುಲಿಂಗಾಶ್ರಮ ಸಿದ್ಧಾರೂಢ

ಮಠದ ಪೂಜ್ಯಶ್ರೀ ಕೃಷ್ಣೇಗೌಡ ಕೋಲೂರ ಅವರಿಂದ ಜರುಗಲಿದೆ. ಮೇ. 26 ರಿಂದ ಜೂನ್ 26ರವರೆಗೆ ಪ್ರತಿದಿನ ಸಾಯಂಕಾಲ 6 ಗಂಟೆಗೆ ಪಂ. ಸದಾಶಿವಶಾಸ್ತ್ರಿಗಳು ಹುಕ್ಕೇರಿ ವಿರಚಿತ ಪಂ. ಪಂಚಾಕ್ಷರೇಶ್ವರ ಮಹಾಪುರಾಣ ಪ್ರವಚನ ಜರಗುವುದು ಎಂದು ಹೇಳಿದರು.

ವಿರೇಶ್ವರ ಪುಣ್ಯಾಶ್ರಮದ ವ್ಯವಸ್ಥಾಪಕ ಹೇಮರಾಜ ಶಾಸ್ತ್ರೀ ಹೆಡಿಗ್ಗೊಂಡ ಅವರು ಮಾತನಾಡಿ, ಜೂನ್ 22 ರಂದು ಸಂಜೆ 6 ಗಂಟೆಗೆ ಧರ್ಮಸಭೆ ಹಾಗೂ ಕೀರ್ತನ ಸಮ್ಮೇಳನದ ಸಾನಿಧ್ಯವನ್ನು ಶ್ರೀ ಕಾಶಿ ಪೀಠದ ಪೂಜ್ಯಶ್ರೀಡಾ. ಚಂದ್ರಶೇಖರ ಶಿವಾಚಾರ್ಯ ಭಗತ್ಪಾದಗಳವರು ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ಸೂಡಿ ಜುಕ್ತಿ ರೇಮಠದ ಪೂಜ್ಯಶ್ರೀ ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುವರು. ಚಳಗೇರಿ ಹಿರೇಮಠದ ಪೂಜ್ಯಶ್ರೀವೀರ ಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನೇತೃತ್ವ ವಹಿಸುವವರು. ಜಗದ್ಗುರು ಮಹಾಸನ್ನದಿಯವರಿಂದ ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳವರು ರಚಿಸಿದ ಶ್ರೀಗುರುವಚನ ಪ್ರಭ ಗ್ರಂಥ ಲೋಕಾರ್ಪಣೆಗೊಳ್ಳುವುದು. ಇದಕ್ಕೂ ಮುನ್ನ ಬೆಳಿಗ್ಗೆ 11 ಗಂಟೆಗೆ ಪೂಜ್ಯರಿಂದ ಶ್ರೀಗುರು ರಕ್ಷೆ ಜರುಗಲಿದೆ. ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಬ್ರಹನ್ಮಠ- ಅಡ್ನೂರ-ರಾಜೂರು-ಗದಗ ಶ್ರೀಮಠದ ಪೂಜ್ಯಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯರು ವಹಿಸುವರು. ವೀರೇಶ್ವರ ಪುಣ್ಯಾಶ್ರಮದ ಪೂಜ್ಯಶ್ರೀ ಕಲ್ಲಯ್ಯಜ್ಜನವರು, ಅರಳಿಕಟ್ಟಿಯ ಗಂಗಾಧರಯ್ಯನವರು, ನಾಗರಹಳ್ಳಿಯ ಈರಪ್ಪ ಅಕ್ಕಿ, ಬೆಳವಣಿಕೆಯ ಚಂದ್ರಶೇಖರ ಶಿವಶಂಪಗೇರ,ರುದ್ರಗೌಡರು ರಬ್ಬನಗೌಡ್ರು ಸೇರಿದಂತೆ ಮುಂತಾದವರು ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ಜಗದ್ಗುರು ಮಹಾಸನ್ನಿಧಿಯವರಿಂದ ಪದ್ಮಭೂಷಣ ಡಾ. ಪಂ.ಪುಟ್ಟರಾಜ ಅವರ ಕವಿಕೃತ ಶ್ರೀ ಮಹಾದೇವಿ ಪುರಾಣಂ ಗ್ರಂಥ ಲೋಕಾರ್ಪಣೆಗೊಳ್ಳಲಿದೆ. ಪೂಜ್ಯಶ್ರೀ ಕಲ್ಲಯ್ಯಜ್ಜನವರ ಸಾಹಿತ್ಯ ಹೊಂದಿರುವ ಶಿವಯೋಗಿ ಸಂತ ಪುಟ್ಟಯ್ಯಜ್ಜ ಧ್ವನಿ ಸುರುಳಿ ಬಿಡುಗಡೆಗೊಳ್ಳಲಿದೆ. ರಾತ್ರಿ 10.30 ಗಂಟೆಗೆ ಗಾನ ಶಿವಯೋಗಿ ತ್ರಿಭಾಷಾ ಚಕ್ರವರ್ತಿ ಪದ್ಮಭೂಷಣ ಡಾ. ಪಂ.ಪುಟ್ಟರಾಜ ಕವಿ ಗವಾಯಿಗಳವರ ವಿರಚಿತ ಶ್ರೀಕೃಷ್ಣ ಗಾರುಡಿ ಪೌರಾಣಿಕ ನಾಟಕ ಅರ್ಥಾತ್ ಭೀಮಾರ್ಜುನರ ಗರ್ವಭಂಗ ನಾಟಕವನ್ನು ವಿರೇಶ್ವರ ಪುಣ್ಯಾಶ್ರಮದ ವಿದ್ಯಾರ್ಥಿಗಳು ಪ್ರಸ್ತುತಪಡಿಸಲಿದ್ದಾರೆ.

ಜೂನ್ 23ರಂದು ಭಾನುವಾರ ಸಂಜೆ 6 ಗಂಟೆಗೆ ಕೀರ್ತನ ಸಮ್ಮೇಳನ ಹಾಗೂ ಅಂಧರಗೋಷ್ಠಿ ಕಾರ್ಯಕ್ರಮವನ್ನು ಶಿರಹಟ್ಟಿಯ ಜಗದ್ಗುರು ಭಾವಕ್ಯತಾ ಮಹಾಸಂಸ್ಥಾನ ಪೀಠದ ಪೂಜ್ಯಶ್ರೀ ಜ. ಫಕೀರ ದಿಂಗಾಲೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಹಾಲಕೇರಿ ಅನ್ನದಾನೇಶ್ವರ ಸಂಸ್ಥಾನಮಠದ ಪೂಜ್ಯಶ್ರೀ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ಗದುಗಿನ ಶಿವಾನಂದ ಮಠದ ಪೂಜ್ಯಶ್ರೀ ಜ.ಅಭಿನವ ಶಿವಾನಂದ ಮಹಾಸ್ವಾಮಿಗಳು ನೇತೃತ್ವ ವಹಿಸುವರು. ಹರ್ಲಾಪುರ ಕೊಟ್ಟೂರೇಶ್ವರ ಶ್ರೀಮಠದ ಪೂಜ್ಯಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿಗಳು, ಹೊತನಹಳ್ಳಿ ಸಿಂದಗಿ ಶಾಖಾ ಮಠದ ಪೂಜ್ಯಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಗದುಗಿನ ಪೂಜ್ಯಶ್ರೀ ನೀಲಕಂಠ ಪಟ್ಟದಾರ್ಯ ಮಹಾಸ್ವಾಮಿಗಳು, ಮುಕ್ಕಣ್ಣೇಶ್ವರ ಸಂಸ್ಥಾನಮಠದ ಪೂಜ್ಯಶ್ರೀ ಶಂಕರಾನಅದ ಸ್ವಾಮಿಗಳು, ಅಂತೂರ ಬೆಂತೂರಿನ ಪೂಜ್ಯಶ್ರೀ ಕುಮಾರದೇವರು, ನಿಡಗುಂದಿ ಸಂಶಿ ಹಿರೇಮಠದ ಪೂಜ್ಯಶ್ರೀಮೃತ್ಯುಂಜಯ ಶಿವಾಚಾರ್ಯ ಮಹಾ ಸ್ವಾಮಿಗಳು, ಸಿದ್ದನಕೊಳ್ಳದ ಧರ್ಮಾಧಿಕಾರಿ ಡಾ. ಶಿವಕುಮಾರ ಮಹಾಸ್ವಾಮಿಗಳು ಸಮ್ಮುಖ ವಹಿಸುವರು. ಜೂನ್ 23 ರಂದು ರವಿವಾರ ರಾತ್ರಿ 10.30 ಗಂಟೆಗೆ ಶ್ರೀಕುಮಾರೇಶ್ವರ ಕೃಪಾಪೋಷಿತ ಪಂ.ಪಂಚಾಕ್ಷರಿ ಗವಾಯಿಗಳವರ ನಾಟ್ಯ ಸಂಘ ಗದಗ ಅವರಿಂದ ಗಡಿಗೆ ಜಾಕಿ ತಂಗಿ ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಜೂನ್ 24 ರಂದು ಸಂಜೆ 6 ಗಂಟೆಗೆ ಕೀರ್ತನ ಸಮ್ಮೇಳನ ಕಾರ್ಯಕ್ರಮದಲ್ಲಿ ಮುಂಡರಗಿ ಸಂಸ್ಥಾನಮಠದ ಪೂಜ್ಯಶ್ರೀ ಜ. ನಾಡೋಜ ಡಾ. ಅನ್ನದಾನೀಶ್ವರ ಶಿವಯೋಗಿಗಳವರು ಸಾನಿಧ್ಯ ವಹಿಸುವರು. ಬೂದೀಶ್ವರ ಸಂಸ್ಥಾನಮಠದ ಪೂಜ್ಯಶ್ರೀ ಅಭಿನವ ಬೂದೀಶ್ವರ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಶ್ರೀಗುರು ರಕ್ಷಾ

ಲಿಂ. ಪಂ.ಪಂಚಾಕ್ಷರಿ ಗವಾಯಿಗಳ ನೂರೆಂಟು ನಾಮಾವಳಿಗಳು ಗ್ರಂಥ ಬಿಡುಗಡೆ ಶ್ರೀಗುರು ವಚನಾಮೃತ ಹಾಗೂ ಆರೋಹ ಸಿರಿ ಧ್ವನಿ ಸುರುಳಿ ಬಿಡುಗಡೆ ಕಾರ್ಯಕ್ರಮ ಜರುಗಲಿದೆ. ಇದಕ್ಕೂ ಮುನ್ನ ಬೆಳಗ್ಗೆ ಸದ್ಭಕ್ತರಿಗೆ 11 ಗಂಟೆಗೆ ಶ್ರೀಗುರು ರಕ್ಷಾ ಕಾರ್ಯಕ್ರಮ ಜರುಗಲಿದೆ. ಕಪ್ರೋತಗಿರಿ ನಂದಿವೇರಿ ಸಂಸ್ಥಾನ ಮಠದ ಪೂಜ್ಯಶ್ರೀ ಶಿವಕುಮಾರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಅಡ್ನೂರ ಬ್ರಹನ್ಮಠದ ಪೂಜ್ಯಶ್ರೀ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸುವರು.

ಸ್ವಯಂ ಉದ್ಯೋಗ ಬಡ್ಡಿ ಸಹಾಯಧನಕ್ಕೆ ಅರ್ಜಿ

ಧಾರವಾಡ: ಪ್ರಸಕ್ತ ಸಾಲಿನಲ್ಲಿ ನವಲಗುಂದ ಪುರಸಭೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಸ್ವಯಂ ಉದ್ಯೋಗ ಹಾಗೂ ಗುಂಪು ಉದ್ಯೋಗ ಕಾರ್ಯಕ್ರಮದಡಿ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕೌಶಲಾಭಿವೃದ್ಧಿ ಉದ್ಯಮೆ ಶೀಲತೆ ಹಾಗೂ ಜೀವನೋಪಾಯ ಇಲಾಖೆಯಿಂದ ಆರ್ಥಿಕ ಹಾಗೂ ಭೌತಿಕ ಗುರಿ ನಿಗಧಿ ಪಡಿಸಲಾಗಿದೆ.

ಸ್ವಯಂ ಉದ್ಯೋಗ ಹಾಗೂ ಗುಂಪು ಉದ್ಯೋಗ ಪ್ರಾರಂಭಿಸುವವರಿಗೆ ಶೇ. 7 ಕ್ಕಿಂತ ಹೆಚ್ಚಿನ ಬಡ್ಡಿ ಸಹಾಯಧನದೊಂದಿಗೆ ಬ್ಯಾಂಕಿನ ಮೂಲಕ ಸಾಲ ಸೌಲಭ್ಯ ಪಡೆಯಲು 18 ರಿಂದ 45 ವರ್ಷದೊಳಗಿನ ಯುವಕ, ಯುವತಿಯರು ಹಾಗೂ ಸ್ವ-ಸಹಾಯ ಗುಂಪುಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸುವವರು ಕಚೆರಿಯಿಂದ ಅರ್ಜಿಗಳನು ಪಡೆದು ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆದಾರಕಾರ್ಡ್, 2 ಭಾವಚಿತ್ರಗಳು ಹಾಗೂ ಆಸಕ್ತಿ ಹೊಂದಿದ ಸ್ಥಳೀಯ ಬ್ಯಾಂಕ್ ಪಾಸ್ ಬುಕ್‌ನೊಂದಿಗೆ ಜುಲೈ 15, 2024 ರೊಳಗಾಗಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ; 083802-229247 ಗೆ ಸಂಪರ್ಕಿಸಬಹುದೆಂದು ನವಲಗುಂದ ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ, ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಅಭೂತಪೂರ್ವ ಜಯಗಳಿಸಿದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ನಿವಾಸಕ್ಕೆ ತೆರಳಿ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರು ಕ್ಷೇತ್ರದ ಪರವಾಗಿ ಅಭಿನಂದಿಸಿದರು. ಈ ಸಮಯದಲ್ಲಿ ಶರಣಪ್ಪಗೌಡ ದಾನಪ್ಪಗೌಡ್ರ, ಅಡಿವೆಪ್ಪ ಮನಮಿ, ಸಿದ್ದಣ್ಣ ಕಿಟಗೇರಿ, ರಾಜಶೇಖರ ಕಂಪ್ಲಿ, ಸುಭಾಸ ಗಾಳಪ್ಪನವರ, ಪ್ರಭು ಗುಳಣ್ಣನವರ, ಸೋಮು ಪಟ್ಟಣಶೆಟ್ಟಿ, ರೋಹಿತ ಮತ್ತಿಹಳ್ಳಿ, ಮುತ್ತು ಚಾಕಲಬ್ಬಿ, ಮುತ್ತು ಗಾಳಪ್ಪನವರ, ರಾಜು ಕೊಪ್ಪದ ಉಪಸ್ಥಿತರಿದ್ದರು.

ಅರಣ್ಯ ಇಲಾಖೆಯಿಂದ ಬಹಿರಂಗ ಹರಾಜು 28ಕ್ಕೆ

ಧಾರವಾಡ: ಧಾರವಾಡ ಶಹರ ವ್ಯಾಪ್ತಿಯ ರಸ್ತೆ ಬದಿ ಅಪಾಯಕಾರಿಯಾದ 2 ಸಾಗವಾನಿ ಮರಗಳ ತೆರುವುಗೊಳಿಸಲಾಗುತ್ತದೆ.

ಬಹಿರಂಗ ಹರಾಜು ಮಾಡುವ ಕುರಿತು ವಲಯ ಅರಣ್ಯ ಅಧಿಕಾರಿ ಕಛೇರಿಯಲ್ಲಿ ಜೂನ್ 28, 2024 ರಂದು ಮಧ್ಯಾಹ್ನ 3 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದು.

ಮರ ಸಂರಕ್ಷಣಾ ಕಾಯ್ದೆ 1976 ರ ಸೆಕ್ಷನ್‌ಗಳಲ್ಲಿ ಅಗತ್ಯ ಪಡಿಸಿರುವಂತೆ ಈ ಬಗ್ಗೆ ತಕರಾರು ಸಲ್ಲಿಸಬಯಸುವರು ತಮ್ಮ ತಕರಾರನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಧಾರವಾಡ ಉಪ ವಿಭಾಗ ಧಾರವಾಡ ಹಾಗೂ ಧಾರವಾಡದ ಕೆ.ಸಿ.ಪಾರ್ಕ ಎದುರು ಅರಣ್ಯ ಸಂಕೀರ್ಣ ಮರ ಅಧಿಕಾರಿಯವರಿಗೆ ಲಿಖಿತ ರೂಪದಲ್ಲಿ ಜೂನ್ 27, 2024 ರ ಒಳಗಾಗಿ ಸಲ್ಲಿಸಬಹುದಾಗಿದೆ.

ಒಂದುವೇಳೆ ನಿಗದಿತ ದಿನಾಂಕದೊಳಗೆ ತಕರಾರು ಸಲ್ಲಿಸದಿದ್ದರೆ ನಂತರ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಅತ್ತಿಗೆ ಮೇಲಿನ ಕೋಪಕ್ಕೆ 3 ವರ್ಷದ ಮಗು ಕೊಲೆ

ಚಿಕ್ಕಬಳ್ಳಾಪುರ: ಚಿಂತಾಮಣಿ ತಾಲೂಕಿನ ನಿಮ್ಮ ಕಾಯಲಹಳ್ಳಿಯಲ್ಲಿ ಮೂರು ವರ್ಷದ ಅಣ್ಣನ ಮಗನನ್ನು ಸ್ವಂತ ಚಿಕ್ಕಪ್ಪನೇ ಹತ್ಯೆ ಮಾಡಿದ ಘಟನೆ ನಡೆದಿದೆ. ಆರೋಪಿಯನ್ನು ಬಟ್ಲಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅತ್ತಿಗೆ ಮೇಲಿನ ಕೋಪಕ್ಕೆ ಮಗುವನ್ನು ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ.

ಮಗ ಹಲ್ಲೆ ಮಾಡಿದ್ದಕ್ಕೆ ಬೇಸತ್ತ ತಂದೆ ಆತ್ಮಹತ್ಯೆ

ಸಕಲೇಶಪುರ: ಜಗಳದಲ್ಲಿ ಮಗ ತಮ್ಮ ಮೇಲೆ ಕೈಮಾಡಿದ ಕಾರಣಕ್ಕೆ ಮನನೊಂದ ತಂದೆ, ಡೆತ್ ನೋಟ್ ಬರೆದಿಟ್ಟು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಚಂಗಡಹಳ್ಳಿ ಗ್ರಾಮದಲ್ಲಿ ನಡೆದಿದೆ. ಹರೀಶ್ ಕುಮಾರ(50) ಮೃತರಾದವರು. ಗ್ರಾಮದ ಮೃತ ಹರೀಶ್ ಕುಮಾರ ಹಾಗೂ ಎಚ್.ಎಲ್.ಲಲಿತ ದಂಪತಿಗೆ ಇಬ್ಬರು ಪುತ್ರರು. ಮೊದಲನೇ ಮಗ ಲಿಖಿತ್(21) ಶನಿವಾರಸಂತೆಯಲ್ಲಿ ಬಿಕಾಂ ಓದುತ್ತಿದ್ದಾನೆ. ಎರಡನೇ ಮಗ ಋಷಿಕೇಶ್ ಮೈಸೂರಿನಲ್ಲಿ ಬಿಸಿಎ ಓದುತ್ತಿದ್ದ. ಲಿಖಿತ್ ಚಂಗಡಿಹಳ್ಳಿ ಮನೆಯಲ್ಲಿ ವಾಸವಿದ್ದರು. ಹರೀಶಕುಮಾರ್‌ಗೆ ವಿಪರೀತ ಮದ್ಯಪಾನ ಮಾಡುವ ಅಭ್ಯಾಸವಿತ್ತು. ಜೂ.16 ರಂದು ಬೆಳಿಗ್ಗೆ ಕುಡಿದು ಬಂದು ಮನೆ ಮುಂದೆ ಗಲಾಟೆ ಮಾಡುತ್ತಿದ್ದಾಗ ಮಗ ಲಿಖಿತ್ ಸಮಾಧಾನ ಮಾಡಲು ಹೋಗಿದ್ದಾನೆ. ಅವನಿಗೂ ಸಹ ಬಾಯಿಗೆ ಬಂದಂತೆ ಬೈದಿದ್ದಾರೆ. ಜೂ.18 ರಂದು ರಾತ್ರಿ 10 ಗಂಟೆಗೆ ಮತ್ತೆ ಗಲಾಟೆ ಆರಂಭಿಸಿದ್ದಾರೆ. ಇದರಿಂದ ಸಿಟ್ಟಾದ ಲಿಖಿತ್, ನಮಗೇಕೆ ತೊಂದರೆ ಕೊಡುತ್ತೀಯಾ ಎಂದು ತಂದೆಗೆ ಒಂದು ಏಟು ಹೊಡೆದಿದ್ದಾನೆ. ನಂತರ ಬೆಳಗಿನಜಾವ ನೇಣು ಬಿಗಿದುಕೊಂಡು ಹರೀಶ್‌ಕುಮಾರ್ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಮಗ ಲಿಖಿತ್, ತಂದೆಗೆ ಹೊಡೆದಿದ್ದರಿಂದ ಬೇಸರ ಮಾಡಿಕೊಂಡು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಸಳೂರು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಗುಂಡೇಟಿನಿಂದ ಒಬ್ಬನ ಕೊಂದು ಮತ್ತೊಬ್ಬ ಆತ್ಮಹತ್ಯೆ

ಹಾಸನ: ನಗರದಲ್ಲಿ ಹಾಡಹಗಲೇ ಗುಂಡಿನ ಸದ್ದು ಮೊಳಗಿದ್ದು, ಜನತೆಯನ್ನು ತಲ್ಲಣಗೊಳಿಸಿದೆ. ಜನನಿಬಿಡ ಬಡಾವಣೆಯಲ್ಲೇ ಗುಂಡಿನದಾಳಿ ನಡೆಸಿ ಸ್ನೇಹಿತನ ಜೀವತೆಗೆದ ರಿಯಲ್ ಎಸ್ಟೇಟ್ ಉದ್ಯಮಿ, ನಂತರ ತಾನೂ ಶೂಟೌ ಮಾಡಿಕೊಂಡು ಜೀವ ಕಳೆದುಕೊಂಡಿದ್ದಾನೆ. ಈ ಘಟನೆ ಗುರುವಾರ ಮಧ್ಯಾಹ್ನ ನಗರದ ಹೊಯ್ಸಳ ನಗರ ಬಡಾವಣೆಯಲ್ಲಿ ನಡೆದಿದೆ.

ಫೈರಿಂಗ್‌ನಲ್ಲಿ ಬೆಂಗಳೂರಿನ ಆಸಿಫ್ ಎಂಬಾತ, ಸ್ನೇಹಿತ ಶರಾಫತ್ ಅಲಿ ಎಂಬಾತನನ್ನು ಕೊಲೆ ಮಾಡಿದ್ದಾನೆ. ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗುತ್ತಿದೆ. ಶರಾಫತ್ ಅಲಿಗೆ ಮೊದಲು ಗುಂಡು ಹಾರಿಸಿದ ಆಸಿಫ್, ನಂತರ ತಾನೂ ಕಾರಿನಲ್ಲೇ ಗುಂಡು ಹಾರಿಸಿಕೊಂಡಿದ್ದಾನೆ.

ಕೊಲೆಯಾದ ಅಲಿ ಮತ್ತು ಆತ್ಮಹತ್ಯೆ ಮಾಡಿಕೊಂಡ ಮತ್ತು ಆಸಿಫ್ ಹೊರಜಿಲ್ಲೆಯವರು, ಆದರೆ ಹಾಸನದ ಕುಟುಂಬಗಳ ಅಳಿಯಂದಿರಾಗಿದ್ದರು ಎಂದು ತಿಳಿದುಬಂದಿದೆ. ಶುಂಠಿ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಇಬ್ಬರೂ ಪಾಲುದಾರರಾಗಿದ್ದರು.

ಜೊತೆಗೆ ಉತ್ತಮ ಸ್ನೇಹಿತರಾಗಿದ್ದರು ಎನ್ನಲಾಗಿದೆ. ಆದರೆ ಇಬ್ಬರ ವ್ಯವಹಾರದಲ್ಲಿ ಮೂಡಿದ ವೈಷಮ್ಯ ಇದೀಗ ಕೊಲೆಯಲ್ಲಿ ಅಂತ್ಯವಾಗಿದೆ.

ಗುರುವಾರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನಿವೇಶನವೊಂದರ ನೋಂದಣಿ ಇತ್ತು. ಬೆಳಗ್ಗೆ ಶರಾಫತ್ ನಿವಾಸದಲ್ಲಿ ಇಬ್ಬರೂ ಉಪಾಹಾರ ಸೇವಿಸಿ ಹೊರಟಿದ್ದರು. ಆದರೆ ನಿವೇಶನದ ಬಳಿ ಹೋಗಿದ್ದಾಗ, ಈ ಘಟನೆ ಏಕೆ ನಡೆಯಿತು ಎಂಬ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಹಾಸನ ಜಿಲ್ಲಾ ಎಸ್‌ಪಿ ಮೊಹಮ್ಮದ್ ಸುಜೀತಾ ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದರು. ಈ ಘಟನೆ ನಗರವಾಸಿಗಳನ್ನು ಬೆಚ್ಚಿ ಬೀಳಿಸಿದೆ. ಬಡಾವಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

6 ಕೋಚಿಂಗ್ ಸೆಂಟರ್‌ಗಳ ರದ್ದು: 2 ಕೇಂದ್ರಗಳಿಗೆ ನೋಟಿಸ್

ವಿಜಯಪುರ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸೂಚನೆಯಂತೆ ವಿಜಯಪುರ ನಗರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಅವರು ಆರು ಅನಧಿಕೃತ ಕೋಚಿಂಗ್ ಸೆಂಟರ್‌ಗಳನ್ನು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ. ಇನ್ನೆರಡು ಕೇಂದ್ರಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

ಶಿಕ್ಷಣ ಇಲಾಖೆಯ ಅನುಮತಿ ಪಡೆಯದೇ ಕೋಚಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ನಗರದ ಆಶ್ರಮ ರಸ್ತೆಯ ಕೌಟಿಲ್ಯ ಕೋಚಿಂಗ್ ಕ್ಲಾಸ್ , ಸಿಂದಗಿ ರಸ್ತೆಯ ಜ್ಞಾನೋದಯ ಕೋಚಿಂಗ್ ಸೆಂಟರ್, ಮನಗೂಳಿ ರಸ್ತೆಯ ವೇದಾ ಅಕಾಡೆಮಿ, ಗುರುಪಾದೇಶ್ವರ ನಗರದ ದಿಶಾ ಕೋಚಿಂಗ್ ಅಕಾಡೆಮಿ, ಆದರ್ಶ ನಗರದ ಸಕ್ಸಸ್ ಕೋಚಿಂಗ್ ಕ್ಲಾಸಸ್ ಹಾಗೂ ಸರ್ವೋತ್ತಮ ಕೋಚಿಂಗ್ ಕ್ಲಾಸಸ್ ಎಂಬ ಕೇಂದ್ರಗಳನ್ನು ಬಿಇಒ ಮುಚ್ಚಿಸಿದ್ದಾರೆ. ಅಲ್ಲದೆ, ಕೆಸಿ ನಗರ ಹಾಗೂ ಆದರ್ಶ ನಗರದ ಎಕ್ಸಲಂಟ್ ಕೋಚಿಂಗ್ ಸೆಂಟರ್ ಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದ್ದಾರೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೋಸಂಬೆ, ಕಳೆದೆರಡು ದಿನಗಳ ಕಾಲ ವಿಜಯಪುರ ನಗರದಲ್ಲಿ ನಡೆಯುತ್ತಿರುವ ಕೋಚಿಂಗ್ ಸೆಂಟರ್ ಗಳಿಗೆ ಅಧಿಕಾರಿಗಳೊಂದಿಗೆ ಖುದ್ದು ಭೇಟಿನೀಡಿ ಅಲ್ಲಿನ ಮೂಲಸೌಕರ್ಯ, ಕಾರ್ಯವೈಖರಿ ಹಾಗೂ ನೋಂದಣಿ ದಾಖಲೆಗಳು ಸೇರಿದಂತೆ ಅನೇಕ ಸಂಗತಿಗಳ ಪರಿಶೀಲನೆ ನಡೆಸಿದ್ದರು, ಅನಧಿಕೃತ ಕೋಚಿಂಗ್ ಕೇಂದ್ರಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ಭಾಗಿದಾರರ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯಲ್ಲಿಯೂ ಶಿಕ್ಷಣಾಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದರು. ಆಯೋಗದ ಸೂಚನೆಯಂತೆ ನಗರ ವಲಯ ಬಿಇಒ ಬಸವರಾಜ ತಳವಾರ ಕೋಚಿಂಗ್ ಕೇಂದ್ರಗಳ ವಿರುದ್ಧ ಕ್ರಮ ಜರುಗಿಸಿದ್ದಾರೆ.

ಜಾತಿ, ಧರ್ಮ ಮೀರಿದ್ದು ಯೋಗ: ಭವರಲಾಲ್ ಆರ್ಯ

ಪತಂಜಲಿ ಯೋಗಪೀಠದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನಲೆಯಲ್ಲಿ ಜಾಗೃತಿ ಜಾಥವನ್ನು ಆಯೋಜಿಸಲಾಗಿತ್ತು.

ಬೆಂಗಳೂರು: ಯೋಗ ಜಾತಿ, ಧರ್ಮ, ಪಂಥ ಪ್ರದೇಶವನ್ನುಮೀರಿದ್ದು, ಪ್ರತಿಯೊಬ್ಬರು ಯೋಗವನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಂತಾರಾಷ್ಟ್ರೀಯ ಯೋಗಗುರು ಭವರಲಾಲ್ ಆರ್ಯ ಅಭಿಪ್ರಾಯಪಟ್ಟರು.

ಧಾರವಾಡದ ಲಿಂಗರಾಜ ಟೌನ್‌ಹಾಲ್‌ನಲ್ಲಿ ನಡೆದ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹುಟ್ಟುಹಬ್ಬ, ಮದುವೆ, ನಾಮಕರಣ, ಉಪನಯನ ಹಬ್ಬಗಳು ಕುಟುಂಬಕ್ಕೆ ಸೀಮಿತವಾಗಿರುತ್ತದೆ. ದೀಪಾವಳಿ, ದಸರಾ, ನವರಾತ್ರಿ, ಯುಗಾದಿ ಹಿಂದುಗಳ ಹಬ್ಬ. ರಂಜಾನ್, ಈದ್ ಮಿಲಾದ್ ಮುಸ್ಲಿಂ ಬಾಂಧವರ ಹಬ್ಬ ಮತ್ತು ಕ್ರಿಸ್‌ಮಸ್, ಗುಡ್ ಫ್ರೈಡೆ ಕ್ರೈಸ್ತ ಬಾಂಧವರಿಗೆ ಹಬ್ಬಗಳಾಗಿ ಸೀಮಿತವಾಗಿದೆ. ಆದರೆ ಯಾವುದೇ ಜಾತಿ, ಧರ್ಮ, ಮತ, ಪಂಥ ಭೇದವಿಲ್ಲದೆ ಸಂಪೂರ್ಣ ಭಾರತೀಯರನ್ನು ಒಂದುಗೂಡಿಸುವ ಹಬ್ಬವೇ ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ. ಆದ್ದರಿಂದ ಜೂನ್ 21ರಂದು ಆಚರಿಸಲ್ಪಡುವ ಯೋಗ ದಿನಾಚರಣೆಯ 'ಯೋಗ ಮಹೋತ್ಸವ' ದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು. ಈ ಯೋಗದ ಹಬ್ಬ ಕೇವಲ ಅಂತರರಾಷ್ಟ್ರೀಯ ಯೋಗ ದಿನಕ್ಕೆ ಸೀಮಿತವಾಗಬಾರದು ಎಂದು ಅಭಿಪ್ರಾಯಪಟ್ಟರು.

ಪ್ರತಿನಿತ್ಯ ಒಂದು ಗಂಟೆ ಯೋಗಕ್ಕಾಗಿ ಮೀಸಲಿಟ್ಟು, ಯೋಗ ಆಸನ ಪ್ರಾಣಾಯಾಮ ಧ್ಯಾನ ಅಭ್ಯಾಸ ಮಾಡಿದರೆ, ನಾವುಗಳು ನೂರಾರು ವರ್ಷಗಳ ಕಾಲ ಆರೋಗ್ಯವಾಗಿರಲು ಸಾಧ್ಯ. ನಮ್ಮ ಎಲ್ಲಾ ಕೆಲಸ ಕಾರ್ಯಗಳು ಶ್ರೇಷ್ಠವಾಗಬೇಕೆಂದರೆ ಪ್ರತಿನಿತ್ಯ ಯೋಗ ಮಾಡಬೇಕು. ಪತಂಜಲಿ ಯೋಗ ಪೀಠ, ಕರ್ನಾಟಕದ ವತಿಯಿಂದ ನಾವೆಲ್ಲರೂ ನೆರವೇರಿಸಲಾಗಿದೆ ಎಂದರು.

ಯೋಗ ಜಾಗೃತಿ ಅಭಿಯಾನದಲ್ಲಿ ರಮೇಶ್ ಸುಲಾಕೆ, ಎಂ.ಡಿ ಪಾಟೀಲ್, ಶೈಲಜಾ ಮಾಡಿಕರ್, ಉಮಾ ಅಗಡಿ, ವಸ್ತ್ರದಮಠ್, ಕುಲಕರ್ಣಿ ಸೇರಿದಂತೆ ಅನೇಕರಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.
ಸಂಖ್ಯೆ: ಬೆಂಅಪ್ರಾ/ನಯೋಸ/CLU-283/594/2024–25 ದಿನಾಂಕ: 20–06–2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ಸಾರ್ವಜನಿಕ – ಅರೆ ಸಾರ್ವಜನಿಕ [ಶೈಕ್ಷಣಿಕ (ಪ್ರೈಮರಿ) ಮತ್ತು ಆರೋಗ್ಯ ಸಂಸ್ಥೆ (ಕ್ಲಿನಿಕ್)]** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	BIAAPA ಮಹಾಯೋಜನೆ 2021 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಮೆ॥ ಬೆಂಗಳೂರು ಸ್ಪೀಚ್ & ಹಿಯರಿಂಗ್ ಟ್ರಸ್ಟ್ (ರಿ) ಆಫೀಸ್, ಕರೀಯಪ್ಪನ ಪಾಳ್ಯ, ಹೆಣ್ಣೂರು ರೋಡ್, ಬೆಂಗಳೂರು–560084.	ಯಲಹಂಕ	ಜಾಲ	ಬಾಗಲೂರು	192/1, 192/2 & 192/5	ಒಟ್ಟು 4ಎ–01ಗುಂ	ವ್ಯವಸಾಯ	ಸಾರ್ವಜನಿಕ – ಅರೆ ಸಾರ್ವಜನಿಕ [ಶೈಕ್ಷಣಿಕ (ಪ್ರೈಮರಿ) ಮತ್ತು ಆರೋಗ್ಯ ಸಂಸ್ಥೆ (ಕ್ಲಿನಿಕ್)]

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಸದರಿ ಜಮೀನನ್ನು **ಸಾರ್ವಜನಿಕ – ಅರೆ ಸಾರ್ವಜನಿಕ [ಶೈಕ್ಷಣಿಕ (ಪ್ರೈಮರಿ) ಮತ್ತು ಆರೋಗ್ಯ ಸಂಸ್ಥೆ (ಕ್ಲಿನಿಕ್)]** ಉಪಯೋಗಕ್ಕೆ ಅಭಿವೃದ್ಧಿಪಡಿಸಿದರೆ ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಮತ್ತು ಆರೋಗ್ಯ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಆಧುನಿಕ ಶೈಕ್ಷಣಿಕ ಸೌಲಭ್ಯವುಳ್ಳ ಉತ್ತಮ ಶೈಕ್ಷಣಿಕ ಸಂಸ್ಥೆ ಹಾಗೂ ಆರೋಗ್ಯ ಸಂಸ್ಥೆ ದೊರತಂತಾಗುತ್ತದೆ. ಶೈಕ್ಷಣಿಕ ಸಂಸ್ಥೆ ಮತ್ತು ಆರೋಗ್ಯ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಶಿಕ್ಷಕರಿಗೆ ಹಾಗೂ ಆರೋಗ್ಯ ಸಂಸ್ಥೆಯ ಸಿಬ್ಬಂದಿಗಳಿಗೆ ಉತ್ತಮ ಆರೋಗ್ಯ ದೊರಕುತ್ತದೆ. ಶೈಕ್ಷಣಿಕ ಸಂಸ್ಥೆ ಮತ್ತು ಆರೋಗ್ಯ ಸಂಸ್ಥೆ ತೆರೆಯುವುದರಿಂದ ಕಛೇರಿಯಲ್ಲಿ ಕಾರ್ಯ ನಿರ್ವಯಿಸುವ ಸಿಬ್ಬಂದಿಗಳು ಉತ್ತಮ ಮತ್ತು ಇತರರಿಗೆ ಉತ್ತಮ ಕೌಶಲ್ಯ ಉದ್ಯೋಗಗಳು ದೊರೆತಂತಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ಭೂ–ಉಪಯೋಗ ವಲಯ'** ದಿಂದ **ಸಾರ್ವಜನಿಕ – ಅರೆ ಸಾರ್ವಜನಿಕ [ಶೈಕ್ಷಣಿಕ (ಪ್ರೈಮರಿ) ಮತ್ತು ಆರೋಗ್ಯ ಸಂಸ್ಥೆ (ಕ್ಲಿನಿಕ್)] ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ: ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ: 19–06–2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW-2&4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಟೆಂಡರಿಗಿಟ್ಟ ಮೊತ್ತ (GST) ಸೇರಿ	ಇಎಂಡಿ ಮೊತ್ತ	ಕರೆ ನಂ.
1	ಗೋಕಾಕ ನಗರಸಭೆ ವ್ಯಾಪ್ತಿಯಲ್ಲಿ ಪೂರೈಕೆ ಆಗುತ್ತಿರುವ 24/7 ನಿರಂತರ ನೀರು ಸರಬರಾಜು ಯೋಜನೆಗೆ ಅವಶ್ಯವಿರುವ ಹೆಚ್ಚುವರಿ ಕಾಮಗಾರಿ, ಪಂಪಸೆಟ್ ಅಳವಡಿಸುವುದು, ರೈಸಿಂಗ್ ಮೇನ್, ವಿತರಣಾ ಕೊಳವೆ ಅಳವಡಿಸುವುದು, ಜಲಸಂಗ್ರಹಾಗಾರಗಳನ್ನು ನಿರ್ಮಿಸುವುದು & ಇತ್ಯಾದಿ ಕೆಲಸ ಕೈಕೊಳ್ಳುವುದು. (Tender No. DMA/2023-24/WS/WORK_INDENT15307/Call-2)	400.00	6.00	3ನೇ
2	ಮುಗಳಖೋಡ ಪುರಸಭೆ ವ್ಯಾಪ್ತಿಯಲ್ಲಿ ವಾರ್ಡ ನಂ–01ರಲ್ಲಿ ಬಸ್ ನಿಲ್ದಾಣದ ಹತ್ತಿರ, ವಾ.ನಂ–09 ರಲ್ಲಿ ಸಂಗಪ್ಪ ಗಂಗಪ್ಪ ಯಡವಣ್ಣವರ ಮನೆಯ ಹತ್ತಿರ, ವಾ.ನಂ–13 ರಲ್ಲಿ ಉಣ್ಣಿ ಬಸವೇಶ್ವರ ಗುಡಿಯ ಹತ್ತಿರ ಮತ್ತು ವಾ.ನಂ–21ರಲ್ಲಿ ನಾಶಿ ತೋಟದಲ್ಲಿರುವ ಶ್ರೀ ಹನುಮಾನ ದೇವಸ್ಥಾನದ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡುವುದು. ಹಾಗೂ ವಾ.ನಂ–03ರಲ್ಲಿ ವಿಠಲ ಮಂದಿರದಿಂದ ಕುರಾಡೆಯವರ ಓಣಿಯವರಗೆ, ಸಣತಿಪ್ಪಗೋಳ ಓಣಿ ಹಾಗೂ ನಡುವಿನಕೇರಿ ಓಣಿಯಲ್ಲಿ ಪೈಪಲೈನ ಅಳವಡಿಸುವುದು. (Tender No. DMA/2023-24/WS/WORK_INDENT 15321/ Call-2)	34.53	0.58	6ನೇ
3	ಖಾನಾಪೂರ ಪ.ಪಂ ವ್ಯಾಪ್ತಿಯಲ್ಲಿ ಮಲಪ್ರಭಾ ನದಿಯ ಜಾಕವೆಲದಿಂದ ನಾವೇಚಾ ರಸ್ತೆಯವರೆಗೆ ಮುಖ್ಯ ಪೈಪಲೈನ ಅಳವಡಿಸುವುದು. (Tender No.DMA/2023-24/WS/WORK_INDENT15271/Call-2)	27.05	0.50	7ನೇ

ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in/#/portal/portal-home ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	05–07–202400 17–00 ಘಂಟೆ ವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	06–07–2024ರಂದು 17–01 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR /BGM/RO-NO -145/2023-24

ವಿರಾಮ
ಪ್ರತಿ ಭಾನುವಾರ

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123.
Email :itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23718487
ಸಂಖ್ಯೆ: ಮಾ.ನ.ಕಾ/ತಾ.ಶಾ/02/2024–25 ದಿನಾಂಕ: 20.06.2024

ಟೆಂಡರ್ ಪ್ರಕಟಣೆ
(Through GOK e-Procurement Portal https://kppp.karnataka.gov.in only)

2023–24 ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ಹಾಗೂ 2024–25ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಇಂಡೆಂಟ್	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಇ.ಎಂ.ಡಿ ರೂ.ಗಳಲ್ಲಿ
01	DMA/2024-25/WS/WORK_INDENT18771/CALL-2	4.72	11800.00
02	DMA/2024-25/WS/WORK_INDENT18965	20.00	50000.00
03	DMA/2024-25/WS/WORK_INDENT18986	9.00	22500.00
04	DMA/2024-25/EL/WORK_INDENT19045	15.00	37500.00
	ಕಾಲಾವಧಿ: 3 ತಿಂಗಳು		

1. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ಕ್ರ.ಸಂ: 1 ಕ್ಕೆ ದಿನಾಂಕ: **27.06.2024** ಮತ್ತು ಕ್ರ.ಸಂ: 2 ರಿಂದ 4 ದಿನಾಂಕ: **04.07.2024 ಸಂಜೆ 5.00 ಗಂಟೆಯವರೆಗೆ.**
2. ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ಕ್ರ.ಸಂ: 1 ಕ್ಕೆ ದಿನಾಂಕ: 29.06.2024 ಬೆಳಿಗ್ಗೆ 11.00 ಗಂಟೆಗೆ ಮತ್ತು ಕ್ರ.ಸಂ: 2 ರಿಂದ 4 ದಿನಾಂಕ: **05.07.2024 ಸಂಜೆ 5.30 ಗಂಟೆಗೆ** ಅಥವಾ ಪೌರಾಯುಕ್ತರು ಸೂಚಿಸುವ ದಿನಾಂಕ ದಂದು.

ಸೂಚನೆ :– ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು
ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾ.ಪ್ರ/476/ಎಸ್‌ಎಸ್‌ಸಿ/2024–25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ. ಮ.ಎ.ಕಾ. ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ–591116ತಾಲೂಕು:ಸವದತ್ತಿ. ಜಿಲ್ಲಾ:ಬೆಳಗಾವಿ. ರಾಜ್ಯ:ಕರ್ನಾಟಕ
Dn. e-mail: eemlbcnth@gmail.com Ph: - 08330-224516
ಟೆಂಡರ ಪ್ರಕಟಣೆ ಸಂಖ್ಯೆ/ಮಕಾನಿವಿ.2/ಡಿಬಿ–1/4701 /2024–25/ಇ–ಟೆಂಡರ/697&698 ದಿನಾಂಕ:19–06–2023

ಅಲ್ಪಾವಧಿ ಟೆಂಡರ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ)
(ದ್ವಿ ಲಕೋಟೆ ಪದ್ದತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ ಕಚೇರಿ ಅಡಿಯಲ್ಲಿ 4701 / ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಎರಡು ರಸ್ತೆ ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲೂಪಿ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ–ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರನ್ನು ಆಹ್ವಾನಿಸಲಾಗಿದೆ
(Work Indent Numbers. 1052 & 1053)
ಕಾಮಗಾರಿಯ ಅಂದಾಜು ಮೊತ್ತ ರೂ. 250.00 ಲಕ್ಷಗಳು.
1. ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:29–06–2024 ರಂದು ಸಂಜೆ 4.00 ಘಂಟೆವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01–07–2024 ರಂದು 11.00 ಘಂಟೆಯ ನಂತರ 3. ಆರ್ಥಿಕ ಬಿಡ್ ತೆರೆಯುವ ದಿನಾಂಕ :03–07–2024 ರಂದು 11.00 ಘಂಟೆಯ ನಂತರ

ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in , ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224516 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.

ಸಹಿ/–(ಪಿ.ವ್ಹಿ.ಮುಳ್ಳೂರ), ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ. ಮ.ಎ.ಕಾ.ನಿ.ವಿಭಾಗ.ನಂ.2 ನವಿಲುತೀರ್ಥ.
DIPR/BGM/RO-NO-140/KSMCA/2024-25

ಪೊಲೀಸರ ಜತೆ ಬಿಜೆಪಿ ಘರ್ಷಣೆ

ಮಂಗಳೂರು: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ತೊಕ್ಕೊಟ್ಟಿನಲ್ಲಿ ಗುರುವಾರ ಬಿಜೆಪಿ ನಡೆಸಿದ ಪ್ರತಿಭಟನೆಯ ವೇಳೆ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಜಟಾಪಟಿ ನಡೆದಿದೆ. ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಬಿಜೆಪಿ ಕರೆ ನೀಡಿ ದ್ದು, ಅದರಂತೆ ತೊಕ್ಕೊಟ್ಟಿನಲ್ಲಿ ರಸ್ತೆ ತಡೆದು ಪ್ರತಿಭಟಿಸಲು ಮುಂದಾದ ಬಿಜೆಪಿ ಮಂಗಳೂರು ಮಂಡಲದ ಯುವಮೋರ್ಚಾ ಅಧ್ಯಕ್ಷ ಮುರಳಿ ಕೊಣಾಜೆಯನ್ನು ರಸ್ತೆಯಿಂದ ಬದಿಗೆ ತೆರಳುವಂತೆ ಉಳ್ಳಾಲ ಇನ್‌ಸ್ಪೆಕ್ಟರ್ ಎಚ್.ಎನ್.ಬಾಲಕೃಷ್ಣ ಸೂಚಿಸಿ ತರಾಟೆಗೆ ತೆಗೆದುಕೊಂಡರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಕಾರ್ಯಕರ್ತರು ಪೊಲೀಸರೊಂದಿಗೆ ವಾಗ್ವಾದಕ್ಕಿಳಿದರು. ಕೆಲಕಾಲ ಮಾತಿನ ಚಕಮಕಿಯೂ ನಡೆಯಿತು.ತೊಕ್ಕೊಟ್ಟು ಫ್ಲೈಓವರ್ ಕೆಳಗಡೆ ಬಿಜೆಪಿಯು ಪ್ರತಿಭಟನಾ ಸಭೆ ಹಮ್ಮಿಕೊಂಡಿತ್ತು.ಬಳಿಕ ಮಧ್ಯಪ್ರವೇಶಿಸಿದ ಮಂಗಳೂರು ದಕ್ಷಿಣ ಉಪ ವಿಭಾಗದ ಪ್ರಭಾರ ಎಸಿಪಿ ರವೀಶ್ ನಾಯ್ಕ್ ಅವರು ಬಿಜೆಪಿ ಪ್ರಮುಖರಲ್ಲಿ ಮಾತುಕತೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/03/2024–25 ದಿನಾಂಕ: 18–06–2024

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2023–24 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **25–06–2024 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/453/ಅಡ್ವರ್ಟೋ/2024–25

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಧಾರವಾಡ ವಿಭಾಗ, ಧಾರವಾಡ.
ವಾಣಿಜ್ಯ ಶಾಖೆ.
ಸಂಖ್ಯೆ: ವಾಕರಸಾ/ಧಾವಿ/ಸಂ/ವಾಣಿಜ್ಯ/470/2024 ದಿನಾಂಕ: 20–06–2024

ಇ–ಟೆಂಡರ್ ಪ್ರಕಟಣೆ ಸಂಖ್ಯೆ:03/2024
(ಇ–ಪ್ರೊಕ್ಯೂರಮೆಂಟ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಧಾರವಾಡ ವಿಭಾಗ ವ್ಯಾಪ್ತಿಯ ವಿವಿಧ ಬಸ್ ನಿಲ್ದಾಣಗಳಲ್ಲಿ ಹೊಸದಾಗಿ ಎಲ್.ಇ.ಡಿ ಟಿವ್ಹಿಗಳ ಮುಖಾಂತರ ಜಾಹೀರಾತು ಪ್ರದರ್ಶಿಸಲು ಐದು (5) ವರ್ಷಗಳ ಅವಧಿಗೆ, ಖಾಲಿ ಇರುವ / ಖಾಲಿಯಾಗುವ ಖಾಯಂ ವಾಣಿಜ್ಯ ಮಳಿಗೆಗಳಿಗೆ ಐದು (5) ವರ್ಷಗಳ ಅವಧಿಗೆ, ತೆರೆದ ಸ್ಥಳಗಳಿಗೆ ಐದು / ಹತ್ತು (5/10) ವರ್ಷಗಳ ಅವಧಿಗೆ ಹಾಗೂ ಸ್ವಚ್ಛತಾ ಗುತ್ತಿಗೆ ಎರಡು (2) ವರ್ಷಗಳ ಅವಧಿಗೆ, ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ: **21–06–2024 ರಿಂದ** ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್–ಕಂ–ಹರಾಜು ಆಹ್ವಾನಿಸಲಾಗಿದೆ, ಟೆಂಡರ್–ಕಂ–ಹರಾಜು ದಸ್ತಾವೇಜುಗಳನ್ನು ದಿನಾಂಕ: **10–07–2024 ರಂದು ವೇಳೆ: 17.00 ಘಂಟೆಯವರೆಗೆ** ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ **"https://kppp.karnataka.gov.in"** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು, ದಿನಾಂಕ: **10–07–2024 ರಂದು ವೇಳೆ 17.00 ಘಂಟೆಯವರೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ: **12–07–2024 ರಂದು 16.00 ಗಂಟೆಗೆ** ಇ–ಟೆಂಡರ್ ತೆರೆಯಲಾಗುವುದು. ಇ–ಪ್ರೊಕ್ಯೂರಮೆಂಟ್ ಸೆಲ್‌ನಿಂದ DSC (Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಚೇರಿ, ವಾಕರಸಾ ಸಂಸ್ಥೆ, ಧಾರವಾಡ ವಿಭಾಗ ಧಾರವಾಡಕ್ಕೆ** ಸಂಪರ್ಕಿಸಲು ಕೋರಲಾಗಿದೆ.

ಮ್ಯಾನ್ಯುಯಲ್ ಸಂಧಾನ ಪ್ರಕಟಣೆ ಸಂಖ್ಯೆ:03/2024.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಧಾರವಾಡ ವಿಭಾಗ ವ್ಯಾಪ್ತಿಯ ವಿವಿಧ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಖಾಯಂ ವಾಣಿಜ್ಯ ಮಳಿಗೆಗಳಿಗೆ ಐದು (5) ವರ್ಷ, ತೆರೆದ ಸ್ಥಳಗಳಿಗೆ ಐದು/ಹತ್ತು (5/10) ವರ್ಷಗಳ ಅವಧಿಗೆ ಹಾಗೂ ಹೋರ್ಡಿಂಗ್ಸ್, ಗ್ಲೋಸೈನ್ ಬೋರ್ಡ್‌ಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಐದು (5) ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಮ್ಯಾನ್ಯುಯಲ್ ಸಂಧಾನ ಪ್ರಕಟಣೆ 03/24, ರ ಮೂಲಕ ದಿನಾಂಕ: **21–06–2024 ರಿಂದ ದಿನಾಂಕ: 11–07–2024 ರ ವರೆಗೆ ಕಚೇರಿ ವೇಳೆಯಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಚೇರಿ ಧಾರವಾಡ ವಿಭಾಗ ಧಾರವಾಡ** ರಲ್ಲಿ ಸಂಧಾನ ಅರ್ಜಿ ಫಾರಂ ಮತ್ತು ಸಂಸ್ಥೆಯ ಷರತ್ತು ನಿಯಮಾವಳಿಗಳನ್ನು ಪಡೆಯಬಹುದಾಗಿದೆ. ನಿಗದಿತ ಇ.ಎಂ.ಡಿ. ಮೊತ್ತದ ಡಿ.ಡಿಯನ್ನು **ವಿಭಾಗೀಯ ನಿಯಂತ್ರಣಾಧಿಕಾರಿಗಳು ವಾಕರಸಾ ಸಂಸ್ಥೆ, ಧಾರವಾಡ ವಿಭಾಗ** ರವರಿಗೆ, ಸಂದಾಯವಾಗುವಂತೆ ದಿನಾಂಕ: **11–07–2024 ರಂದು ವೇಳೆ 16.00 ಗಂಟೆಯವರೆಗೆ ಪಾವತಿಸಿ, ದಿನಾಂಕ: 12–07–2024 ರಂದು 11.00 ಗಂಟೆಗೆ ವಿಭಾಗೀಯ ಕಚೇರಿಯಲ್ಲಿ** ಸಂಧಾನದಲ್ಲಿ ಭಾಗವಹಿಸುವುದು, ಮೇಲಿನಂತೆ ಮಳಿಗೆಗಳ ಹಾಗೂ ತೆರೆದ ಸ್ಥಳಗಳ ಮಾಸಿಕ ಪರವಾನಿಗೆ ಶುಲ್ಕ, ವಿಸ್ತೀರ್ಣ, ಇ.ಎಂ.ಡಿ, ಶುಲ್ಕ ಹಾಗೂ ಇನ್ನಿತರೆ ಹೆಚ್ಚಿನ ಮಾಹಿತಿಗಾಗಿ **ವಿಭಾಗೀಯ ಕಚೇರಿ, ಧಾರವಾಡ** ಇವರಲ್ಲಿ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. **ಕಚೇರಿ ದೂರವಾಣಿ ಸಂಖ್ಯೆ: "7760996271" 7760129545 ATM, 9916538786, 7259235710.**
ಯಾವುದೇ ಕಾರಣ ನೀಡದೇ ಪ್ರಸ್ತಾವನೆಗಳನ್ನು ಸ್ವೀಕರಿಸುವ, ಮಾರ್ಪಡಿಸುವ, ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ವಾಕರಸಾ ಸಂಸ್ಥೆ, ಧಾರವಾಡ ವಿಭಾಗ.
ವಾಸಾಸಂಇ/ಧಾರವಾಡ/66/ಅಡ್ವರ್ಟೋ/2024–25

ವಿದೇಶಿಯರಿಗೆ ವೀಸಾ: ಎಚ್ಚರಿಕೆ

ಬೆಂಗಳೂರು: ವಿದೇಶಿಯರಿಗೆ ವೈದ್ಯಕೀಯ ವೀಸಾ ಮಂಜೂರು ಮಾಡುವ ಸಂದರ್ಭದಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿ, ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಬೇಕು ಎಂದು ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿಗೆ (ಎಫ್ ಆರ್‌ಆರ್‌ಒ) ಹೈಕೋರ್ಟ್ ನಿರ್ದೇಶನ ನೀಡಿದೆ.

ವೈದ್ಯಕೀಯ ವೀಸಾ ನೀಡುವುದಕ್ಕೆ ನಿರಾಕರಿಸಿದ್ದ ಎಫ್ ಆರ್‌ಆರ್‌ಒ ನಿರ್ಧಾರ ಪ್ರಶ್ನಿಸಿ ಇರಾಕ್‌ನ ಬಾಗ್ದಾದ್ ನಿವಾಸಿ ಸಗದ್ ಕರೀಂ ಇಸ್ಮಾಯಿಲ್ ಎಂಬುವರು ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಈ ನಿರ್ದೇಶನ ನೀಡಿದೆ. ಅಲ್ಲದೆ, ಅರ್ಜಿದಾರರು ಅವಧಿ ಮೀರಿ ನೆಲೆಸಿರುವುದ್ದರಿಂದ ನಿರ್ಗಮನ ಪರವಾನಗಿ ನೀಡಿ ಗಡಿಪಾರು ಮಾಡಲಾಗಿದ್ದು, ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಎರಡು ಬಾರಿ ವೈದ್ಯಕೀಯ ವೀಸಾ ನೀಡಿದ್ದು, ಎರಡು ವರ್ಷಗಳಿಗಿಂತ ಹೆಚ್ಚುಕಾಲ ನೆಲೆಸಿದ್ದಾರೆ. ಇದೀಗ ಮತ್ತೊಂದು ಅವಧಿಗೆ ವೀಸಾ ಕೋರಿರುವುದನ್ನು ಪರಿಗಣಿಸಲಾಗದು ಎಂದು ಪೀಠ ತಿಳಿಸಿದೆ.

ಸರಕಾರಿ ನೌಕರರಿಗೆ ಸಿಹಿ ಸುದ್ದಿ...

← ಮೊದಲಪುಟದಿಂದ

ಮಾಜಿ ಮುಖ್ಯ ಕಾರ್ಯದರ್ಶಿ ಕೆ.ಸುಧಾಕರ ರಾವ್ ನೇತೃತ್ವದ ಏಳನೇ ವೇತನ ಆಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಾರ್ಚ್ 16ರಂದು ಅಂತಿಮ ವರದಿ ಸಲ್ಲಿಸಿತ್ತು. ಅಂತಿಮ ವರದಿಯಲ್ಲಿ ಆಯೋಗ, ಕರ್ನಾಟಕ ಸರಕಾರಿ ನೌಕರರಿಗೆ ಶೇ.27.5 ರಷ್ಟು ವೇತನವನ್ನು ಹೆಚ್ಚಿಸುವಂತೆ ಶಿಫಾರಸು ಮಾಡಿತ್ತು.

ಇನ್ನು ಸರಕಾರದ ಈ ತೀರ್ಮಾನವನ್ನು ಸ್ವಾಗತಿಸಿರುವ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಾಕ್ಷರಿ, ರಾಜ್ಯ ಸರಕಾರಿ ನೌಕರರ ವೇತನ ಹೆಚ್ಚಳಕ್ಕೆ ವೇತನ ಆಯೋಗ ನೀಡಿರುವ ಶಿಫಾರಸನ್ನು ಒಪ್ಪಿರುವುದು ಸ್ವಾಗತಾರ್ಹವಾದುದು. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹೊರೆಯಾಗುವುದಿಲ್ಲ. ರಾಜ್ಯದ ಖಜಾನೆಗೆ ಹೆಚ್ಚಿನ ಸಂಪನ್ಮೂಲ ಒದಗಿಸುವ ಮತ್ತು ಹಂಚಿಕೆ ಸರಕಾರಿ ನೌಕರರಿಂದಲೇ ಆಗುತ್ತದೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೆಕ್ಕಾದಲ್ಲಿ ಬಿಸಿಲಿನ ಝಳಕ್ಕೆ ಯಾತ್ರಿ ಸಾವು

ಚಿತ್ರದುರ್ಗ: ಹಜ್‌ಯಾತ್ರೆಯ ವೇಳೆ ಮೆಕ್ಕಾದಲ್ಲಿ ಬಿಸಿಲಿನ ತಾಪ ಹೆಚ್ಚಾಗಿ ಭಾರತದ 90 ಯಾತ್ರಿಗಳು ಮೃತಪಟ್ಟಿದ್ದಾರೆ. ಈ ಪೈಕಿ ಚಿತ್ರದುರ್ಗ ಮೂಲದ ಮಹಿಳಾ ಯಾತ್ರಿ ಒಬ್ಬರು. ಮೆಕ್ಕಾದ ಅರ್ಫಾತ್ ಗ್ರೌಂಡ್‌ನಲ್ಲಿ ಚಿತ್ರದುರ್ಗದ ರುಕ್ಸಾನಾ ಕೌಸರ್ (63) ಮೃತಪಟ್ಟಿದ್ದಾರೆ. ನಿವೃತ್ತ ಶಿಕ್ಷಕಿ, ನಗರದ ಮಂಡಕ್ಕಿ ಭಟ್ಟಿ ಪ್ರದೇಶದ ರುಕ್ಸಾನಾ ಕೌಸರ್ ಹಜ್ ಯಾತ್ರೆಗೆ ತೆರಳಿದ್ದರು. ಬಿಸಿಲಿನ ತೀವ್ರತೆ ಹೆಚ್ಚಾಗಿ ರುಕ್ಸಾನಾ ಕೌಸರ್ ಸಾವನ್ನಪ್ಪಿದ್ದಾರೆ. ಮೃತರ ಅಂತ್ಯಸಂಸ್ಕಾರವನ್ನು ಮೆಕ್ಕಾದಲ್ಲೇ ನೆರವೇರಿಸುವ ಸಾಧ್ಯತೆ ಇದೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಆಲಮಟ್ಟಿಯಲ್ಲಿ ಮುಂದುವರಿದ ಧರಣಿ

ಆಲಮಟ್ಟಿ: ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕೃಷ್ಣಾ ತೀರ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಇಲ್ಲಿನ ಕೆಬಿಜೆಎನ್‌ಎಲ್ ಮುಖ್ಯ ಅಭಿಯಂತರರ ಕಚೇರಿ ಆವರಣದಲ್ಲಿ ಜೂ. 24 ರಿಂದ ಹಮ್ಮಿಕೊಂಡಿರುವ ಧರಣಿ ಗುರುವಾರವೂ ಮುಂದುವರಿದಿದೆ. ಧರಣಿನಿರತರು ಅರೆಬೆ ತ್ತಲೆಯಾಗಿ ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಸಂಘದ ಖಜಾಂಚಿ ಬಸವರಾಜ ದಂಡಿನ, ಅಧ್ಯಕ್ಷ ಎಂ.ಎ. ಮೇಟಿ, ಗೋಪಾಲ ಬಂಡಿವಡ್ಡರ ಎಮ್.ಆರ್ ಕಮತಗಿ ಮಾತನಾಡಿ, ಕಳೆದ ವರ್ಷ ಕರೆದ ಕಾಮಗಾರಿಗಳ ಬಿಡ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಮಂಗಡಹಣ ಆಯಾ ಗುತ್ತಿಗೆದಾರರಿಗೆ ಮರಳಿಸದ ಕಾರಣ ಹಾಗೂ ಒಂದು ವರ್ಷದಿಂದ ಯಾವುದೇ ಕಾಮಗಾರಿ ಕರೆಯದ ಗುತ್ತಿಗೆದಾರರ ಕುಟುಂಬಗಳು ಸಂಕಷ್ಟಕ್ಕೀಡಾಗಿವೆ. ಮನೆ ಮಠಗಳನ್ನು ಕಳೆದುಕೊಂಡು ನಿಗಮದಲ್ಲಿ ಸಣ್ಣಸಣ್ಣ ಕೆಲಸಗಳನ್ನು ಮಾಡಿಕೊಂಡು ಬದುಕನ್ನು ಕಟ್ಟಿಕೊಂಡ ಸಣ್ಣ ಗುತ್ತಿಗೆದಾರರಿಗೆ ತೊಂದರೆಯಾಗಿದೆ.

ಪೋಕ್ಸೊ ಪ್ರಕರಣ: 20 ವರ್ಷ ಜೈಲು ಶಿಕ್ಷೆ

ಕಲಬುರಗಿ: ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾಗಿದ್ದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದ ಯುವಕನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೊ) ನ್ಯಾಯಾಲಯ 20 ವರ್ಷ ಜೈಲುಶಿಕ್ಷೆ ವಿಧಿಸಿದೆ. ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ದರಿಯಾಪುರ ತಾಲ್ಲೂಕಿನ ಅರಳಾ ಗ್ರಾಮದ ವಿಕ್ಕಿ (25) ಶಿಕ್ಷೆಗೊಳಗಾದ ವ್ಯಕ್ತಿ. ಆಳಂದ ತಾಲ್ಲೂಕಿನ ಗ್ರಾಮವೊಂದರ ಪಿಯುಸಿ ವಿದ್ಯಾರ್ಥಿನಿಯೊಂದಿಗೆ ಇನ್ಸ್ಟಾಗ್ರಾಂ ಮೂಲಕ ಚಾಟ್ ಮಾಡುತ್ತಿದ್ದ ವಿಕ್ಕಿ, ಆಕೆ ಸಂದೇಶ ಕಳುಹಿಸಿದ್ದ ವಿಡಿಯೋ ಹಾಗೂ ಚಿತ್ರಗಳ ಸ್ಕ್ರೀನ್‌ಶಾಟ್ ತೆಗೆದುಕೊಂಡಿದ್ದ. ತನ್ನೊಂದಿಗೆ ಬಾರದಿದ್ದರೆ ವಿಡಿಯೋ ಹರಿಯಬಿಟ್ಟು ಮಾನ ಕಳೆಯುವುದಾಗಿ ಬೆದರಿಸಿದ್ದ ಆತ, 2023ರ ಮಾರ್ಚ್‌ನಲ್ಲಿ ಅರಳಾ ಗ್ರಾಮದ ತನ್ನ ಮನೆಗೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಆಳಂದ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಐವರ ಮೇಲೆ ಹುಚ್ಚುನಾಯಿ ದಾಳಿ

ತುಮಕೂರು: ತುಮಕೂರಿನಲ್ಲಿ ಹುಚ್ಚುನಾಯಿ ಹಾವಳಿ ಹೆಚ್ಚಾಗಿದೆ. ಗೋಕುಲ ಬಡಾವಣೆಯಲ್ಲಿ ಗುರುವಾರ 5ಕ್ಕೂ ಹೆಚ್ಚು ಮಂದಿ ಮೇಲೆ ನಾಯಿ ದಾಳಿಮಾಡಿದ್ದು, ಓರ್ವ ಬಾಲಕಿ ಗಂಭೀರವಾಗಿ ಗಾಯಗೊಂಡಿದ್ದಾಳೆ. ಗೋಕುಲ ಬಡಾವಣೆಯಲ್ಲಿ ಕಾಣಿಸಿಕೊಂಡ ಹುಚ್ಚುನಾಯಿ, ಮನೆ ಮುಂದೆ ಆಟವಾಡುತ್ತಿದ್ದ 9 ವರ್ಷದ ಬಾಲಕಿ ಮೇಲೆ ದಾಳಿ ಮಾಡಿದೆ. ಬಾಲಕಿಯ ಕೈ, ಕಾಲಿಗೆ ಕಚ್ಚಿರುವ ಹುಚ್ಚುನಾಯಿ, ಮನೆಯಲ್ಲಿ ಸಾಕಿದ್ದ ಎರಡು ನಾಯಿಗಳ ಮೇಲೆಯೂ ದಾಳಿ ಮಾಡಿದೆ. ಹೊರಗಡೆಯಿಂದ ಬರುತ್ತಿರುವ ನಾಯಿಗಳ ಹಾವಳಿಯಿಂದ ಸ್ಥಳೀಯರಲ್ಲಿ ಆತಂಕ ಹೆಚ್ಚಾಗಿದೆ. ವರ್ತುಲ ರಸ್ತೆ ಸಮೀಪವಿರುವುದರಿಂದ, ಬೇರೆ ಕಡೆಯಿಂದ ರಿಂಗ್ ರಸ್ತೆ ಬಳಿ ನಾಯಿಗಳನ್ನು ತಂದು ಬಿಟ್ಟುಹೋಗುತ್ತಿದ್ದು, ಕೂಡಲೇ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಭೇಟಿ ಕೊಟ್ಟ ತುಮಕೂರು ಮಹಾನಗರಪಾಲಿಕೆ ಆಯುಕ್ತ ಬಿ.ವಿ. ಅಶ್ವಿಜಾ, ಗಾಯಗೊಂಡಿದ್ದ ಬಾಲಕಿಯ ಆರೋಗ್ಯ ವಿಚಾರಿಸಿದರು. ಪಾಲಿಕೆ ವತಿಯಿಂದ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಜನಾರ್ದನ ರೆಡ್ಡಿ ಕ್ಷಮೆ ಕೇಳಲಿ: ಸಲೀಂ ಅಹ್ಮದ್

ಹುಬ್ಬಳ್ಳಿ: ತೈಲಬೆಲೆ ಹೆಚ್ಚಳ ವಿಷಯವಾಗಿ ಮುಖ್ಯಮಂತ್ರಿ ವಿರುದ್ಧ ಕೆಟ್ಟ ಪದ ಬಳಸಿದ ಶಾಸಕ ಜನಾರ್ದನ ರೆಡ್ಡಿ ಕೂಡಲೇ ಕ್ಷಮೆಯಾಚಿಸಬೇಕು ಎಂದು ವಿಧಾನಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಆಗ್ರಹಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೆಡ್ಡಿ ಎಲ್ಲಿದ್ದವರು, ಎಲ್ಲಿ ಇದ್ದು ಬಂದವರು ಎಂಬುದು ನಾಡಿಗಷ್ಟೇ ಅಲ್ಲ ದೇಶಕ್ಕೇ ಗೊತ್ತಿರುವ ಸಂಗತಿ. ತೈಲಬೆಲೆ ಹೆಚ್ಚಳ ಬಗ್ಗೆ ಪ್ರಜಾಸತ್ತಾತ್ಮಕ ರೀತಿ ಪ್ರತಿಭಟಿಸಲಿ. ಆದರೆ ಸಿಎಂ ಬಗ್ಗೆ ರೆಡ್ಡಿ ಬಳಸಿದ ಪದ ಖಂಡನೀಯ ಎಂದರು.

ಶಿಗ್ಗಾವಿ ಸೇರಿದಂತೆ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಈಗಾಗಲೇ ತಯಾರಿಗೆ ಮುಂದಾಗಿದೆ. ಶಿಗ್ಗಾವಿಗೆ ಪಕ್ಷ ಸೂಚಿಸುವವರು ಅಭ್ಯರ್ಥಿ ಆಗಲಿದ್ದಾರೆ. ಕಾಂಗ್ರೆಸ್ ಪಕ್ಷ ಉಪ ಚುನಾವಣೆ, ಸ್ಥಳೀಯ ಸಂಸ್ಥೆಗಳ ಹಾಗೂ 2028 ವಿಧಾನಸಭೆ ಚುನಾವಣೆಗೂ ಸಂಘಟನಾತ್ಮಕ ತಯಾರಿ ಕೈಗೊಂಡಿದೆ ಎಂದು ಸಲೀಂ ಅಹಮದ್ ತಿಳಿಸಿದರು.

ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ | ಕೆಜಿಎಫ್‌ನಲ್ಲಿ ಮರು ಗಣಿಗಾರಿಕೆಗೆ ಒಪ್ಪಿಗೆ | ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ತೆರಿಗೆ ವಸೂಲಿಗೆ ಸ್ವಸಹಾಯ ಸಂಘಗಳ ಬಳಕೆ | ಶಾಲೆಗಳಿಗೆ ಉಚಿತ ವಿದ್ಯುತ್

ಅಂಬೇಡ್ಕರ್ ಫೋಟೋ ಕಡ್ಡಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಸೇರಿದಂತೆ ಸರಕಾರಿ ಕಾರ್ಯಕ್ರಮಗಳನ್ನು ಇನ್ನುಮುಂದೆ ಗಾಂಧೀಜಿ ಅವರ ಭಾವಚಿತ್ರದೊಂದಿಗೆ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಫೋಟೋವನ್ನು ಕಡ್ಡಾಯವಾಗಿ ಇಡಬೇಕು ಎಂದು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ಇದರೊಂದಿಗೆ ಕೆಜಿಎಫ್‌ನಲ್ಲಿ ಗಣಿ ಗುತ್ತಿಗೆ, ಸರಕಾರಿ ಶಾಲಾ, ಕಾಲೇಜುಗಳಲ್ಲಿ ಉಚಿತ ವಿದ್ಯುತ್ ಮತ್ತು ನೀರಿನ ಸೌಲಭ್ಯ ಯೋಜನೆ, ತೆರಿಗೆ ಸಂಗ್ರಹಕ್ಕೆ ಸ್ವಸಹಾಯ ಗುಂಪುಗಳ ಬಳಕೆ ಸೇರಿದಂತೆ ವಿವಿಧ ವಿಷಯಗಳಿಗೆ ಅನುಮತಿ ನೀಡಲಾಗಿದೆ.

ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ಇಷ್ಟು ದಿನ ಸರಕಾರಿ ಕಾರ್ಯಕ್ರಮಗಳಲ್ಲಿ ಗಾಂಧೀಜಿ ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡಬೇಕಿತ್ತು. ಇನ್ನು ಮುಂದೆ ಗಾಂಧೀಜಿ ಅವರ ಭಾವಚಿತ್ರದೊಂದಿಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಹ ಕಡ್ಡಾಯವಾಗಿಡಲು ಸಂಪುಟ ಸಭೆ ನಿರ್ಧರಿಸಿದೆ ಎಂದರು.

ಇನ್ನು ಗಣಿ ಗುತ್ತಿಗೆ ಅವಧಿ ಮುಗಿದ ಕೆಜಿಎಫ್ ಪ್ರದೇಶದಲ್ಲಿ ಕೇಂದ್ರ ಸರಕಾರ ಮರು ಗಣಿಗಾರಿಕೆ ಚಟುವಟಿಕೆ ಕೈಗೊಳ್ಳಲು ರಾಜ್ಯ ಸಚಿವ ಸಂಪುಟ ಸಭೆ ಅನುಮತಿ ನೀಡಿದೆ. ನಿಷ್ಕ್ರಿಯವಾಗಿದ್ದ 1,304 ಎಕರೆ ಪ್ರದೇಶದಲ್ಲಿ ಗಣಿ ಗುತ್ತಿಗೆ ಚಟುವಟಿಕೆ ಮುಂದುವರಿಸುವ ಕೇಂದ್ರದ ಪ್ರಸ್ತಾವನೆಗೆ ಸರಕಾರ ಸಮ್ಮತಿಸಿದೆ. 2022-23ನೇ ಸಾಲಿನವರೆಗೆ 75.24 ಕೋಟಿ ಹೊಣೆಗಾರಿಕೆ ಬಾಕಿ ಮೊತ್ತ ಹಾಗೂ 2023-24ನೇ ಸಾಲಿನ ಮೊತ್ತವನ್ನೂ ಸಹ ರಾಜ್ಯಕ್ಕೆ ಪಾವತಿಸುವಂತೆ ಕೆಜಿಎಫ್‌ನಲ್ಲಿರುವ ಭಾರತ್ ಚಿನ್ನದ ಗಣಿ ಸಂಸ್ಥೆಯವರಿಗೆ ನಿರ್ದೇಶನ ನೀಡುವಂತೆ ಕೇಂದ್ರ ಸರಕಾರಕ್ಕೆ ಕೋರಲಾಗಿದೆ ಎಂದು ಹೇಳಿದರು.

ಉಪನ್ಯಾಸಕರ ಕೊರತೆಗೆ ಸಂಬಂಧಿಸಿದಂತೆ ಉಪಸಮಿತಿ: ಉಪನ್ಯಾಸಕರ ಕೊರತೆ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಹಲವು ಹಳೆ ವಿವಿಗಳಲ್ಲಿ ನಿವೃತ್ತರಾದ ಬಳಿಕ ಖಾಲಿ ಹುದ್ದೆಗಳನ್ನು ತುಂಬಿಲ್ಲ. ವೇತನ, ಪಿಂಚಣಿಗೆ ಸಮಸ್ಯೆಯಾಗಿದೆ. ಜ್ಞಾನದ ಕೊಡು-ಕೊಳ್ಳುವಿಕೆ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ ಎಂಬುದನ್ನು ಗಂಭೀರವಾಗಿ ಪರಿಗಣಿಸಿದ್ದು, ಸಂಪುಟ ಉಪಸಮಿತಿ ರಚಿಸಿ, ಪರಿಹಾರ ಹುಡುಕಲು ನಿರ್ಣಯಿಸಲಾಗಿದೆ ಎಂದರು.

ಪ್ರಮುಖಾಂಶ

- ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ ಯೋಜನೆಯಲ್ಲಿ ರಾಜ್ಯದ ಆರು ವಿವಿಗಳು ಆಯ್ಕೆಯಾಗಿದ್ದು, ಈ ವಿವಿಗಳಿಗೆ ಕೇಂದ್ರ ದಿಂದ 167.86 ಕೋಟಿ ಹಾಗೂ ರಾಜ್ಯದ 111.91 ಕೋಟಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ.
- ರಾಜ್ಯದ 46,829 ಸರಕಾರಿ ಶಾಲೆ, 1,234 ಸರಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ ಮತ್ತು ನೀರಿನ ಸೌಲಭ್ಯ ಯೋಜನೆಗೆ 29.19 ಕೋಟಿ ರು. ಒದಗಿಸಲು ಒಪ್ಪಿಗೆ.
- ವಿಧಾನ ಮಂಡಲದ ಅಧಿವೇಶನ ದಿನಾಂಕ ನಿಗದಿಪಡಿಸಲು ಸಿಎಂಗೆ ಅಧಿಕಾರ ನೀಡಲು ನಿರ್ಧಾರ.
- ವಸತಿ ಶಾಲೆಯ ಮಕ್ಕಳಿಗೆ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮವನ್ನು ರೋಟರಿ ಸಹಭಾಗಿತ್ವದಲ್ಲಿ ಆಯೋಜನೆಗೆ ಒಪ್ಪಿಗೆ.
- ಹಾಸನದ ಮೊಸಳೆಹಳ್ಳಿ ನೂತನ ಸರಕಾರಿ ಎಂಜಿನಿಯರಿಂಗ್ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗೆ ಪರಿಷ್ಕೃತ 59.57 ಕೋಟಿ ರು.ಗೆ ಅನುಮೋದನೆ.

ಸಂಪುಟ ಸಭೆಯಲ್ಲಿ ನೀಟ್ ಅಕ್ರಮದ ಬಗ್ಗೆಯೂ ಕಳವಳ ವ್ಯಕ್ತವಾಯಿತು. ತಮಿಳುನಾಡಿನ ರೀತಿ ರಾಜ್ಯದಲ್ಲೂ ಪ್ರತ್ಯೇಕ ಪ್ರವೇಶ ಪರೀಕ್ಷೆ ನಡೆಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ಉನ್ನತ ಶಿಕ್ಷಣ ಸಚಿವರು ಸರಕಾರದ ನಿಲುವನ್ನು ಮುಂದೆ ತಿಳಿಸುತ್ತಾರೆ ಎಂದು ಹೇಳಿದರು.

ಬಾಹ್ಯ ನೆರವಿನೊಂದಿಗೆ ಪ್ರಗತಿಪಥ

ಐದು ವರ್ಷದ ವಾರ್ಷಿಕ ನಿರ್ವಹಣಾ ಯೋಜನೆ ಯನ್ನು ಒಳಗೊಂಡಿರುವ ಬಾಹ್ಯ ನೆರವಿನೊಂದಿಗೆ ಪ್ರಗತಿ ಪಥ ಯೋಜನೆಯಲ್ಲಿ 7,110 ಕಿ.ಮೀಗಳ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು 5190 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಸಂಪುಟ ಒಪ್ಪಿಗೆ ನೀಡಿದೆ. ಈ ಯೋಜನೆಯನ್ನು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಆಯಾ ವಿಧಾನಸಭೆ ಕ್ಷೇತ್ರದಲ್ಲಿ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಕಾಮಗಾರಿಗಳನ್ನು ಸೂಕ್ತ ಮೊತ್ತದ ಪ್ಯಾಕೇಜ್‌ಗಳನ್ನಾಗಿ ಮಾಡಿ ಟೆಂಡರ್ ಮೂಲಕ ಕರೆಯಲು ಹಾಗೂ 2024-25ನೇ ಸಾಲಿನಲ್ಲಿ ಡಿ.ಪಿ.ಆರ್ ತಯಾರಿಕೆಗೆ 28 ಕೋಟಿಗಳನ್ನು ನೀಡಲು ಆರ್ಥಿಕ ಇಲಾಖೆಯನ್ನು ಕೋರಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ತೆರಿಗೆ ವಸೂಲಿಗೆ ಮಹಿಳಾ ಸ್ವಸಹಾಯ ಗುಂಪುಗಳ ಬಳಕೆ

ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ತೆರಿಗೆ ವಸೂಲಿಗೆ ಸಂಬಂಧಿಸಿದಂತೆ ಇನ್ನು ಸ್ಥಳೀಯ ಮಟ್ಟದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳನ್ನು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿನ ನೀರಿನ ಬಳಕೆ ಶುಲ್ಕದ ಬಾಕಿ ಮೊತ್ತ ಬಡ್ಡಿ ಸಹಿತ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರಸ್ತುತ ವಾರ್ಷಿಕ ಬೇಡಿಕೆ ಸಹಿತ ವಸೂಲಿಗೆ ಅಧಿಕಾರಿಗಳೊಂದಿಗೆ ಸ್ವಸಹಾಯ ಗುಂಪುಗಳನ್ನು ಬಳಸಿಕೊಳ್ಳಲು ಮುಂದಾಗಿದೆ. ಈ ಗುಂಪುಗಳಿಗೆ ವಸೂಲಾದ ಮೊತ್ತದಲ್ಲಿನ ಶೇ.5 ರಷ್ಟನ್ನು ಪ್ರೋತ್ಸಾಹ ಧನ ರೂಪದಲ್ಲಿ ನೀಡಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಹೇಳಿದರು.

33 ವಿಶೇಷ ಠಾಣೆಗೆ ಒಪ್ಪಿಗೆ

ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಒಟ್ಟು 33 ಘಟಕಗಳನ್ನು ವಿಶೇಷ ಪೊಲೀಸ್ ಠಾಣೆಗಳೆಂದು ಘೋಷಣೆ ಮಾಡಲು ಸಚಿವ ಸಂಪುಟ ತಾತ್ವಿಕ ಒಪ್ಪಿಗೆ ನೀಡಿದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ಗೃಹ ಇಲಾಖೆಗಳು ಎರಡೂ ಸೇರಿ ಸಚಿವ ಸಂಪುಟದ ಈ ತೀರ್ಮಾನ ಅನುಷ್ಠಾನಗೊಳಿಸಲು ಸಿಬ್ಬಂದಿ ಮತ್ತು ಇತರ ವಿವರಗಳನ್ನು ಅಂತಿಮಗೊಳಿಸಲು ಸೂಚಿಸಲಾಗಿದೆ. ಇದು ಪೊಲೀಸ್ ಠಾಣೆಗಳ ಮೇಲಿನ ಕೆಲಸದ ಹೊರೆಯನ್ನು ತಗ್ಗಿಸುವ ಉದ್ದೇಶವನ್ನು ಹೊಂದಿದೆ ಎಂದು ಅವರು ವಿವರಿಸಿದರು.

ಉದ್ಯೋಗ ಸೃಷ್ಟಿಗೆ ಮೊದಲ ಆದ್ಯತೆ: ಶೆಟ್ಟರ್ ಭರವಸೆ

ಬೈಲಹೊಂಗಲ: ಲೋಕಸಭಾ ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ. ಕಳಸಾ ಬಂಡೂರಿ ನಾಲಾ ಜೋಡಣೆ ಯೋಜನೆ ಜಾರಿ, ಉದ್ಯೋಗಾವಕಾಶ ಸೃಷ್ಟಿಸಲು ಮೊದಲ ಆದ್ಯತೆ ನೀಡುವುದಾಗಿ ಸಂಸದ ಜಗದೀಶ ಶೆಟ್ಟರ್ ಹೇಳಿದ್ದಾರೆ..

ಪಟ್ಟಣದ ವಿಜಯ ಸೋಶಿಯಲ್ ಕ್ಲಬ್‌ನಲ್ಲಿ ಬಿಜೆಪಿ ಏರ್ಪ ಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಬೆಳಗಾವಿ ಜಿಲ್ಲೆಯಿಂದ ನನಗೆ ಆಶೀರ್ವಾದ ಮಾಡಿದ್ದೀರಿ. ಇದು ಕಾರ್ಯಕರ್ತರ ಅಭೂತಪೂರ್ವ ಜಯ ಎಂದರು. ನಮ್ಮಲ್ಲಿ ಒಗ್ಗಟ್ಟು ಇಲ್ಲದ್ದರಿಂದ ವಿಧಾನಸಭಾ ಕ್ಷೇತ್ರದ ಅಧಿಕಾರ ಕಳೆದುಕೊಂಡಿದ್ದೇವೆ. ಮುಂಬರುವ ಜಿ.ಪಂ., ತಾ.ಪಂ., ಗ್ರಾ.ಪಂ., ಪುರಸಭೆ ಸೇರಿದಂತೆ ಕಾರ್ಯಕರ್ತರ ಚುನಾವಣೆಗೆ ಬರುತ್ತೇನೆ. ಇನ್ನುಮುಂದೆ ಎಲ್ಲ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುವಂತಾಗಬೇಕು ಎಂದರು. ಬೆಳಗಾವಿ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಎಲ್ಲರ ಸಲಹೆ-ಸೂಚನೆ ಪಡೆಯುತ್ತಿದ್ದೇನೆ. ದಿ.ಸುರೇಶ ಅಂಗಡಿ ಅವರ ರೈಲ್ವೆ ಯೋಜನೆ ನನಗುದಿಗೆ ಬಿದ್ದಿದ್ದು ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಸಭೆ ಕರೆದು ಭೂಸ್ವಾಧೀನ ಪೂರ್ಣಗೊಳಿಸಲು ಕಟ್ಟುನಿಟ್ಟಾಗಿ ಆದೇಶ ನೀಡಲಾಗುವುದು. ಕೆಲ ಹಿತಾಸಕ್ತಿಗಳು ಇದನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಶೆಟ್ಟರ್ ಆರೋಪಿಸಿದರು.

ಸಿದ್ದು ಸಿಎಂ ಆಗಿರುವವರೆಗೆ ಕಾಂಗ್ರೆಸ್ ಸರ್ಕಾರ ಸೇಫ್

ಬೆಳಗಾವಿ: ಸಿದ್ದರಾಮಯ್ಯ ಸಿಎಂ ಆಗಿರುವವರೆಗೆ ಮಾತ್ರ ಕಾಂಗ್ರೆಸ್ ಸರಕಾರ ಇರುತ್ತದೆ. ಅವರ ಅವಧಿ ಮುಗಿದ ನಂತರ ಹೇಳಲಾಗಲ್ಲ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿ, ಬೆಳಗಾವಿ ನಗರದ ಯೋಗಿಕೊಳ್ಳ ಪ್ರದೇಶದಲ್ಲಿ 6 ಟಿಎಂಸಿ ನೀರು ನಿಲ್ಲಿಸಲು ಉದ್ದೇಶಿಸಿ ಮಾಡಲಾದ ಘಟ್ಟಿ ಬಸವಣ್ಣ ಡ್ಯಾಂ ಯೋಜನೆಯನ್ನು ನಿಲ್ಲಿಸಲು ಮಹಾನಾಯಕ ಪ್ಲಾನ್ ಮಾಡಿದ್ದ. ಯೋಜನೆ ನಿಲ್ಲಿಸಲು ಅಧಿಕಾರಿಗಳಿಂದ ಸತೀಶ್ ಜಾರಕಿಹೊಳಿ ಹೆಸರು ಹೇಳಿಸಿದ್ದ. ಆದರೆ ನಾನು ಸತೀಶ ಜತೆ ಮಾತನಾಡಿದಾಗ ಆ ಯೋಜನೆಯನ್ನು ನಿಲ್ಲಿಸುವ ಉದ್ದೇಶ ನನ್ನದಲ್ಲ ಎಂದಿದ್ದಾರೆ. ಮಹಾನಾಯಕ ಸುಳ್ಳುಹೇಳಿ ಯೋಜನೆ ನಿಲ್ಲಿಸುವ ಹುನ್ನಾರ ನಡೆಸಿದ್ದ. ಆದರೆ ಅದು ಸಾಧ್ಯವಾಗಲಿಲ್ಲ. ಮುಂದಿನ ದಿನಗಳಲ್ಲಿ ಅದನ್ನು ಅನುಷ್ಠಾನಗೊಳಿಸಿ ಈ ಭಾಗದ ರೈತರು ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಸೈಬರ್ ಕನ್ನ; ಅರ್ಧ ಕೋಟಿ ವಂಚನೆ

ತುಮಕೂರು: ತಾಯಿ ಮಗನಿಗೆ 36 ಲಕ್ಷ ಮೋಸ

ತುಮಕೂರು: ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು ಎಂಬ ಆಮಿಷಕ್ಕೆ ಒಳಗಾಗಿ ತಾಯಿ, ಮಗ 36.85 ಲಕ್ಷ ಕಳೆದುಕೊಂಡಿದ್ದಾರೆ. ಮತ್ತೊಬ್ಬರಿಗೆ 17.61 ಲಕ್ಷ ವಂಚಿಸಿದ್ದು, ಎರಡು ಪ್ರಕರಣಗಳಲ್ಲಿ 54.46 ಲಕ್ಷ ಕಳೆದುಕೊಂಡಿದ್ದಾರೆ.

ಶಿರಾ ಗೇಟ್‌ನ ಕೆ.ಆರ್.ಮಂಗಳಮ್ಮ, ಪುತ್ರ ಜಿ.ರಕ್ಷಿತ್ ಸೈಬರ್ ಕಳ್ಳರ ಬಲೆಗೆ ಬಿದ್ದು ಮೋಸಹೋಗಿದ್ದಾರೆ. ಆರೋಪಿಗಳು ಏ. 18ರಂದು ರಕ್ಷಿತ್ ವಾಟ್ಸ್‌ಆ್ಯಪ್ ಸಂಖ್ಯೆಗೆ ಒಂದು ಲಿಂಕ್ ಕಳುಹಿಸಿದ್ದಾರೆ. ಅದನ್ನು ಕ್ಲಿಕ್ ಮಾಡಿದ ತಕ್ಷಣ ಅವರ ಮೊಬೈಲ್ ಸಂಖ್ಯೆಯನ್ನು ಬಿ38 ಪ್ರೊಫೆಸರ್ ರೊಬರ್ಟ್ ಸ್ಟಾಕ್ ಅನಾಲಿಸಿಸ್ ಎಕ್ಸ್‌ಚೇಂಜ್ ಗ್ರೂಪ್ ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ. ಈ ಗ್ರೂಪ್‌ನಲ್ಲಿ ಷೇರು ವ್ಯವಹಾರದಲ್ಲಿ ಹೂಡಿಕೆ ಮಾಡಿ ಹೆಚ್ಚಿನ ಲಾಭ ಪಡೆಯಬಹುದು ಎಂದು ನಂಬಿಸಿದ್ದಾರೆ. ಇದನ್ನು ನಂಬಿದ ಇಬ್ಬರೂ ಮೇ 24ರವರೆಗೆ ವಿವಿಧ ಖಾತೆಗಳಿಗೆ 26.85 ಲಕ್ಷ ರು. ವರ್ಗಾಯಿಸಿದ್ದಾರೆ. ತಿಂಗಳ ನಂತರ ಶೇ. 50ರಷ್ಟು ಹಣ ವಾಪಸ್ ಬರುತ್ತದೆ ಎಂದು ವಂಚಕರು ಹೇಳಿದ್ದಾರೆ. ಜೂನ್ 10ರಂದು ಮತ್ತೆ 10 ಲಕ್ಷ ವರ್ಗಾಯಿಸಿದ್ದಾರೆ. ಹಂತಹಂತವಾಗಿ ಒಟ್ಟು 36.85 ಲಕ್ಷ ಹಣ ಕಳೆದುಕೊಂಡಿದ್ದಾರೆ.

ಮತ್ತೊಂದು ಪ್ರಕರಣ: ಮತ್ತೊಂದು ಪ್ರಕರಣದಲ್ಲಿ ಬಟವಾಡಿಯ ಚೌಡೇಶ್ವರಿ ನಗರದ ಎಂ.ಮಂಜುನಾಥ್ ಎಂಬುವರಿಗೆ 17.61 ಲಕ್ಷ ರು. ವಂಚಿಸಲಾಗಿದೆ. ಸೈಬರ್ ಆರೋಪಿಗಳು ಎರಡು ಪ್ರಕರಣಗಳಲ್ಲಿ 54.46 ಲಕ್ಷ ರು.ಗಳನ್ನು ತಮ್ಮ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ.

ಮಂಜುನಾಥ್ ಫೇಸ್‌ಬುಕ್‌ನಲ್ಲಿ ಟ್ರೇಡಿಂಗ್‌ಗೆ ಸಂಬಂಧಿಸಿದ ಜಾಹೀರಾತು ವೀಕ್ಷಿಸಿ ಅದರಲ್ಲಿದ್ದ ಲಿಂಕ್ ಕ್ಲಿಕ್ ಮಾಡಿ, ಜಿಎಫ್‌ಎಸ್‌ಎಲ್ ಎಂಬ ಆ್ಯಪ್ ಡೌನ್ಲೋಡ್ ಮಾಡಿಕೊಂಡಿದ್ದಾರೆ. ನಂತರ ಮಂಜುನಾಥ್ ಮೊಬೈಲ್ ಸಂಖ್ಯೆಯನ್ನು ಎ-137 ಜಿಎಫ್‌ಎಸ್‌ಎಲ್ ಅಫಿಷಿಯಲ್ ಸ್ಟಾಕ್ ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ. ಈ ಗ್ರೂಪ್‌ನಲ್ಲಿ ಟ್ರೇಡಿಂಗ್ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ. ಮೇ 12ರಿಂದ ಜೂನ್ 11ರ ವರೆಗೆ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ 17,61,958 ಹಣ ವರ್ಗಾಯಿಸಿದ್ದಾರೆ. ಇದರಲ್ಲಿ ಅವರಿಗೆ ಕೇವಲ 1 ಸಾವಿರ ಮಾತ್ರ ವಾಪಸ್ ಹಾಕಿದ್ದಾರೆ.

ಗೋಣಿಕೊಪ್ಪಲಿನಲ್ಲಿ ಹಳೆಯ ಕಟ್ಟಡ ಕುಸಿತ: 9 ಮಂದಿ ರಕ್ಷಣೆ

ಮಡಿಕೇರಿ: ಹಳೆಯ ವಾಣಿಜ್ಯ ಕಟ್ಟಡವೊಂದು ಇದ್ದಕ್ಕಿದ್ದಂತೆ ಕುಸಿದು ಬಿದ್ದ ಪರಿಣಾಮ ಹಲವರು ಗಾಯಗೊಂಡಿರುವ ಘಟನೆ ಕೊಡಗು ಜಿಲ್ಲೆಯ ಗೋಣಿಕೊಪ್ಪ ಪಟ್ಟಣದಲ್ಲಿ ನಡೆದಿದೆ. ಗುರುವಾರ ಮಧ್ಯಾಹ್ನ ಕಟ್ಟಡ ನೆಲಸಮಗೊಂಡಿದ್ದು, ಅಗ್ನಿಶಾ ಮಕ ದಳ ಮತ್ತು ಎನ್‌ಡಿಆರ್‌ಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿ 9 ಮಂದಿಯನ್ನು ರಕ್ಷಿಸಿದ್ದಾರೆ. ಆರು ಮಂದಿ ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದು, ತೀವ್ರವಾಗಿ ಗಾಯಗೊಂಡಿರುವ ಒಬ್ಬರನ್ನು ಮೈಸೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಗೋಣಿಕೊಪ್ಪ ಪೊಠಾಣೆಯ ಅಧಿಕಾರಿಗಳು, ಗ್ರಾ.ಪಂ ಪ್ರತಿನಿಧಿಗಳು, ಅಧಿಕಾರಿಗಳು, ಎನ್ ಡಿಆರ್‌ಎಫ್ ಅಧಿಕಾರಿಗಳು ಕಾರ್ಯಾಚರಣೆಗೆ ಸಹಕಾರ ನೀಡಿದರು. ಕಟ್ಟಡದಲ್ಲಿದ್ದ ಮಳಿಗೆಗಳಲ್ಲಿ ಬಿರಿಯಾನಿ ಸೆಂಟರ್ ಮತ್ತು ಮಟನ್ ಸ್ಟಾಲ್‌ಗಳಿದ್ದವು. ಅದೃಷ್ಟವಶಾತ್ ಮಳಿಗೆಗಳಲ್ಲಿ ಇದ್ದವರು ಅಪಾಯದಿಂದ ಪಾರಾಗಿದ್ದಾರೆ.

ಜಯದೇವ, ಜಿಮ್ಸ್ ಆಸ್ಪತ್ರೆಗೆ ಆರ್.ಅಶೋಕ್ ಭೇಟಿ

ಸರಕಾರಕ್ಕೆ ನೀರು ಪೂರೈಸಲು ಯೋಗ್ಯತೆಯಿಲ್ಲ: ಬಿಜೆಪಿ ಕಿಡಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಸರಕಾರಿ ಆಸ್ಪತ್ರೆಗಳಲ್ಲಿ ಜೀವ ಉಳಿಸುವ ಕಾರಣಕ್ಕಾಗಿ ಕೈಗೊಳ್ಳುವ ಶಸ್ತ್ರಚಿಕಿತ್ಸೆಗೂ ನೀರು ಪೂರೈಸಲಾಗದಷ್ಟು ರಾಜ್ಯ ಸರಕಾರ ಯೋಗ್ಯತೆ ಕಳೆದುಕೊಂಡಿದೆ ಎಂದು ಪ್ರತಿಪಕ್ಷದ ನಾಯಕ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಆರ್.ಅಶೋಕ್ ಟೀಕಿಸಿದ್ದಾರೆ.

ಗುರುವಾರ ಇಲ್ಲಿನ ಜಯದೇವ ಹಾಗೂ ಜಿಮ್ಸ್ ಆಸ್ಪತ್ರೆಗೆ ಭೇಟಿನೀಡಿದ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಅಶೋಕ್, ನೀರಿಲ್ಲದೆ ಜಯದೇವ ಆಸ್ಪತ್ರೆಯಲ್ಲಿ ಮೂರು ದಿನಗಳವರೆಗೆ ಆಪರೇಷನ್ ಮಾಡದಿರುವುದು ಜಯದೇವ ಸಂಸ್ಥೆಯ ಗೌರವವನ್ನು ಕಾಂಗ್ರೆಸ್ ಸರಕಾರ ಮಣ್ಣುಪಾಲು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜಯದೇವ ಆಸ್ಪತ್ರೆಗೆ ಪ್ರತಿದಿನ 300 ರಿಂದ 400 ರೋಗಿಗಳು ಬರುತ್ತಾರೆ. ಕಳೆದ ಜೂನ್ 16,17,18ರಂದು ಸಮರ್ಪಕವಾಗಿ ನೀರು ಪೂರೈಕೆಯಾಗದ ಕಾರಣಕ್ಕಾಗಿ ತುರ್ತು ಹೃದಯ ಶಸ್ತ್ರಚಿಕಿತ್ಸೆ ಕೈಗೊಳ್ಳಲಾಗಿಲ್ಲ. ಈ ಮೂರು ದಿನಗಳ ಕಾಲ ತುರ್ತು ಹೃದಯ ಶಸ್ತ್ರಚಿಕಿತ್ಸೆ ಕೈಗೊಳ್ಳದೆ ಜನರ ಜೀವಗಳೊಂದಿಗೆ ಚೆಲ್ಲಾಟ ಆಡಲಾಗಿದೆ ಎಂದು ವಾಗ್ದಾಳಿ ನಡೆಸಿದರು. ದೇಶ-ವಿದೇಶದಿಂದ ರೋಗಿಗಳು ಜಯದೇವಕ್ಕೆ ಬಂದು ಚಿಕಿತ್ಸೆ ಪಡೆಯುತ್ತಿದ್ದರು. ಅಲ್ಲದೇ, ಇಡೀ ದೇಶದಲ್ಲಿ ಹೃದಯ ಸಂಬಂಧಿ ಕಾಯಿಲೆಗಾಗಿ 200 ಬೆಡ್ ಇರುವ ಜಯದೇವ ಆಸ್ಪತ್ರೆಯ ಗೌರವಕ್ಕೆ ಧಕ್ಕೆ ಬಂದಿದೆ. ಆಪರೇಷನ್ ಮಾಡಲು ನೀರಿಲ್ಲ, ರೋಗಿಗಳಿಗೆ ಕುಡಿಯಲು ನೀರಿಲ್ಲ. ಸರಕಾರದಲ್ಲಿ ದುಡ್ಡಿಲ್ಲ, ದಿವಾಳಿಯಾಗಿದೆ. ಕೇವಲ 20 ಲಕ್ಷ ಖರ್ಚು ಮಾಡಿ ಆಸ್ಪತ್ರೆಗೆ ನೀರಿನ ವ್ಯವಸ್ಥೆ ಮಾಡಲು ಆಗದಷ್ಟು ಸರಕಾರಕ್ಕೆ ದಾರಿದ್ರ್ಯ ಬಂದಿದೆ ಎಂದು ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

> ಜಿಮ್ಸ್ ಹಾಗೂ ಜಯದೇವದಲ್ಲಿ ಮೂರು ದಿನ ನೀರು ಇಲ್ಲ ಎಂಬ ಬಗ್ಗೆ ಇನ್ನೊಬ್ಬರ ಮೇಲೆ ಹಾಕುವ ಕೆಲಸ ಮಾಡುತ್ತಿದ್ದಾರೆ. ವೈದ್ಯರನ್ನು ಪ್ರಶ್ನಿಸಿದರೆ ಕಾರ್ಪೊರೇಷನ್‌ನವರ ಮೇಲೆ. ಕಾರ್ಪೋರೇಷನವರನ್ನು ಪ್ರಶ್ನಿಸಿದರೆ ಎಲ್ ಆ್ಯಂಡ್ ಟಿ ಕಂಪನಿ ಮೇಲೆ ಆರೋಪ ಮಾಡುತ್ತಿದ್ದಾರೆ. ಇದಕ್ಕೆ ಮಹಾನಗರ ಪಾಲಿಕೆ ಆಯುಕ್ತರು ಜವಾಬ್ದಾರಿ ಹೊತ್ತುಕೊಳ್ಳಬೇಕು.
> **ಆರ್.ಅಶೋಕ್, ಪ್ರತಿಪಕ್ಷ ನಾಯಕ**

ಮಂತ್ರಾಲಯ ಮಠದ ಲೋಕೋತ್ತರ ಕಾರ್ಯ | ಸುಬುಧೇಂದ್ರ ತೀರ್ಥ, ವಿಶ್ವವಲ್ಲಭ ತೀರ್ಥರ ಸಾನಿಧ್ಯ

ಹರಿದ್ವಾರದಲ್ಲಿ ರಾಘವೇಂದ್ರ ಮಠ, ಅತಿಥಿಗೃಹ ಲೋಕಾರ್ಪಣೆ

ವಿಶ್ವವಾಣಿ ಸುದ್ದಿಮನೆ ಹರಿದ್ವಾರ

ಸಪ್ತಮೋಕ್ಷದಾಯಕ ಕ್ಷೇತ್ರಗಳಲ್ಲಿ ಒಂದಾದ ಉತ್ತರಾಖಂಡದ ಹರಿದ್ವಾರದಲ್ಲಿ ಬುಧವಾರ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಸೇರಿದ ನೂತನ ರಾಯರ ಮಠ ಹಾಗೂ ಅತಿಥಿಗೃಹ ಲೋಕಾರ್ಪಣೆಗೊಂಡಿತು. ಹರಿದ್ವಾರದ ಹರಿಪುರ ಕುಲಾನ್‌ನಲ್ಲಿರುವ ಸುಸಜ್ಜಿತ ಅತಿಥಿಗೃಹವನ್ನು ಸೊಂದಾ ವಾದಿರಾಜಮಠದ ಶ್ರೀ ವಿಶ್ವವಲ್ಲಭ ತೀರ್ಥರು ಲೋಕಾರ್ಪಣೆಗೈದರು. ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥರು ಸಾನಿಧ್ಯವಹಿಸಿದ್ದರು.

ಅತಿಥಿಗೃಹವನ್ನು ಉದ್ಘಾಟಿಸಿದ ವಿಶ್ವವಲ್ಲಭ ತೀರ್ಥರು, ಇತ್ತೀಚಿನ ವರ್ಷಗಳಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠ ಕೈಗೊಂಡಿರುವ ಅಭಿವೃದ್ಧಿಕಾರ್ಯಗಳಲ್ಲಿ ಈ ಪವಿತ್ರ ಕಾರ್ಯವು ಪ್ರಮುಖವಾಗಿದೆ. ರಾಘವೇಂದ್ರ ಸ್ವಾಮಿಗಳು ಲೋಕಮಾನ್ಯರು ಮತ್ತು ಕಾಮಧೇನು ಕಲ್ಪವೃಕ್ಷ ಸದೃಶರು. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥರು ಸಹ, ಅಭಿನವ ಕಾಮಧೇನುವಿನ ಸ್ವರೂಪದಲ್ಲಿ ರಾಯರ ಭಕ್ತರ ಇಷ್ಟಾರ್ಥಗಳನ್ನು ನೀಡುವವರಾಗಿದ್ದಾರೆ. ಈ ಕಾರ್ಯ ಅತ್ಯಂತ ಶ್ಲಾಘನೀಯ ಎಂದರು.

ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಸುಬುಧೇಂದ್ರ ತೀರ್ಥರು, ಉತ್ತರಭಾರತವೂ ಸೇರಿದಂತೆ ದೇಶದ ಎಲ್ಲ ಕಡೆಯ ಭಕ್ತರು ಸಪ್ತಮೋಕ್ಷದಾಯಕ ಕ್ಷೇತ್ರವಾದ ಹರಿದ್ವಾರಕ್ಕೆ ಅಪಾರ ಸಂಖ್ಯೆಯಲ್ಲಿ ಆಗಮಿಸಿ ಧಾರ್ಮಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಆದ್ದರಿಂದ ಗಂಗಾನದಿಯ ಸಮೀಪದಲ್ಲಿಯೇ ಮಠ ಹಾಗೂ ಅತಿಥಿಗೃಹವನ್ನು ನಿರ್ಮಿಸಿ ಭಕ್ತರ ಅನುಕೂಲಕ್ಕಾಗಿ ಲೋಕಾರ್ಪಣೆ ಮಾಡಲಾಗಿದೆ. ನಿರ್ಮಾಣ ಕಾರ್ಯದ ಸಂಪೂರ್ಣ ವೆಚ್ಚವನ್ನು ಶ್ರೀಮಠವೇ ಭರಿಸಿದೆ ಎಂದು ತಿಳಿಸಿ, ಇದರ ಪ್ರಯೋಜನವನ್ನು ಎಲ್ಲರೂ ಪಡೆಯಬೇಕೆಂದು ಹೇಳಿದರು.

ತಮಿಳುನಾಡು ಮೂಲದ ಸ್ಥಳೀಯ ಕೈಗಾರಿಕೋದ್ಯಮಿ ದೇವಸೇನಾ ಅವರ ಮೇಲುಸ್ತುವಾರಿಯಲ್ಲಿ ಮತ್ತು ರಾಯಚೂರಿನ ಶ್ರೀನಿವಾಸ್ ರಾವ್ ಕಸಬೆ ಅವರ ಮಾರ್ಗದರ್ಶನದಲ್ಲಿ ಈ ಅತಿಥಿಗೃಹ ನಿರ್ಮಾಣಗೊಂಡಿದೆ. ಸಮಾರಂಭದಲ್ಲಿ ಉತ್ತರಕಾಂಡ್‌ನ ಮಾಜಿ ಸಚಿವ ಕೌಶಿಕ್, ಉದ್ಯಮಿಗಳಾದ ವಿ.ಜಿ.ಕಿರಣ್ ಕುಮಾರ್, ಕೆ.ಆರ್. ನಾಗೇಂದ್ರ, ಎನ್.ಎಂ ಪ್ರಸಾದ್, ಪಂಡಿತ ಬೇ.ನ .ವಿಜಯೀಂದ್ರಾಚಾರ್, ಶ್ರೀಪಾದ ಪುತ್ರ, ಮಂತ್ರಾಲಯದ ರಾಜಾ ಎಸ್.ಅಪ್ರಮೇಯ ಆಚಾರ್ ಮತ್ತು ಶ್ರೀಮಠದ ಸಿಬ್ಬಂದಿಗಳಾದ ಪ್ರಕಾಶ್, ವೈ ಪ್ರಸಾದ್ ಪಿ.ಜಗೀರ್‌ದಾರ್ ಸೇರಿದಂತೆ ನೂರಾರು ಮಂದಿ ಭಕ್ತರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಸುಮಾರು ಏಳು ಕೋಟಿ ರು. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಅತಿಥಿ ಗೃಹದಲ್ಲಿ ನೆಲಮಹಡಿ ಸೇರಿದಂತೆ ಎರಡು ಮಹಡಿಗಳನ್ನು ಒಳಗೊಂಡಿದೆ. 20 ರೂಮ್ ಹಾಗೂ ಎರಡು ಡಾಮೆಟ್ರಿ ಇದೆ.ಭೋಜನಶಾಲೆ, ಲಿಫ್ಟ್ ಸೌಲಭ್ಯವಿದ್ದು, ಸುಮಾರು 25ರಿಂದ 30 ವಾಹನಗಳ ನಿಲುಗಡೆ ಅವಕಾಶ ಕಲ್ಪಿಸಲಾಗಿದೆ. ನಿತ್ಯ ಉಚಿತ ಪ್ರಸಾದ ವ್ಯವಸ್ಥೆಯನ್ನು ಶ್ರೀಮಠ ಕಲ್ಪಿಸಿದೆ.

ಉತ್ತರಕಾಂಡದ ಹರಿದ್ವಾರದಲ್ಲಿ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ವತಿಯಿಂದ ನಿರ್ಮಾಣಗೊಂಡಿರುವ ರಾಯರ ಮಠ ಹಾಗೂ ಅತಿಥಿಗೃಹವನ್ನು ಸೋಂದಾ ವಾದಿರಾಜ ಮಠದ ವಿಶ್ವವಲ್ಲಭ ತೀರ್ಥರು ಉದ್ಘಾಟಿಸಿದರು. ಮಂತ್ರಾಲಯದ ಶ್ರೀ ಸುಬುಧೇಂದ್ರ ತೀರ್ಥರು, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಶ್ರೀನಿವಾಸ ಕಸಬೆ ಮುಂತಾದವರು ಇದ್ದರು.

ಮಂತ್ರಾಲಯದ ಸಾಮಾಜಿಕ ಸೇವೆ: ವಿಶ್ವೇಶ್ವರ ಭಟ್ ಪ್ರಶಂಸೆ

ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿದ್ದ ಮುಖ್ಯ ಅತಿಥಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠ ಉಳಿದೆಲ್ಲ ಮಠಗಳಿಗೆ ಮಾದರಿಯಾಗಿ ಧಾರ್ಮಿಕ ಹಾಗೂ ಸಾಮಾಜಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಸುಬುಧೇಂದ್ರ ತೀರ್ಥರು ಪೀಠಾಧಿಪತಿಗಳಾದ ನಂತರ ಕೇವಲ ಮಂತ್ರಾಲಯ ಸುಕ್ಷೇತ್ರವೊಂದೇ ಅಲ್ಲದೇ, ಉಳಿದಂತೆ ನೂರಾರು ಶಾಖಾಮಠಗಳು ಸಹ ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಸದಾಚಾರ ವಿಚಾರ, ಧರ್ಮ ಜಾಗೃತಿ ಕುರಿತಂತೆ ವ್ಯಾಪಕ ಚಟುವಟಿಕೆಯಲ್ಲಿ ತೊಡಗಿರುವುದು ಅಭಿನಂದನಾರ್ಹ ಎಂದರು.

ವಿಶ್ವವಾಣಿ

ಸಂಪಾದಕೀಯ

ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಅಗತ್ಯ

ದೇಶದಲ್ಲಿ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶಾವಕಾಶ ಕಲ್ಪಿಸುವ ನೀಟ್ (ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ) ಪರೀಕ್ಷೆಯಲ್ಲಿ ವ್ಯಾಪಕ ಅಕ್ರಮ ನಡೆದ ಆರೋಪ ಕೇಳಿ ಬಂದ ಬೆನ್ನಲ್ಲೇ ಕಾಲೇಜು ಉಪನ್ಯಾಸಕರ ನೇಮಕ ಮತ್ತು ಫೆಲೋಶಿಪ್‌ಗೆ ಮಾನದಂಡವಾಗಿ ಯುಜಿಸಿ ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲೂ ಅಕ್ರಮಗಳು ನಡೆದ ಬಗ್ಗೆ ವರದಿಗಳು ಬಂದಿವೆ. ಪರೀಕ್ಷೆ ಪಾರದರ್ಶಕವಾಗಿ ನಡೆಯದ ಹಿನ್ನೆಲೆಯಲ್ಲಿ ಯುಜಿಸಿ-ನೆಟ್ ಪರೀಕ್ಷೆಯನ್ನು ರದ್ದುಪಡಿಸುವಂತೆ ಶಿಕ್ಷಣ ಸಚಿವಾಲಯ ಆದೇಶ ನೀಡಿದೆ. ಈ ಬಗ್ಗೆ ಸಿಬಿಐ ತನಿಖೆಗೂ ಶಿಫಾರಸು ಮಾಡಿದೆ. ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳುವ ಹೊಂಗನಸಿನಲ್ಲಿ ವರ್ಷಗಳ ಕಾಲ ಶ್ರಮಪಟ್ಟು ಈ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಾರೆ. ಆದರೆ ಕೆಲವೇ ಕೆಲವು ಸಮಾಜಘಾತುಕ ಶಕ್ತಿಗಳ ಕಾರಣಕ್ಕಾಗಿ ಇವರೆಲ್ಲರ ಭವಿಷ್ಯ ಅಡಕತ್ತರಿಯಲ್ಲಿ ಸಿಕ್ಕಿರುವುದು ದುರದೃಷ್ಟಕರ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ನಿಗಾ ವ್ಯವಸ್ಥೆ ಇರುವ ಇಂದಿನ ದಿನಗಳಲ್ಲೂ ಒಂದರಿಂದ ಮೂರು ಗಂಟೆ ಅವಧಿಯ ಪರೀಕ್ಷೆಯನ್ನು ಆಕ್ಷೇಪಗಳಿಗೆ ಅವಕಾಶವಿಲ್ಲದಂತೆ ನಡೆಸಲು ಸಾಧ್ಯವಾಗುತ್ತಿಲ್ಲ ಎನ್ನುವುದು ನಾಚಿಕೆಗೇಡಿನ ಸಂಗತಿ. ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಯಿಂದ ಹಿಡಿದು ಜೆಇಇ, ನೀಟ್, ನೆಟ್ ಪರೀಕ್ಷೆಗಳವರೆಗೂ ಔಟ್ ಆಫ್ ಸಿಲೆಬಸ್ ಪ್ರಶ್ನೆಗಳನ್ನು ಕೇಳುವುದು, ಗದ್ದಲವಾದ ಬಳಿಕ ಕೃಪಾಂಕಗಳನ್ನು ನೀಡುವುದು ಇತ್ತೀಚಿನ ದಿನಗಳಲ್ಲಿ ಮಾಮೂಲಿಯಾಗಿದೆ. ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಯೊಂದಿಗೆ ಆನ್‌ಲೈನ್ ಮೂಲಕ ಪರೀಕ್ಷೆ ನಡೆಸಿದ ಬಳಿಕವೂ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವ ಅರ್ಹತಾ ಪರೀಕ್ಷೆಗಳಲ್ಲಿ ನಕಲು ನಿಂತಿಲ್ಲ. ಉಪನ್ಯಾಸಕರ ಅರ್ಹತಾ ಪರೀಕ್ಷೆಯಲ್ಲೂ ಈ ಚಾಳಿ ಮುಂದುವರಿದೆ. ನೀಟ್ ಪರೀಕ್ಷೆ ವಿವಾದವನ್ನು ಈಗ ಸ್ವತಃ ಸುಪ್ರೀಂಕೋರ್ಟ್ ವಿಚಾರಣೆಗೆತ್ತಿಕೊಂಡಿದೆ. ಈ ಮಧ್ಯೆ, ತಮಿಳುನಾಡಿನಂತಹ ರಾಜ್ಯಗಳು ನೀಟ್ ಪರೀಕ್ಷೆಯಿಂದ ದೂರವುಳಿದಿವೆ. ಕರ್ನಾಟಕವೂ ರಾಜ್ಯಮಟ್ಟದ ಪರೀಕ್ಷೆ ಮೂಲಕ ವೈದ್ಯ ಸೀಟುಗಳನ್ನು ಹಂಚಲು ಬೇಡಿಕೆ ಮುಂದಿಟ್ಟಿದೆ. ಇಲ್ಲಿ ಪರೀಕ್ಷೆ ಯಾರು ನಡೆಸುತ್ತಾರೆ ಎಂಬುದು ಮುಖ್ಯವಲ್ಲ, ಹೇಗೆ ಮತ್ತು ಎಷ್ಟು ಪಾರದರ್ಶಕವಾಗಿ ನಡೆಸುತ್ತಾರೆ ಎನ್ನುವುದು ಮುಖ್ಯ. ಪರೀಕ್ಷಾ ಮಂಡಳಿಯ ಸಿಬ್ಬಂದಿ ಇಲ್ಲವೇ ಕೇಂದ್ರದ ಉಸ್ತುವಾರಿಗಳ ನೆರವಿಲ್ಲದೆ ಇಂತಹ ಅಕ್ರಮಗಳನ್ನು ಎಸಗಲು ಸಾಧ್ಯವಿಲ್ಲ. ಕೋಟ್ಯಂತರ ಯುವ ಜನರ ಭವಿಷ್ಯವನ್ನು ನಿರ್ಧರಿಸುವ ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡುವವರು, ನಕಲು ಮಾಡಲು ಸಹಕರಿಸುವವರು ಮತ್ತು ನಕಲು ಮಾಡಿದವರನ್ನು ಅತ್ಯಂತ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ನಕಲು ಮಾಡಿ ಸಿಕ್ಕಿ ಬಿದ್ದವರಿಗೆ ಮತ್ತೆಂದೂ ಪರೀಕ್ಷೆ ಬರೆಯಲು ಅವಕಾಶ ಸಿಗಬಾರದು. ಎಲ್ಲಕ್ಕಿಂತ ಮುಖ್ಯವಾಗಿ ವ್ಯವಸ್ಥೆಯಲ್ಲಿನ ಲೋಪಗಳನ್ನು ಮೊದಲು ಸರಿಪಡಿಸಬೇಕು.

ಸೊಂಪಾದಕೀಯ

ಹುಟ್ಟುಗುಣ ಸುಟ್ರೂ ಹೋಗಲ್ಲ

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರಿಗೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, ಪ್ರಾಣ ಬಿಟ್ಟೇವು, ಜಾತಿ ಬಿಡೆವು ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿರುವ ಇತ್ತೀಚಿನ ಎರಡು ಉದಾಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಮುಂದೆ ನಿಂತು ಅಂತಿಮ ಕಾರ್ಯ ಮಾಡಿದ್ದಾರೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದೆ. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ ಕಾಲ್ಡ್ ನಾಗರೀಕ ಸಮಾಜದ ಜನ, ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದಾರೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು ಹುಟ್ಟು ಗುಣ ಸುಟ್ಟರೂ ಹೋಗಲ್ಲ ಅತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, ಇವರ ಹುಟ್ಟುಗುಣ, ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ ಅಂತ ಜನ ಮಾತಾಡಿಕೊಳ್ಳುವ ಹಾಗಾಗಿರೋದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆ ಮಾತನ್ನು ಅಕ್ಷರಶಃ ನಿಜ ಮಾಡಿದ್ದಾರೆ. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಈಗ ಸತ್ತು ಹೆಣವಾದವರನ್ನೂ ಹೆಣಗಾಡಿಸುತ್ತಿರೋದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ಜೋರ್ಡಾನ್ ಕುರಿತು

ಸಾಮಾನ್ಯವಾಗಿ ಯಾವ ದೇಶಕ್ಕೆ ಹೋದರೂ, ಯಾರೂ ಅಲ್ಲಿನ ನದಿಯನ್ನು ನೋಡದೇ ವಾಪಸ್ ಬರುವುದಿಲ್ಲ. ಅಷ್ಟಕ್ಕೂ ಎಲ್ಲಾ ದೇಶಗಳ ರಾಜಧಾನಿಗಳು ನದಿ ದಂಡೆಯ ಮೇಲೆಯೇ ನಿರ್ಮಾಣಗೊಂಡಿವೆ. ನದಿಗಳೇ ನಾಗರಿಕತೆಯ ತೊಟ್ಟಿಲು ತಾನೇ. ಥೇಮ್ಸ್ ನದಿ ಲಂಡನ್ನಿನ ಹೃದಯಭಾಗದಲ್ಲಿ ಹಾದು ಹೋದರೆ, ಸಿಯೆನಾ ನದಿ ಪ್ಯಾರಿಸ್‌ನಲ್ಲಿ, ಮಾಸ್ಕೊವಾ ನದಿ ಮಾಸ್ಕೊದಲ್ಲಿ ಹಾದು ಹೋಗುತ್ತವೆ. ಇದಕ್ಕೆ ದಿಲ್ಲಿಯೂ ಹೊರತಲ್ಲ. ಜೋರ್ಡಾನಿಗೆ ಹೆಸರು ಬಂದಿದ್ದೇ ಜೋರ್ಡಾನ್ ನದಿಯಿಂದ. ಆದರೆ ಆರು ದಿನ ಆ ದೇಶದಲ್ಲಿ ಓಡಾಡುವಾಗ, ಆ ನದಿಯ ಅಸ್ತಿತ್ವವೇ ಅನುಭವಕ್ಕೆ ಬರಲಿಲ್ಲ. ಮದಾಬಾ ಸನಿಹದಲ್ಲಿರುವ ಮುಜೀಬ್‌ನಲ್ಲಿ ಅಣೆಕಟ್ಟೆನೋ ಕಂಡಿತು. ನಾವು ಅಲ್ಲಿಗೆ ಹೋದಾಗ, ಅದರ ಹಿಂಬದಿ ನೀರಿರಬಹುದು ಎಂದು ಯೋಚಿಸಿದರೆ, ಅಲ್ಲಿ ಹತ್ತಾರು ಕುರಿಗಳು ಮೇಯುತ್ತಿರುವುದು ಕಾಣಿಸಿತು. ಅಣೆಕಟ್ಟಿನ ಸಿಮೆಂಟು ಕುರುಹು ಇಲ್ಲದಿದ್ದರೆ ಅಲ್ಲೊಂದು ನದಿಯಿತ್ತು ಎಂಬುದು ಸಹ ಗೊತ್ತಾಗುವುದಿಲ್ಲ. ಜೋರ್ಡಾನಿನ ದಕ್ಷಿಣ ತುದಿಯಲ್ಲಿರುವ ಅಕಾಬಾ ಕೊಲ್ಲಿಯಿಂದ ಸಮುದ್ರ ನೀರನ್ನು ಸಿಹಿ ನೀರಾಗಿ (desalination) ಪರಿವರ್ತಿಸಿ, ದೇಶದ ಪ್ರಮುಖ ನಗರಗಳಿಗೆ ಸರಬರಾಜು ಮಾಡಲಾಗುತ್ತದೆ. ರಾಜಧಾನಿ ಅಮ್ಮಾನ್ ಮತ್ತು ಉತ್ತರ ತುದಿಯಲ್ಲಿರುವ ಇದ್ರಿಬ್ ನಗರಗಳಿಗೆ ಇಸ್ರೇಲ್‌ನಿಂದ ನೀರು ಪೂರೈಕೆಯಾಗುತ್ತದೆ. ಅರವತ್ತರ ದಶಕದಲ್ಲಿ ಇಸ್ರೇಲ್-ಜೋರ್ಡಾನ್ ನಡುವಿನ 'ಆರು ದಿನಗಳ ಯುದ್ಧ'ಕ್ಕೆ ಜೋರ್ಡಾನ್ ನದಿ ನೀರು ಹಂಚಿಕೆಯೂ ಒಂದು ಕಾರಣವಾಗಿತ್ತು. ಜೋರ್ಡಾನ್ ನದಿ ಇಸ್ರೇಲಿನ ಉತ್ತರದ 'ಸೀ ಆಫ್ ಗೆಲಿಲಿ'ಯಲ್ಲಿ ಹುಟ್ಟಿ 251 ಕಿಮೀ ದಕ್ಷಿಣಾಭಿಮುಖವಾಗಿ ಹರಿದು ಮೃತ ಸಮುದ್ರವನ್ನು ಸೇರುತ್ತದೆ. ಈ ನದಿಯ ಪಶ್ಚಿಮದ ದಂಡೆಯಲ್ಲಿರುವುದರಿಂದ ಪ್ಯಾಲೆಸ್ಟೈನ್ ಗೆ ವೆಸ್ಟ್ ಬ್ಯಾಂಕ್ ಎಂದು ಹೆಸರು. ಇಸ್ರೇಲ್ ಕೂಡ ಈ ನದಿಯ ಪಶ್ಚಿಮಕ್ಕಿದೆ. ಜುದಾಯಿಗಳು ಮತ್ತು ಕ್ರಿಶ್ಚಿಯನ್‌ರಿಗೆ ಈ ನದಿ ಪವಿತ್ರವಾದುದು. ಇಸ್ರೇಲ್, ಜೋರ್ಡಾನ್ ಮತ್ತು ಸಿರಿಯಾ ಈ ಮೂರೂ ದೇಶಗಳು ಜೋರ್ಡಾನ್ ನದಿಗೆ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಕಾಲುವೆ ಮತ್ತು ಅಣೆಕಟ್ಟುಗಳನ್ನು ನಿರ್ಮಿಸಿಕೊಂಡಿರುವುದರಿಂದ ಆ ನದಿಯ ಮುಖಜ ಭೂಮಿಯನ್ನೇ ಹಾಳುಗೆಡವಿವೆ. ಹೀಗಾಗಿ ಜೋರ್ಡಾನ್ ನದಿ ಜೋರ್ಡಾನಿನಲ್ಲೇ ಅಲ್ಲಲ್ಲಿ ಸಣ್ಣ ತೊರೆಯಂತೆ, ಝರಿಯಂತೆ ಹರಿಯುತ್ತದೆ. ವರ್ಷದಲ್ಲಿ ಮೂರ್ನಾಲ್ಕು ತಿಂಗಳು ಸಂಪೂರ್ಣ ಬತ್ತಿ ಹೋಗುವುದುಂಟು. ಹೀಗಾಗಿ ಜೋರ್ಡಾನ್ ದೇಶ ಅದೇ ಹೆಸರಿನ ನದಿಯ ಹೆಸರನ್ನಿಟ್ಟುಕೊಂಡು, ನೀರಿನ ಅಭಾವವನ್ನು ಎದುರಿಸುತ್ತಿರುವುದು ವಿಪರ್ಯಾಸವೇ ಸರಿ. ಅದೇ ನೀರನ್ನು ತಾನು ಸಂಪೂರ್ಣ ಬಳಸಿಕೊಂಡು, ಜೋರ್ಡಾನಿಗೆ ಇಸ್ರೇಲಿಗಳು ಆ ನೀರನ್ನು ಮಾರಾಟ ಮಾಡುತ್ತಿರುವುದು ಸಹ ವಿಪರ್ಯಾಸವೇ. ಜೋರ್ಡಾನ್ ದೇಶ ಮತ್ತು ಜೋರ್ಡಾನ್ ನದಿ ಬಗ್ಗೆ ಯೋಚಿಸಿದಾಗ, ಮಾರ್ಕ್ ಟ್ವೈನ್ ಹೇಳಿದ, 'The Jordan river has great wisdom and whispers its secrets to the hearts of human beings' ಎಂಬ ಮಾತು ಬತ್ತುತ್ತಿರುವ ಆ ನದಿಯ ಸೆಲೆಯಲ್ಲಿ ಆವಿಯಾಗುತ್ತಿರುವಂತೆ ಭಾಸವಾಗುತ್ತದೆ. ಜೋರ್ಡಾನ್ ಮರುಭೂಮಿಯಾಗಿರಬಹುದು, ಆದರೆ ಅದು ಸುಂದರ, ರುದ್ರರಮಣೀಯ, ಮೌನದಲ್ಲೂ ಮೋಹಕತೆ ಬೀರುವ, ಸಾಗಿದಷ್ಟೂ ಸಾಗುವ ಮರುಭೂಮಿ. ಭೂಮಿಯ ತುತ್ತತುದಿಯ ತನಕ ಕರೆದೊಯ್ಯಬಹುದೇನೋ ಎಂದು ಅನಿಸುವಷ್ಟು ವಿಶಾಲ ಮರುಭೂಮಿ. ಮರೀಚಿಕೆಯಷ್ಟೇ ಇದರ ಲಕ್ಷಣವಲ್ಲ, ಮನಮೋಹಕತೆಯೇ ಇದರ ವೈಶಿಷ್ಟ್ಯ. ಎಲ್ಲರೂ ಜೋರ್ಡಾನಿನ ಸೌಂದರ್ಯೋಪಾಸನೆ ಮಾಡಲಾರರು. ಅದಕ್ಕೆ ಅನುಪಮ ನೋಟ, ಆಸ್ವಾದಭಾವ ಮತ್ತು ರಸಗ್ರಹಣ ಶಕ್ತಿ ಬೇಕು. ಅದು ಜೋರ್ಡಾನಿನ ಸಂಕ್ಷಿಪ್ತ ಗುಣಕಥನ.

ಕತ್ತೆಗೆ ಅನಾರೋಗ್ಯ-ಮುಗಿಬಿದ್ದು ದರ್ಶನ ಪಡೆದ ಅಭಿಮಾನಿಗಳು!

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

ಕತ್ತೆಗೆ ಅನಾರೋಗ್ಯ. ಮುಗಿಬಿದ್ದ ಅಭಿಮಾನಿಗಳು. ಎರಡು ದಿನ ಹಿಂದಿನ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯಲ್ಲಿ ಈ ಶೀರ್ಷಿಕೆಯ ಅಡಿಯಲ್ಲಿ ಅರ್ಧ ಪೇಜು ವರದಿ. ಕತ್ತೆಗಳು ಭೂಮಿಯಲ್ಲಿ ಅಸಂಖ್ಯವಿರಬಹುದು, ಆದರೆ ಈ ಕತ್ತೆ ಅಂತಿಂಥದ್ದಲ್ಲ. ಹಾಲಿವುಡ್ ಖ್ಯಾತಿಯ ಕತ್ತೆ. ಅದಕ್ಕೊಂದು ಹೆಸರು ಬೇರೆ – 'ಪೆರ್ರಿ'. ಈಗ ಪೆರ್ರಿಗೆ ಆರ್ಥರೈಟೀಸ್, ಹಾರ್ಮೋನ್ ಏರು ಪೇರು, ಡಯಾಬಿಟೀಸ್ ಮತ್ತು ಥೈರಾಯ್ಡ್ ಸಮಸ್ಯೆ ಮೊದಲಾದ ರೋಗಗಳಿವೆಯಂತೆ. ನನಗಂತೂ ಕತ್ತೆಗೂ ಈ ಮನುಷ್ಯ ಸಹಜ ರೋಗಗಳೆಲ್ಲ ಒಮ್ಮೆಲೇ ವೃದ್ಧಾಪ್ಯದಲ್ಲಿ ಮೆತ್ತಿಕೊಳ್ಳುತ್ತವೆ ಎಂದು ಗೊತ್ತೇ ಇರಲಿಲ್ಲ. ಅಮೆರಿಕದ ಕತ್ತೆಯಲ್ಲವೇ? ಮೊನ್ನೆಯಷ್ಟೇ ಅದರ ಮೂವತ್ತು ವರ್ಷದ ಹುಟ್ಟು ಹಬ್ಬಕ್ಕೆ ಹುಲ್ಲಿನಿಂದ ಮಾಡಿದ ಕೇಕ್ ತಿನ್ನಿಸಿ ಅಭಿಮಾನಿಗಳೆಲ್ಲ ಸಂತಸಪಟ್ಟು ಕೇಕೆ ಹಾಕಿದ್ದರು. ಈಗ ಅದರ ದೇಹಸ್ಥಿತಿ ಇನ್ನಷ್ಟು ಹದಗೆಡುತ್ತಿದ್ದಂತೆ ಜನರು ಮುಗಿಬಿದ್ದು ಅಂತಿಮ ದರ್ಶನ ಪಡೆದುಬಿಡೋಣ ಎಂದು ದೌಡಾಯಿಸುತ್ತಿದ್ದಾರೆ.

ಹಾಲಿವುಡ್ ಖ್ಯಾತಿಯ ಎಂದರೆ ಇದೇನು ಚಲನಚಿತ್ರದಲ್ಲಿ ನಟಿಸಿದ ಕತ್ತೆಯೇನಲ್ಲ. ಬದಲಿಗೆ 'ಶ್ರೇಕ್' ಎಂಬ ಬಹುಜನಪ್ರಿಯ, ಬಹುಕೋಟಿ ಕಾರ್ಟೂನ್ ಚಲನಚಿತ್ರದಲ್ಲಿ ಕಾಣಿಸಿಕೊಂಡ (ಕಾರ್ಟೂನ್) ಕತ್ತೆಗೆ ಈ ಜೀವಂತ ಕತ್ತೆಯೇ ಮಾಡೆಲ್ ಅಂತೆ. ಆ ಕತ್ತೆಯನ್ನು ಸ್ಟುಡಿಯೋದಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ನಿಲ್ಲಿಸಿ, ಅದರ ಫೋಟೋ ತೆಗೆದು, ಹಾವ ಭಾವ ಚಿತ್ರೀಕರಿಸಿ, ಆ ಮೂಲಕ ಕಾರ್ಟೂನ್ ಕ್ಯಾರೆಕ್ಟರ್ ತಯಾರಿಸಿ ಚಲನಚಿತ್ರದಲ್ಲಿ ಬಳಸಿಕೊಳ್ಳಲಾಗಿತ್ತು. ಅದೊಂದು ಕುಳ್ಳ ಜಾತಿಯ ಸಾಧಾರಣ ಕತ್ತೆ ಅಷ್ಟೇ. ಅದಕ್ಕೊಂದಿಷ್ಟು ಅಭಿಮಾನಿಗಳು, 'ಒಹ್ ಸೊ ಕ್ಯೂಟ್' ಅನ್ನುವವರು, ಸೆಲ್ಫಿ ತೆಗೆದು ಸಂಭ್ರಮಿಸುವವರು. ಆ ಕತ್ತೆಗೇನು ಗೊತ್ತು ತನಗಿರುವ ಸೆಲೆಬ್ರಿಟಿ ಸ್ಟೇಟಸ್! ಈಗ ಅದಕ್ಕೆ ಆರಾಮಿಲ್ಲವಲ್ಲ. ಅದರ ಶುಶ್ರೂಷೆಗೆ ಯಥೇಚ್ಛ ಹಣ ಹರಿದುಬರುತ್ತಿದೆಯಂತೆ. ಅಲ್ಲದೆ ಅಲ್ಲಿನ ಸ್ಥಳೀಯ ಸರಕಾರ ಅದರ ಆರೈಕೆಗೆಂದೇ ಒಂದಿಷ್ಟು ಹಣ ತೆಗೆದಿರಿಸಿದೆಯಂತೆ! ಇದನ್ನು ಕೆಲವರು 'ಪ್ರಾಣಿ ದಯೆ' ಎಂದು ಹೊಗಳಿದರೆ, ಇನ್ನು ಕೆಲವರು ನಾವು ಕಟ್ಟಿದ ಟ್ಯಾಕ್ಸ್ ಹಣ ಆ ಕತ್ತೆಯ ಆರೈಕೆಗೇಕೆ ಎಂದು ಗಲಾಟೆಯೆಬ್ಬಿಸಿದ್ದಾರೆ. ಎಂಥಾ ಅವಸ್ಥೆ ನೋಡಿ !

ಕಳೆದ ವಾರಾಂತ್ಯ ಸ್ನೇಹಿತರಾದ ಶ್ರೀನಿವಾಸ್ ರಾವ್ ಮತ್ತು ಸುನಿಲ್ ಜೊತೆಯಲ್ಲಿ ಮಾತನಾಡುತ್ತ ಕೂತಿದ್ದೆ. ಸುನಿಲ್ ಇತ್ತೀಚೆಗೆ ಜಪಾನಿಗೆ ಹೋಗಿ ಬಂದಿದ್ದರು. ಅಲ್ಲಿ ಅವರು ಸಾಮಾಜಿಕ ಸೂಕ್ಷ್ಮವೊಂದನ್ನು ಗ್ರಹಿಸಿದ್ದರು. ಅದೇನೆಂದರೆ ಜಪಾನಿನಲ್ಲಿ ಸೂಪರ್ ಹೀರೋಗಳೆಂದರೆ ಯಾವುದೇ ಸಿನೆಮಾ ನಟರಲ್ಲ, ಯೋಧರಲ್ಲ, ಬದಲಿಗೆ ಕಾರ್ಟೂನ್ ಪಾತ್ರಗಳು. ಮಕ್ಕಳಿಂದ ಹಿಡಿದು ಮುದುಕರ ವರೆಗೆ ಎಲ್ಲರಿಗೂ ಕಾರ್ಟೂನ್ ಪಾತ್ರಗಳ ಮೇಲೆ ಹುಚ್ಚು ಅಭಿಮಾನ. ಅವರ ಮನೆಯ ಕೋಣೆಗಳಲ್ಲಿ, ಅಂಗಡಿಗಳಲ್ಲಿ, ಮಾಲುಗಳಲ್ಲಿ, ದೇಹದ ಮೇಲಿನ ಟ್ಯಾಟೂ ಎಲ್ಲವೂ ಇವೇ. ನಮ್ಮಲ್ಲಿ ಹೇಗೆ ಹೀರೋ ಹೆಸರು, ಚಿತ್ರ ಹಚ್ಚೆ ಹಾಕಿಸಿಕೊಳ್ಳುತ್ತಾರೋ ಹಾಗೆ ಅಲ್ಲಿ ಈ ಆನಿಮೇಶನ್ ಪಾತ್ರಗಳ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಆನಿಮೇಷನ್ ಪತ್ರಗಳನ್ನು ಅಲ್ಲಿ Manga Character ಎಂದು ಕರೆಯುವುದು.

ಜಪಾನಿಯರಿಗೆ ಅವರ ಇತಿಹಾಸದ ಬಗ್ಗೆ ಸಾಕಷ್ಟು ಬೇಸರವಿದೆ. ಎರಡನೇ ವಿಶ್ವಯುದ್ಧದಲ್ಲಿ ಅವರ ಪೂರ್ವಜರು ನಡೆಸಿದ ಅತ್ಯಾಚಾರ, ಅನಾಚಾರ, ನಾಂಜಿಂಗ್ ಮೊದಲಾದ ನರಮೇಧಗಳ ಬಗ್ಗೆ ಇಂದಿನ ಜಪಾನೀಯರಿಗೆ ತೀವ್ರ ಅವಮಾನ ಭಾವವಿದೆ. ಇಂದಿನವರಿಗೆ ಅವರದು ತಲೆತಗ್ಗಿಸುವ ಇತಿಹಾಸ. ಜಪಾನಿಯರು ಐತಿಹಾಸಿಕವಾಗಿ ಬಹಳ ಕ್ರೂರ. ಅದೇ ಕಾರಣಕ್ಕೆ ಅಲ್ಲಿ ಏನೇನೆಲ್ಲ ಅನಾಚಾರವಾಯಿತು. ಅನಂತರ ಅಣುಬಾಂಬ್ ದಾಳಿ, ಶರಣಾಗತಿ. ವಿಶ್ವಯುದ್ಧದ ತರುವಾಯ ಜಪಾನ್ ಆತ್ಮವಿಮರ್ಶೆ ಮಾಡಿಕೊಂಡಿತು. ತಮ್ಮ ಕ್ರೌರ್ಯವನ್ನು ಸಾಮಾಜಿಕವಾಗಿ ಕೊನೆಗಾಣಿಸಿ ಸೌಜನ್ಯ, ಕರುಣೆ ತುಂಬುವ ಕೆಲಸ ಶಿಕ್ಷಣದ ಮೂಲಕ ನಡೆಯಿತು. ಅದರ ತರುವಾಯ ಇಂದು ಜಪಾನೀಯರೆಂದರೆ ಸಮಾಧಾನದ, ಗೌರವದ ಜನರು. ಅತಿಯೆನಿಸುವ ಸೌಜನ್ಯ – ಯಾರೇ ಎದುರಿಗೆ ಕಾಣಿಸಿದರೂ, ಅವರು ಮರೆಯಾಗುವವರೆಗೂ ಬಾಗಿ ನಮಸ್ಕರಿಸುತ್ತಿರುವಷ್ಟು. ಇಂತಹ ಒಂದು ಸೌಜನ್ಯವನ್ನು ಬೆಳೆಸುವ ಸಮಯದಲ್ಲಿ ಅವರ ಕರಾಳ ಇತಿಹಾಸವನ್ನು ಖಂಡಿಸುವುದೂ ಅದರ ಭಾಗವೇ ಆಯಿತು. ಆ ಕಾರಣಕ್ಕೆ ಜಪಾನೀಯರಿಗೆ ಎರಡನೇ ವಿಶ್ವಯುದ್ಧದ ಇತಿಹಾಸವೆಂದರೆ ಅಪಥ್ಯ. ಇದರಿಂದಾಗಿ ಆದದ್ದೇನೆಂದರೆ ಜಪಾನೀಯರಿಗೆ ಇಂದು ಇತಿಹಾಸಪುರುಷರೇ ಇಲ್ಲ, ಅವರ ಇತಿಹಾಸದಲ್ಲಿ ರೋಲ್ ಮಾಡೆಲ್‌ಗಳಿಲ್ಲ, ಯಾರೂ ಆದರ್ಶರಲ್ಲ.

ಮನುಷ್ಯ ಸಮಾಜಕ್ಕೆ – ಎಲ್ಲರಿಗೂ ರೋಲ್ ಮಾಡೆಲ್‌ಗಳ, ಆದರ್ಶ ವ್ಯಕ್ತಿತ್ವ ಬೇಕು. ಇದು ನಮ್ಮ ಸಹಜ ಅವಶ್ಯಕತೆ. ನಾವು ಬೆಳೆಯುವಾಗ ಅನುಸರಿಸಲು ಒಂದಿಷ್ಟು ವ್ಯಕ್ತಿಗಳಿದ್ದರೆ ಬೆಳವಣಿಗೆ ಸುಲಭ. ಅನುಸರಿಸಿ ಹೋದರೆ ಯಶಸ್ಸು ಸಾಧ್ಯವೆನ್ನುವುದು ನಮ್ಮೊಳಗಿನ ಸುಪ್ತ ನಂಬಿಕೆ. ಆದರ್ಶಕ್ಕೊಂದು ಮೂರ್ತ ರೂಪ ಜೀವನಾವಶ್ಯಕತೆ. ಮನುಷ್ಯ ಬುದ್ಧಿಮತ್ತೆ ಮತ್ತು ಸಾಧ್ಯತೆಗೆ ಹೋಲಿಸಿದರೆ ನಮ್ಮ ಆಯಸ್ಸು ಕಡಿಮೆ. ಹಾಗಾಗಿಯೇ ಆದರ್ಶಕ್ಕೊಂದಿಷ್ಟು ವ್ಯಕ್ತಿತ್ವ ಇದ್ದರೆ ಸಾಮಾಜಿಕ ಬೆಳವಣಿಗೆ, ಏಳ್ಗೆ ಸುಲಭ. ಸುರಕ್ಷತೆ, ಸಾಮಾಜಿಕ ಅವಶ್ಯಕತೆಯಿಂದಾಗಿ ಇನ್ನೊಬ್ಬರನ್ನು ಆದರ್ಶವೆಂದು ಸ್ವೀಕರಿಸುವುದು, ಹಿಂಬಾಲಿಸುವುದು ಇವೆಲ್ಲ ಮನುಷ್ಯನೊಳಗೆ ರಕ್ತಗತವಾಗಿ ಸೇರಿಕೊಂಡಿದೆ. ಇಂತಹ ಆದರ್ಶ ವ್ಯಕ್ತಿಗಳ ಇತಿಹಾಸದ ಕೊರತೆಯ ನಿರ್ವಾತವನ್ನು ಜಪಾನಿಯರಲ್ಲಿ ತುಂಬಿದ್ದು ಆ ಅವಾಸ್ತವಿಕ ಅನಿಮೇಷನ್ ಪಾತ್ರಗಳು. ಇಂದು ಈ ಅವಾಸ್ತವ ಪಾತ್ರಗಳೇ ಜಪಾನಿನ ರಾಜಕುಮಾರ್, ಅಮಿತಾಬ್ ಬಚ್ಚನ್, ರಜನಿಕಾಂತರು.

ಇದೆಲ್ಲ ವಿಷಯವನ್ನು ಹರಟುತ್ತಿದ್ದಾಗ ಪಕ್ಕದಲ್ಲಿ ಕೂತಿದ್ದ ಶ್ರೀನಿವಾಸ ರಾವ್ ಪ್ರಸ್ತುತ ಕೆಲ ಪ್ರಶ್ನೆಗಳನ್ನು, ಅನಿಸಿಕೆಯನ್ನು ಮುಂದಿಟ್ಟರು. 'ರಾಜ್ ಕುಮಾರ್‌ಗಿರುವಷ್ಟು ಅಭಿಮಾನಿಗಳು, ಹಿಂಬಾಲಕರು ಕನ್ನಡದ ಮಟ್ಟಿಗೆ ಇನ್ನೊಬ್ಬರಿಗಿಲ್ಲ. ರಾಜ್ ಕುಮಾರ್ ಸಿನೆಮಾ ಹೊರತಾಗಿಯೂ ಆದರ್ಶವನ್ನು ಮೆರೆದವರು. ಅವರು ನಿತ್ಯ ಯೋಗ ಮಾಡುತ್ತಿದ್ದರು, ಕುಡಿಯುತ್ತಿರಲಿಲ್ಲ, ಸಿಗರೇಟು ತ್ಯಜಿಸಿದ್ದರು. ಸೌಮ್ಯ, ತೂಕದ ಮಾತು, ಕನ್ನಡ ಪರ ಹೋರಾಟ, ಸರಳತನ ಇತ್ಯಾದಿ ಹಲವು ಆದರ್ಶವೆನಿಸುವ ಗುಣಗಳು ರಾಜಕುಮಾರ್ ರಲ್ಲಿದ್ದವು. ಹೊರಜಗತ್ತಿಗೆ ಆದರ್ಶವಾಗಿಯೇ ಕಾಣಿಸಿಕೊಂಡವರು ರಾಜ್. ಆದರೆ 'ನಾವು ರಾಜ್ ಕುಮಾರ್ ಅಭಿಮಾನಿ' ಎಂದು ಹೇಳಿಕೊಳ್ಳುವ ಅದೆಷ್ಟು ಮಂದಿ ಅವರ ಒಂದಾದರೂ ಒಳ್ಳೆಯ ಗುಣವನ್ನು ಅನುಸರಿಸಿದ್ದಾರೆ? ಕೇಳಿದರೆ ನಾವು ರಾಜ್ ಅಭಿಮಾನಿ ಅನ್ನುವ, ರಾಜ್ ಬಗ್ಗೆ ಯಾರು ಏನೇ ಮಾತನಾಡಿದರೂ ಹೊಡೆದಾಟಕ್ಕೆ ಇಳಿಯುವ ಅಭಿಮಾನಕ್ಕೆ ಅರ್ಥ ವೇನುಳಿಯಿತು? ಇದನ್ನು ರಾಜ್ ಒಪ್ಪುತ್ತಿದ್ದರೆ?'.

ಮಹಾ ಪುರುಷರ, ತ್ಯಾಗ ಬಲಿದಾನ ಮಾಡಿದವರ, ಸಮಾಜಕ್ಕೆ ಒಳ್ಳೆಯವರಾದ ದಂಡು ದಂಡಿನ ಇತಿಹಾಸ ನಮ್ಮದು. ಆದರ್ಶಕ್ಕೆ ಯಾರು ಎಂದರೆ ಒಂದೇ ಗುಣಕ್ಕೆ ನೂರಾರು ಆದರ್ಶಪ್ರಾಯರು ನಮ್ಮ ಇತಿಹಾಸದಲ್ಲಿ ಸಿಗುತ್ತಾರೆ. ಜಪಾನಿನಂತೆ ನಮಗೆ ನೈಜ, ಐತಿಹಾಸಿಕ ಹೀರೋಗಳ ಕೊರತೆಯಿಲ್ಲ, ಆದರೆ ನಮ್ಮಲ್ಲಿ ಇತಿಹಾಸದ ಅರಿವಿನ ಕೊರತೆ ಇದೆ. ಶಿಕ್ಷಣದ ಬ್ರಿಟಿಷ್ ಇತಿಹಾಸದಲ್ಲಿ ಭಾರತದಲ್ಲಿ ಹೀರೋಗಳೇ ಇಲ್ಲ. ಈ ಕೊರತೆಯಿಂದಲೇ ನಮ್ಮಲ್ಲಿ ಅಸಲಿ, ಆಗಿ ಹೋದ ಹೀರೋಗಳಿಗಿಂತ ಸಿನೆಮಾ ಹೀರೋಗಳು ಆದರ್ಶವೆನಿಸಲು ಶುರುವಾದದ್ದು. ಸ್ವಾಮಿ ವಿವೇಕಾನಂದರು, ಪರಮಹಂಸರು, ಪಟೇಲರು, ಬೋಸರಿಂದ ಹಿಡಿದು ರಾಮ, ಕೃಷ್ಣರ ವರೆಗೆ ಆದರ್ಶಕ್ಕೆ ನಮ್ಮಲ್ಲೇನು ಕೊರತೆ? ಆದರೆ ಅವರನ್ನೆಲ್ಲ ಬಿಟ್ಟು ಸಿನೆಮಾದಲ್ಲಿ ನಟಿಸುವ ನಟರು ತೆರೆಯಾಚೆಯೂ ಸಿನೆಮಾದ ಪಾತ್ರಗಳ ಕಾರಣಕ್ಕೆ ಆದರ್ಶವಾಗುವುದು ಸಾಮಾಜಿಕ ವಿಡಂಬನೆಯಲ್ಲವೇ? ನಟಿಸುವ ನಟ ಆದರ್ಶ, ಅಣ್ಣ, ತಂದೆ, ಸರ್ವಸ್ವ ಎನ್ನುವ ಮಟ್ಟಿಗೆ ಸಮಾಜ ಹೋಗಿ ಮುಟ್ಟುವುದು ಏಕೆ? ಕಲಾರಾಧನೆ ಹಂತ ಮೀರಿ ಅಂಧಾಭಿಮಾನ, ದುರಭಿಮಾನ, ಮಾನ, ಅಪಮಾನ, ಹೊಡೆದಾಟ, ಗುಂಪುಗಾರಿಕೆ ಇತ್ಯಾದಿಗಳ ಹಂತಕ್ಕೆ ತಲುಪುವ ಹಿನ್ನೆಲೆ ಏನು? ಸಿನೆಮಾ ಹೀರೋಗಳ 'ಹವಾ-ಮಾನ' ಕ್ಕೆ ತಕ್ಕಂತೆ ಸಮಾಜ ಏಕೆ ಕುಣಿಯುತ್ತದೆ?

ಸಿನೆಮಾ ಹೀರೋಗಳೇ ಆದರ್ಶವೆನಿಸಲು ನಮ್ಮ ಇತಿಹಾಸದ ಅರಿವು, ಜ್ಞಾನ, ತಿಳುವಳಿಕೆಯ ಕೊರತೆಯಷ್ಟೇ ಕಾರಣವಲ್ಲ. ಸಿನೆಮಾ ನಮ್ಮ ದೇಶದಲ್ಲಿ ಬೆಳೆದ ರೀತಿ ಬಹಳ ವಿಭಿನ್ನ. ಆಗತಾನೆ ಸ್ವಾತಂತ್ರ್ಯ ಬಂದಿತ್ತು. ಕ್ರಮೇಣ ದೇಶದಲ್ಲಿ ಶಾಂತಿ ಎಂದರೇನು ಎಂದು ತಿಳಿಯಲು ಶುರುವಾಗಿತ್ತು. ಬ್ರಿಟೀಷರಿಂದ ಛಿದ್ರಗೊಂಡಿದ್ದ ಸಾಮಾಜಿಕ ಸಮತೋಲನದಿಂದಾಗಿ ಸಮಾಜದಲ್ಲಿ ಅತಿಯೆನಿಸುವಷ್ಟು ಸ್ವೇಚ್ಛಾಚಾರಗಳು, ದ್ವೇಷ, ದಬ್ಬಾಳಿಕೆ ಇತ್ಯಾದಿ ಬಹುಕಾಲ ನಡೆದವು. ಆ ಸಮಯದಲ್ಲಿ ಯುಟೋಪಿಯನ್ ಸಮಾಜವನ್ನು ತೆರೆಯ ಮೇಲೆ ನೋಡುವುದು ಒಂದಿಷ್ಟು ಸಮಾಧಾನ ಕೊಡುತ್ತಿತ್ತು. A utopian society is an ideal society that does not exist in reality.ಆದರ್ಶ ಸಮಾಜ, ಆದರ್ಶ ವ್ಯಕ್ತಿಯೆಂದರೆ ಸಿನೆಮಾದ ಹೀರೋ, ಮತ್ತವನ ಸಾಧ್ಯತೆ ಎಂಬಂತಾಯಿತು. ಜನರು ಸಿನೆಮಾದಿಂದ ಪ್ರೀತಿಯ ಬದುಕಿನ ಸಾಧ್ಯತೆಯನ್ನು ಕಲಿತರು. ಇಷ್ಟಕ್ಕೂ ಹೀರೋ ಸಮಾಜದ ಕೆಟ್ಟ ರಾಜಕಾರಣಿಗಳನ್ನು ಕೊಲ್ಲುವುದು, ಸಮಾಜದ ರಕ್ಷಣೆಗೆ ಕಾನೂನನ್ನು ಕೈಗೆ ತೆಗೆದುಕೊಳ್ಳುವುದು ಇವೆಲ್ಲ ನಿಜ ಬದುಕಿನಲ್ಲಿ ನಡೆಯುವಂಥದ್ದೇ ಅಲ್ಲ. ಸಿನೆಮಾ ತೋರಿಸುವುದು ಪರಮ ಆದರ್ಶ ಆದರೆ ಅಸ್ತಿತ್ವದಲ್ಲಿರದ ಸಮಾಜವನ್ನು. ನಮ್ಮ ಕರ್ಮಕ್ಕೆ ಸಿನೆಮಾ ಯುಟೋಪಿಯನ್ ಸಮಾಜದ ಚಿತ್ರಣದಿಂದ ಇಂದಿಗೂ ಹೊರಬಂದಿಲ್ಲ. ಜನರ ಬಯಕೆಯೂ ಅದುವೇ ಇದೆ.

ಮೊದಲು ಸಿನೆಮಾ ನಟರಲ್ಲಿ ಸಹಜವಾಗಿದ್ದ ಆದರ್ಶ ವ್ಯಕ್ತಿತ್ವ ಇಂದು ಹೀರೋ ಒಬ್ಬನ ಅವಶ್ಯಕ ಗುಣವೆಂಬಂತಾಗಿದೆ. ಸಿನೆಮಾ ಹೀರೊ ಎಂದರೆ ಅವನು ಅಸಲಿ ಹೀರೋವಿನಂತೆಯೇ ಸಮಾಜದಲ್ಲಿ ಕಾಣಿಸಿಕೊಳ್ಳಬೇಕೆಂಬುದು ಸಾಮಾಜಿಕ ಒತ್ತಾಯವಾಗಿದೆ. ಈ ಪರದೆಯ ಮೇಲಿನ ಹೀರೋನನ್ನು ನಿಜಜೀವನದ ಅಸಲಿ ಹೀರೋ ಆಗಿ ತೋರಿಸಿಕೊಳ್ಳುವ ಅನಿವಾರ್ಯತೆ ಹೀರೋ, ನಟನಿಗಷ್ಟೇ ಅಲ್ಲ, ಸಿನೆಮಾದ ಯಶಸ್ಸಿಗೂ ಅದು ಇಂದು ಅನಿವಾರ್ಯವಾಗಿದೆ. ಏಕೆಂದರೆ ಪರದೆಯ ಮೇಲೆ ಮತ್ತು ಪರದೆಯ ಆಚೆಯ ವ್ಯತ್ಯಾಸ ಗ್ರಹಿಸುವುದರಲ್ಲಿ ಸಮಾಜ ಎಡವುತ್ತಿದೆ.

ಇಂದಿಗೂ ಕೆಲವೆಡೆ ಈ ರೂಢಿಯಿದೆ. ದೊಡ್ಡ ಹೆಸರಿನ ಹೀರೋ ನಟಿಸಿದ ಚಲನಚಿತ್ರದ ಬಿಡುಗಡೆಯ ದಿನ ರಕ್ತದಾನ ಮೊದಲಾದ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲಾಗುತ್ತದೆ. ಹೀರೋ ಪಾತ್ರವಹಿಸಿದ ನಟ ಎಲ್ಲರೆದುರು ಬಂದು ರಕ್ತದಾನ ಮಾಡುತ್ತಾನೆ. ಅದರ ಜೊತೆ ಅವನ ಅಭಿಮಾನಿಗಳೆಲ್ಲ ರಕ್ತದಾನ ಮಾಡುವಂತೆ ಪ್ರೇರೇಪಿಸುತ್ತಾನೆ. ಇದರಲ್ಲೇನು ಸಮಸ್ಯೆ ಎಂದು ಕೇಳಬಹುದು. ಇಲ್ಲಿ ವಿಷಯ ರಕ್ತ, ನೇತ್ರ, ಅಂಗಾಂಗ ದಾನಗಳದ್ದಲ್ಲ. ಆದರೆ ಹೀರೋವಿನ ಈ ನಡೆಯಿಂದಾಗಿ ಅಲ್ಲಿ ಸೇರಿಸುವವರೆಲ್ಲ ಒಂದು ಮರೀಚಿಕೆಗೆ ಒಳಗಾಗುತ್ತಾರೆ.. ನಮ್ಮ ಹೀರೋ ಸಿನಿಮಾಗಿಂತ ಮೊದಲು ಬಂದು ರಕ್ತ ದಾನ ಮಾಡಿ ಹತ್ತಾರು ಜನರ ಪ್ರಾಣ ಉಳಿಸುತ್ತಿದ್ದಾನೆ, ಇಲ್ಲಿ ಒಳಗಡೆ ಪರದೆಯ ಮೇಲೆ ಹತ್ತಾರು ಕೆಟ್ಟವರನ್ನು ಸಂಹರಿಸಿ ಸಮಾಜವನ್ನು ಉಳಿಸುತ್ತಿದ್ದಾನೆ ಎಂಬ ಸಮೂಹ ಗೊಂದಲ ಅಲ್ಲಿ ನಿರ್ಮಾಣವಾಗುತ್ತದೆ. ಇದು ಒಂದು ಉದಾಹರಣೆ. ಇಂಥಹ ರೀಲ್ ಹೀರೋವನ್ನು ರಿಯಲ್ ಹೀರೋವನ್ನಾಗಿಸುವ ಹಲವು ಮಾರ್ಗಗಳು ಚಾಲ್ತಿಯಲ್ಲಿವೆ. ಪರದೆಯ ಹೀರೋ ಸಿನೆಮಾದ ಆಚೆ ಹೀಗೆ ಹಲವು ಕೃತ್ರಿಮ ಕೆಲಸಗಳಿಂದ ಹೀರೋ ಆಗಿ ಚಿತ್ರಣಗೊಳ್ಳುತ್ತಾನೆ. ಹೀರೋಗೆ ಅಲ್ಲಿ ಬೇಕಾದದ್ದು ಸಿನೆಮಾದ ಯಶಸ್ಸೇ ವಿನಃ ಅಲ್ಲಿ ಅವನಿಗೆ ಇನ್ನೇನೂ ಉದ್ದೇಶ ಅಲ್ಲಿರುವುದಿಲ್ಲ. ರಕ್ತ ಕೊಟ್ಟು ಜೀವ ಉಳಿಸುವುದೇ ಉದ್ದೇಶವಾಗಿದ್ದರೆ ರಕ್ತ ಕೊಡಲಿಕ್ಕೆ ಸಿನೆಮಾ ಥಿಯೇಟರ್ ಎದುರೇ ಆಗಬೇಕೆ?

ಈಗೀಗಂತೂ ಆದರ್ಶವೆನಿಸುವ ಖಾಸಗಿ ಬದುಕನ್ನು ಕಟ್ಟಿಕೊಂಡ ಹೀರೋಗಳು ಪರಮ ಅಪರೂಪ. ಹೆಚ್ಚಿನವರದ್ದು ತೆರೆಯ ಮೇಲೆ ರಾಮ, ಮನೆಗೆ ಹೋದರೆ ಹೆಂಡತಿಯ ಸಂಖ್ಯೆಗಳ ವಿಷಯದಲ್ಲಿ ಕೃಷ್ಣ, ಆದರ್ಶ ಬಿಡಿ, ಹೇಸಿಗೆಯೆನಿಸುವ ಬದುಕು ಕೆಲವರದ್ದು. ಎಲ್ಲಾ ನಡೆಯಲ್ಲೂ ಲೆಕ್ಕಾಚಾರ, ಸ್ವಾರ್ಥ. ಆ ಕಾರಣಕ್ಕೇ ಇಷ್ಟೊಂದು ದೊಡ್ಡ ಘಟನೆಯಾದಾಗಲೂ ಯಾರೊಬ್ಬ ಸಿನೆಮಾ ನಟರೂ ಮುಂದೆ ಬಂದು ನಾವು ಮನುಷ್ಯರು, ನಮ್ಮನ್ನು ಮನುಷ್ಯರಂತೆಯೇ ಕಾಣಿ, ನಮಗೂ ತೀರಾ ಸಹಜವೆನಿಸುವ ಖಾಸಗೀ ಬದುಕಿದೆ, ನಮ್ಮಲ್ಲಿಯೂ ಸಿಟ್ಟು, ಕೆಟ್ಟತನ ಇವೆಲ್ಲವೂ ಇದೆ, ನಿಮ್ಮ ಅಭಿಮಾನ ಕೇವಲ ನಮ್ಮ ಕಲೆಯ ಮೇಲಷ್ಟೇ ಇರಲಿ ಎಂದು ಹೇಳುವುದಿಲ್ಲ, ನಾವು ತೆರೆಯಾಚೆ ಹೀರೋ ಅಲ್ಲ, ಸಿನೆಮಾದಲ್ಲಿ ನಮ್ಮದು ನಟನೆ, ನಾವು ತೋರಿಸುವುದು ಸತ್ಯವಲ್ಲ, ಯುಟೋಪಿಯನ್ ಸಮಾಜ ಕಲ್ಪನೆಗೆ ಚಂದ, ಒಂದೇ ಸೀನು ಹತ್ತಾರು ರೀಟೇಕ್ ಪಡೆದಿರುತ್ತದೆ ಎಂಬಿತ್ಯಾದಿ ಸತ್ಯವನ್ನು ನಟರಾದವರು, ಹೀರೋಗಳಾದವರು ಹೇಳಬೇಕಾದದ್ದು ಈ ಕ್ಷಣದ ಅವಶ್ಯಕತೆ. ತೆರೆಯ ಮೇಲಿನ ನಟನನ್ನು ನಿಜಜೀವನದಲ್ಲಿ ಹೀರೋವಿನಂತೆ ಬಿಂಬಿಸಿದ್ದು ಸಿನೆಮಾ ಇಂಡಸ್ಟ್ರಿಯ ಕೆಲಸ. ಅದನ್ನು ಸಮಾಜದಲ್ಲಿ ಹೀಗೆಲ್ಲ ಸೃಷ್ಟಿಸಿದ್ದು ಅವರೆಲ್ಲರೂ ಸೇರಿ, ವ್ಯವಸ್ಥಿತವಾಗಿ. ಆದರೆ ಯಾವುದೇ ಹೀರೋಗಳು, ನಟರು ಇಂತಹ ವಿಷಯದಲ್ಲಿ ತೆಪ್ಪಗಿರುತ್ತಾರೆ. ಏಕೆಂದರೆ ಸಮಾಜದ, ಅಭಿಮಾನಿಗಳ ಅವರೆಡೆಗಿನ ಈ ತಪ್ಪು ತಿಳುವಳಿಕೆಯೇ ನಟರಿಗೆ ಇಂದು ಬಂಡವಾಳ.

ಅರುಣ್ ಗೋವಿಲ್ ರಾಮಾಯಣದಲ್ಲಿ ಶ್ರೀರಾಮನ ಪಾತ್ರ ಮಾಡಿದ ನಟ. ಅವರನ್ನು ಏರ್‌ಪೋರ್ಟಿನಲ್ಲಿ ಕಂಡವರೊಬ್ಬರು ಸಾಕ್ಷಾತ್ ರಾಮನನ್ನು ಕಂಡಂತೆ ಕಾಲಿಗೆ ಬಿದ್ದು ನಮಸ್ಕರಿಸಿದರು. ಈ ಘಟನೆ ವೈರಲ್ ಆಗಿತ್ತು. ಕೆಲವರು ಇದು ಭಾರತದ ಆಸ್ಥೆ, ನಮ್ಮ ಸಂಸ್ಕೃತಿ ಎಂದೆಲ್ಲ ಸೋಷಿಯಲ್ ಮೀಡಿಯಾದಲ್ಲಿ ಹೇಳಿಕೊಂಡರು. ಇದನ್ನು ಕಂಡ ಅರುಣ್ ಗೋವಿಲ್ ಮಾತ್ರ ಇದು ಸರಿಯಲ್ಲವೆಂದರು. ನಾನು ಶ್ರೀರಾಮನ ಪಾತ್ರಧಾರಿಯೇ ಹೊರತು ನಾನೇ ರಾಮನಲ್ಲ. ಹಾಗೊಮ್ಮೆ ನನ್ನನ್ನೇ ರಾಮನೆಂದು ಜನರು ತಿಳಿದು ನಮಸ್ಕರಿಸಿದರೆ ಅದು ನನ್ನ ಯಶಸ್ಸಲ್ಲ, ಬದಲಿಗೆ ಅದು ದೃಶ್ಯ ಮಾಧ್ಯಮದ ಸಂಪೂರ್ಣ ಸೋಲು. ನಾಟಕವೇ ಚೆನ್ನಾಗಿತ್ತು, ನಾಟಕವನ್ನು ಜನರು ನಾಟಕವಾಗಿಯೇ ನೋಡುತ್ತಿದ್ದರು. ಟಿವಿ – ಸಿನೆಮಾ ಅದೆಷ್ಟು ಆಧುನಿಕವೆಂದರೆ ನಮ್ಮ ಒಳಗಿನ ಸುಪ್ತ ಮನಸ್ಸು ಸತ್ಯ ಮತ್ತು ಕಲ್ಪನೆಯ ನಡುವಿನ ಅಂತರವನ್ನು ಗ್ರಹಿಸಲು ಸೋಲುತ್ತಿದೆ. ಮನಸ್ಸು ಸ್ವಲ್ಪವೇ ದುರ್ಬಲವಿದ್ದರೂ ಸಿನಿಮಾವೇ ಬದುಕು, ಹೀರೋನೇ ಆದರ್ಶ, ನಮ್ಮ ಹೀರೋ ತೆರೆಯಾಚೆಯೂ ಪರಮಾದರ್ಶ ಶ್ರೀರಾಮಚಂದ್ರ ಎಂದೆಲ್ಲ ಕಲ್ಪಿಸಿಕೊಂಡುಬಿಡುತ್ತದೆ. ರೋಗ ಉಲ್ಬಣಿಸಿದಾಗ ಸಿನೆಮಾದ ಪಾತ್ರವೇ ಅಸಲಿಯತ್ತು, ಅವನ ವೈಯಕ್ತಿಕವೆಲ್ಲ ಸುಳ್ಳು ಎಂದೆನಿಸಲು ಶುರುವಾಗುತ್ತದೆ. ಇದು ಕೊನೆಯ ಹಂತ.

ವಿಶ್ವಗುರು, ಅಗ್ರಮಾನ್ಯ ದೇಶವಾಗಲು ಹೊರಟಿರುವ ದೇಶದ ಜನರು ಇಂತಹ ಅಪಸವ್ಯಗಳನ್ನು ಬೇಗ ಗುರುತಿಸಿ ಸರಿಪಡಿಸಿಕೊಂಡಷ್ಟು ಒಳ್ಳೆಯದು. ನೆನಪಿರಲಿ, ಸಿನೆಮಾ ನಟರ ದೇವಸ್ಥಾನಗಳಿರುವ ಜಗತ್ತಿನ ಏಕೈಕ ದೇಶ ಭಾರತ! ಲೇಖನದ ಆದಿಯಲ್ಲಿ ಕತ್ತೆಯ ಕಥೆ ಹೇಳಿದೆನಲ್ಲ, ಹಾಗಂತ ಅಮೆರಿಕದಲ್ಲಿ ಅಥವಾ ಇನ್ನು ಯಾವುದೇ ದೇಶದಲ್ಲಿ ಹೀರೋಗಳನ್ನು ಈ ಪರಿ ಆರಾಧಿಸುವ ಪರಿಪಾಠವಿಲ್ಲ, ಮನರಂಜಿಸುವುದಷ್ಟೇ ಅವನ ಕೆಲಸ. ಹಾಲಿವುಡ್ಡಿನ ಅದೆಷ್ಟೋ ನಟರು ಕರ್ನಾಟಕದ ನಟರಿಗಿಂತ ಸಾವಿರಪಟ್ಟು ಹೆಸರುವಾಸಿ. ಆದರೆ ಯಾರೇ ತಪ್ಪೆಸಗಿದಲ್ಲಿ ಅವರ ಬೆನ್ನಿಗೆ ಯಾರೊಬ್ಬರೂ ನಿಲ್ಲುವುದಿಲ್ಲ, ಅವನಿಂದ ಪೂರ್ಣ ಸಮಾಜವೇ ವಿಮುಖವಾಗುತ್ತದೆ. ಅವನನ್ನು ಸಾಮಾನ್ಯರಂತೆಯೇ ಸಮಾಜ, ಕಾನೂನು ನಡೆಸಿಕೊಳ್ಳುತ್ತದೆ. ಅದು ಒಳ್ಳೆಯ ಸಮಾಜದ ಲಕ್ಷಣ. ಅದು ಬಿಟ್ಟು ಯಾರೊಬ್ಬರೂ ನಮ್ಮ ಬಾಸ್ ತಪ್ಪು ಮಾಡಿರೋಕೆ ಸಾಧ್ಯವೇ ಇಲ್ಲ ಅನ್ನೋಲ್ಲ.

ವಿಶ್ವ ಸಂಗೀತ ದಿನ; ಎಲ್ಲೆಲ್ಲೂ ಸಂಗೀತ

ಸ್ವರ ಸುಗ್ಗಿ
ಕೆ.ವಿ.ವಾಸು
vveditoped@gmail.com

ಸಂಗೀತವನ್ನು ಗಂಧರ್ವ ವಿದ್ಯೆ ಎಂದು ಕರೆಯಲಾಗುತ್ತದೆ. ಸಂಗೀತಕ್ಕೆ ನೆಲ, ಜಲ, ಜಾತಿ, ಬಡತನ, ಸಿರಿತನ ಇದ್ಯಾವುದರ ಸೋಂಕಿಲ್ಲ. ನಿರಂತರ ಸಾಧನೆ ಮತ್ತು ಪರಿಶ್ರಮದ ಮೂಲಕ ಇದು ಒಲಿಯಬಲ್ಲ ವಿಶಿಷ್ಟ ವಿದ್ಯೆಯೇ. ಗೀತಂ, ವಾದ್ಯಂ, ನೃತ್ಯಂ ಚತ್ರಯಂ ಸಂಗೀತ ಮುಚ್ಯತೆ, ಅಂದರೆ, ಗೀತ, ವಾದ್ಯ, ನೃತ್ಯ, ಈ ಮೂರು ಸಂಗೀತ ಎಂಬ ಪದಕ್ಕೆ ಅರ್ಥ. ಲಲಿತ ಕಲೆಗಳಲ್ಲಿ ಶ್ರೇಷ್ಠವಾದದ್ದು ಸಂಗೀತ. ಲೋಕದ ಡೊಂಕನ್ನು ತಿದ್ದಲು, ಸಾಮಾಜಿಕ ಮೌಲ್ಯಗಳನ್ನು ಪ್ರಚುರಪಡಿಸಲು, ಹಾಡು, ಭಜನೆ, ನಾಮ ಸಂಕೀರ್ತನೆಗಳ ಮೂಲಕ ಪುರಂದರ ದಾಸರಾದಿಯಾಗಿ ಹಲವಾರು ದಾಸವರೇಣ್ಯರು ಪ್ರಯತ್ನಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಹರಿ ಕಥೆಗಳನ್ನು ಸಹ ಸಂಗೀತದ ಒಂದು ಭಾಗವೆಂದು ಪರಿಗಣಿಸಬಹುದಾಗಿದೆ. ಕೆಲವು ದಾಸಶ್ರೇಷ್ಠರು, ಸಾಧು ಸಂತರು ಸಂಗೀತವನ್ನು ಮುಕ್ತಿಯ ಮಾರ್ಗವಾಗಿ ಬಳಸಿಕೊಂಡರು. ಅವರ ಪೈಕಿ ತ್ಯಾಗರಾಜರು, ಪುರಂದರದಾಸರು, ಕನಕದಾಸರು, ಸೂರದಾಸ್, ತುಳಸಿದಾಸರು ಮುಂತಾದವರನ್ನು ಇಲ್ಲಿ ಸ್ಮರಿಸಬಹುದು.

ಭಾರತೀಯ ಸಂಗೀತ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ. ಜಾನಪದ ಶೈಲಿ, ಪಾಶ್ಚಿಮಾತ್ಯ ಸಂಗೀತ ಎಂಬ ಹಲವಾರು ಬೈಬಿಧ್ಯಗಳುಂಟು. ತ್ಯಾಗರಾಜ, ಪುರಂದರದಾಸ, ಕನಕದಾಸರಂತಹ ಮಹಾನುಭಾವರು ಸಂಗೀತದ ಮೂಲಕವೇ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಿದ್ದನ್ನು ನಾವೆಲ್ಲಾ ತಿಳಿದಿದ್ದೇವೆ. ದೇವರಲ್ಲಿ ನಮ್ಮ ದಿವ್ಯ ಪ್ರಾರ್ಥನೆ ಸಲ್ಲಿಸಲು ಸಂಗೀತವೇ ಅತ್ಯಂತ ಸೂಕ್ತವಾದ ಮಾರ್ಗವೆನ್ನಬಹುದು. ಸಂಗೀತದ ಗಂಧ ಗಾಳಿಯನ್ನು ಅರಿಯದ ಅದೆಷ್ಟೋ ಗಾಯಕರು ಸುಮಧುರವಾಗಿ ಹಾಡಬಲ್ಲರು. ಸಂಗೀತಕ್ಕಿರುವ ಸಮ್ಮೋಹನಾ ಶಕ್ತಿ ಎಂತಹವರನ್ನು ಕೂಡ ಸುಲಭವಾಗಿ ಸೆಳೆಯಬಲ್ಲದು.

ಇಂಪಾದ ಸಂಗೀತಕ್ಕೆ ಪಶು ಪ್ರಾಣಿಗಳು ಕೂಡ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸುತ್ತವೆ, ಮರ ಗಿಡಗಳು ಕೂಡ ತೂಗಾಡುತ್ತವೆ. ಹೀಗಾಗಿ, ಸಂಗೀತ ಎಂಬುದು ದೈವೀಕವಾದ ಅಸಾಮಾನ್ಯವಾದ ವಿದ್ಯೆ ಎನ್ನಬಹುದು. ಪಂಡಿತ್ ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಪುಟ್ಟರಾಜ ಗವಾಯಿ ಮುಂತಾದ ವಿದ್ವಾಂಸರು ಹಿಂದೂಸ್ತಾನಿ ಸಂಗೀತದ ಅನರ್ಘ್ಯ ರತ್ನಗಳಾಗಿದ್ದರೆ ದಿವಂಗತ ಡಾ ಬಾಲ ಮುರುಳಿಕೃಷ್ಣ ರವರನ್ನು ಕರ್ನಾಟಕ ಸಂಗೀತದ ಮೇರು ಪರ್ವತವೆನ್ನಬಹುದು. ಶಾಸ್ತ್ರೀಯ ಹಾಗೂ ಸಿನಿಮಾ ಸಂಗೀತದ ಸವ್ಯಸಾಚಿಯಾಗಿರುವ 82 ವರ್ಷ ವಯಸ್ಸಿನ ಪದ್ಮಶ್ರೀ ಡಾ. ಕೆ.ಜೆ.ಯೇಸುದಾಸ್ ರವರಂತೂ ದೇಶವಿದೇಶಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇನ್ನು ಸಂಗೀತ ವಿದುಷಿಯರ ಪೈಕಿ ಮೊದಲನೇ ಸಾಲಿನಲ್ಲಿ ನಿಲ್ಲುವ ದಿವಂಗತ ಡಾ. ಎಂ.ಎಸ್.ಸುಬ್ಬ ಲಕ್ಷ್ಮಿ, ಹಿಂದಿ ಸಿನಿಮಾ ಕ್ಷೇತ್ರದ ಧೃವ ತಾರೆ ಲತಾ ಮಂಗೇಷ್ಕರ್, ಹಿಂದಿ ಚಿತ್ರರಂಗದ ಅತ್ಯಂತ ಜನಪ್ರಿಯ ಗಾಯಕರಾದ ಕಿಶೋರ್ ಕುಮಾರ್, ಮುಖೇಶ್, ಹರಿಹರನ್ ಮುಂತಾದವರನ್ನು ಸ್ಮರಿಸಬಹುದು. ತೆಲುಗು ಮತ್ತು ಕನ್ನಡ ಚಿತ್ರಗಳಲ್ಲಿ ನೂರಾರು ಸುಮಧುರ ಹಾಡುಗಳನ್ನು ಹಾಡಿರುವ ದಿವಂಗತ ಘಂಟಸಾಲ ಕೂಡ ಓರ್ವ ಸರ್ವಶ್ರೇಷ್ಠ ಗಾಯಕ ಮತ್ತು ಸಂಗೀತ ನಿರ್ದೇಶಕರಾಗಿದ್ದರು. ಬಹುಭಾಷಾಗಾಯಕಿಯರಾದ ಎಸ್. ಜಾನಕಿ, ಪಿ.ಸುಶೀಲ, ದಿವಂಗತ ವಾಣಿ ಜಯರಾಂ ಮುಂತಾದ ಹಿನ್ನಲೆ ಗಾಯಕಿಯರೂ ಸಹನೆನಪಿನಲ್ಲಿ ಉಳಿಯುವಂತಹ ಸಹಸ್ರಾರು ಹಾಡುಗಳನ್ನು ಹಾಡಿ ಜನ ಮಾನಸದಲ್ಲಿ ಇಂದಿಗೂ ಕೂಡ ಪ್ರಸ್ತುತರಾಗಿದ್ದಾರೆ. ಸಿನಿಮಾ ಸಂಗೀತದಲ್ಲಿ ಅತ್ಯುತ್ತಮ ಸೇವೆ ವಿವಿದ ಭಾರತೀಯ ಭಾಷೆಗಳಲ್ಲಿ 45,000 ಕ್ಕೂ ಅಧಿಕ ಹಾಡುಗಳನ್ನು ಹಾಡಿ, 2020 ರ ಸೆಪ್ಟೆಂಬರ್ 25 ರಂದು ಕೋವಿಡ್ ಸೋಂಕಿನಿಂದ ಮೃತಪಟ್ಟ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ, ಡಾ.ರಾಜಕುಮಾರ್‌ರವರ ಶಾರೀರ ಎಂದೇ ಕರೆಯಲ್ಪಡುತ್ತಿದ್ದ ಮತ್ತೋರ್ವ ಮೇರು ಗಾಯಕ ಪ್ರತಿವಾದಿ ಭಯಂಕರ ಶ್ರೀನಿವಾಸ್, ಜಯಚಂದ್ರನ್, ರಾಜಕುಮಾರ್ ಭಾರತಿ ಮುಂಗಾರು ಮಳೆ ಚಿತ್ರದ ಮೂಲಕ ಖ್ಯಾತಿಯ ಶಿಖರವೇರಿದ ಸೋನು ನಿಗಮ್, ಉದಿತ್ ನಾರಾಯಣ್, ಕುನಾಲ್ ಗಾಂಜಾವಾಲ, ಶ್ರೇಯಾ ಘೋಷಲ್, ಕೆ.ಎಸ್. ಚಿತ್ರಾ, ಬಿ.ಕೆ. ಸುಮಿತ್ರ, ಎಲ್.ಆರ್.ಈಶ್ವರಿ ಮುಂತಾದ ಮಹಾನ್ ಗಾಯಕ ಗಾಯಕಿಯರು ಭಾರತೀಯ ಸಂಗೀತ ವನ್ನು ತಮ್ಮ ಅಪೂರ್ವ ಕಂಠ ಸಿರಿಯಿಂದ ಶ್ರೀಮಂತ ಗೊಳಿಸಿದ್ದಾರೆ. ಡಾ. ರಾಜ್ ಕುಮಾರ್‌ಸಹ ಅದ್ಭುತ ಕಂಠ ಸಿರಿಯನ್ನು ಹೊಂದಿದ್ದ ನಟ. ಇವರು ಸಹಾ ನೂರಾರು ಸುಮಧುರ ಚಿತ್ರ ಗೀತೆಗಳ ಜೊತೆಗೆ ಭಕ್ತಿ ಗೀತೆಗಳನ್ನು ಹಾಡಿದ್ದಾರೆ. ಇನ್ನು ಸುಗಮ ಸಂಗೀತದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದ ಮೈಸೂರು ಅನಂತಸ್ವಾಮಿ, ಹಿರಿಯ ಗಾಯಕ ಸಿ.ಅಶ್ವಥ್ ಮುಂತಾದವರ ಕೊಡುಗೆ ಕೂಡ ಗಣನೀಯವಾಗಿದೆ.

ಸಂಗೀತ ಕುರಿತಂತೆ ವಿವಿಧ ಭಾರತೀಯ ಭಾಷೆಗಳಲ್ಲಿ ಹಲವಾರು ಚಲನಚಿತ್ರಗಳು ತಯಾರಾಗಿದೆ. 60ರ ದಶಕದಲ್ಲಿ ಡಾ ರಾಜಕುಮಾರ್ ನಾಯಕತ್ವದ ಸಂಧ್ಯಾರಾಗ, 70 ರ ದಶಕದಲ್ಲಿ ಅನಂತನಾಗ್ ನಾಯಕತ್ವದ ಹಂಸಗೀತೆ, 80 ರ ದಶಕದಲ್ಲಿ ವಿಷ್ಣುವರ್ಧನ್ ನಾಯಕತ್ವದ ಮಲಯ ಮಾರುತ, ದ್ವಾರಕೀಶ್ ನಿರ್ಮಾಣದ ಆನಂದ ಭೈರವಿ ಮುಂತಾದ, ಚಿತ್ರಗಳನ್ನು ಇಲ್ಲಿ ಸ್ಮರಿಸಬಹುದು. ಭಾರತೀಯ ಚಿತ್ರರಂಗದ ಬೇರೆ ಬೇರೆ ಭಾಷೆಗಳಲ್ಲಿ ಸಹ ಹಲವಾರು. ಸಂಗೀತ ಪ್ರಧಾನ ಚಿತ್ರಗಳು ತೆರೆಕಂಡಿವೆ. ತೆಲುಗು ಚಿತ್ರಗಳಾದ ಶಂಕರಾ ಭರಣಂ, ಅನ್ನಮ್ಮಯ್ಯ ಮುಂತಾದ ಚಲನಚಿತ್ರಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಕನ್ನಡ ಚಿತ್ರರಂಗದಲ್ಲಿ ಹಲವಾರು ಪ್ರಖ್ಯಾತ ಸಂಗೀತ ನಿರ್ದೇಶಕರು ಅತ್ಯುತ್ತಮ ಅನ್ನಬಹುದಾದ ಸಾವಿರಾರು ಗೀತೆಗಳಿಗೆ ಸಂಗೀತ ಸ್ಪರ್ಷ ನೀಡಿದ್ದಾರೆ. ಅವರ ಪೈಕಿ ಕೆಲವರನ್ನು ಸ್ಮರಿಸಬಹುದಾದರೆ, ಆರ್.ಕೆ.ಪದ್ಮನಾಭ ಶಾಸ್ತ್ರಿ, ಸುದರ್ಶನಂ, ಗೋವರ್ಧನಂ, ಜಿ.ಕೆ.ವೆಂಕಟೇಶ್, ವಿಜಯ ಭಾಸ್ಕರ, ರಾಜನ್ ನಾಗೇಂದ್ರ, ಎಂ.ರಂಗರಾವ್, ಸತ್ಯಂ, ಇಳಯರಾಜ, ಶಂಕರ್ ಗಣೇಶ್, ಎಂ.ವೆಂಕಟರಾಜು, ಟಿ.ಜಿ. ಲಿಂಗಪ್ಪ, ಹಂಸಲೇಖ, ಮನೋಮೂರ್ತಿ ಹಾಗೂ ಇತ್ತೀಚಿನ ವರ್ಷಗಳಲ್ಲಿ ಖ್ಯಾತಿ ಪಡೆದಿರುವ ಅರ್ಜುನ ಜನ್ಯ, ಹರಿ ಕೃಷ್ಣ, ಅನೂಪ್ ಸೀಳನ್, ರವಿ ಬಸ್ರೂರು, ಎಂ.ಎಂ.ಕೀರವಾಣಿ, ಶ್ರೀಧರ್ ಸಂಭ್ರಮ್, ಅಜನೀಶ್ ಬಿ ಲೋಕನಾಥ್ ಮುಂತಾದವರನ್ನು ಹೆಸರಿಸಬಹುದು. ಇನ್ನು ತೆಲುಗು ಚಿತ್ರರಂಗದಲ್ಲಿ ಚಕ್ರವರ್ತಿ, ವಿದ್ಯಾ ಸಾಗರ್, ಕೆ.ವಿ.ಮಹಾದೇವನ್ ಸೇರಿದಂತೆ ಹಲವಾರು ಸಂಗೀತ ನಿರ್ದೇಶಕರನ್ನು ಗುರುತಿಸಬಹುದು. ಆರ್.ಡಿ.ಬರ್ಮನ್, ಎಸ್.ಡಿ.ಬರ್ಮನ್, ಉಷಾಖನ್ನ, ಲಕ್ಷ್ಮಿ ಕಾಂತ ಪ್ಯಾರೇಲಾಲ್, ಶಂಕರ್ ಜೈಕಿಶನ್, ಖಯ್ಯಾಂ, ಎ.ಆರ್.ರೆಹಮಾನ್, ರವೀಂದ್ರ ಜೈನ್, ನದೀಮ್ ಶ್ರವಣ್, ಬಪ್ಪಿ ಲಹರಿ, ರಾಮ ಲಕ್ಷ್ಮಣ್, ರವೀ ಮುಂತಾದವರನ್ನು ಸ್ಮರಿಸಬಹುದಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಶಾಸ್ತ್ರೀಯ ಸಂಗೀತದ ಬಗ್ಗೆ ಜನರ ಒಲವು ಕಡಿಮೆಯಾದಂತೆ ತೋರುತ್ತದೆ. ಎಲ್ಲ ರೀತಿಯ ಸಂಗೀತಕ್ಕೂ ಮೂಲವಾಗಿರುವ ಶಾಸ್ತ್ರೀಯ ಸಂಗೀತವೇ ಇಂದು ಮೂಲೆ ಗುಂಪಾಗುತ್ತಿದೆಯೇನೋ ಎಂಬ ಭಾವನೆ ಹೆಚ್ಚುತ್ತಿದೆ. ಮೈಸೂರು ಸೇರಿದಂತೆ ದೇಶದ ಅನೇಕ ಭಾಗಗಳನ್ನು ಸಂಗೀತ ವಿಶ್ವವಿದ್ಯಾನಿಲಯಗಳಿದ್ದು, ಶಾಸ್ತ್ರೀಯ ಸಂಗೀತದ ಜೊತೆಗೆ ಸಂಗೀತದ ಇತರ ಪ್ರಕಾರಗಳಲ್ಲಿಯೂ, ವಾದ್ಯ ಸಂಗೀತ, ಲಘು ಸಂಗೀತ ಇತ್ಯಾದಿ ವಿಭಾಗಗಳಲ್ಲಿ ಕೂಡ ಉತ್ತಮ ಗುಣಮಟ್ಟದ ಸಂಗೀತ ಶಿಕ್ಷಕರಿಂದ ತರಗತಿಗಳು ನಡೆದು ಸಂಗೀತದಲ್ಲಿ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿ ತರಗತಿಗಳು ನಡೆಯುತ್ತಿವೆ. ಇದು ಒಂದು ರೀತಿಯಲ್ಲಿ ಸಂತೋಷದ ಸಂಗತಿ. ಸಂಗೀತ ಎಂಬುದು ದಿವ್ಯ ಶಕ್ತಿ. ಕಠಿಣವಾದ ಪರಿಶ್ರಮ, ಆಸಕ್ತಿ ಮತ್ತು ಬದ್ಧತೆಗಳಿಲ್ಲದೇ ಸಂಗೀತ ಖಂಡಿತಾ ಒಲಿಯುವುದಿಲ್ಲ. ಅರ್ಧಂಭರ್ಧ ಕಲಿತವರು ಖಂಡಿತಾ ಸಂಗೀತಗಾರರಾಗಲು ಸಾಧ್ಯವಿಲ್ಲ. ಕಳೆದ ಒಂದು ದಶಕದ ಕಾಲದಿಂದೀಚೆಗೆ ಕರೋಕೆ ಗಾಯನ ಹೆಚ್ಚು ಜನಪ್ರಿಯವಾಗುತ್ತಿದೆ. ಕರೋಕೆ ಗಾಯಕರಾಗಲು ಯಾವುದೇ ರೀತಿಯ ಸಂಗೀತ ಜ್ಞಾನ ಅಥವಾ ಹಿನ್ನೆಲೆ ಬೇಡ. ಸಿದ್ಧ ಪಡಿಸಿದ ಹಾಡು ಮತ್ತು ಸಂಗೀತಕ್ಕೆ ಧನಿ ಬೆರೆಸಿದರೆ ಸಾಕು. ಕರೋಕೆ ಸಂಗೀತದಿಂದ ವೃತ್ತಿಪರ ವಾದ್ಯಗಾರರಿಗೆ ಕೆಲಸವಿಲ್ಲದಂತಾಗಿದೆ. ಅನೇಕ ವೃತ್ತಿಪರ ವಾದ್ಯಗಾರರು, ತಮ್ಮ ವೃತ್ತಿ ತೊರೆದು ಬೇರೆ ಬೇರೆ ಕೆಲಸಗಳನ್ನು ಹುಡುಕಿಕೊಳ್ಳುತ್ತಿದ್ದಾರೆ. ಸಂಗೀತದ ಬೆಳವಣಿಗೆಗೆ ಇದೊಂದು ಆಘಾತಕಾರಿಯಾದ ಬೆಳವಣಿಗೆ. ಈ ಪ್ರವೃತ್ತಿ ಇನ್ನು ಮುಂದಾದರೂ ಕೊನೆಗೊಳ್ಳಬೇಕಾಗಿದೆ.

ಸಂಗೀತದ ಸ್ಪರ್ಷವಿಲ್ಲದ ಯಾವುದೇ ಹಾಡುಗಾರಿಕೆ ಅರ್ಧಂಬರ್ಧ ಬೆಂದ ಮಡಿಕೆ ಎನಿಸಿಕೊಳ್ಳುತ್ತದೆ. ಸಂಗೀತವೆಂಬುದು ಸಾಗರಕ್ಕಿಂತಲೂ ಆಳ. ಅದನ್ನು ತಿಳಿದಷ್ಟೂ ಇನ್ನೂ ತಿಳಿಯಬೇಕೆಂಬ ಹಂಬಲ ಹೆಚ್ಚುತ್ತದೆ. ಸಂಗೀತ ಎಂಬ ದೈವೀ ಕಲೆಯನ್ನು ಶ್ರದ್ಧಾ ಭಕ್ತಿಗಳಿಂದ ಉತ್ತಮ ಗುರುಗಳ ಮೂಲಕ ಕಲಿತರೆ ನಮ್ಮ ಜನ್ಮ ಪಾವನವಾಗುವುದು. ಸಂಗೀತ ಉತ್ತಮ ಸಂಸ್ಕೃತಿಯನ್ನು ಸಹಾ ಕಲಿಸುತ್ತದೆ. ಅದೇ ರೀತಿ ಜೀವನ ವಿಧಾನವನ್ನು ಸಹ ಸಂಗೀತದಿಂದ ಕಲಿಯಬಹುದು.

(ಲೇಖಕರು: ವಕೀಲರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕೊಲ್ಲಲು ನಿಂತಾಗ

'ವೈದ್ಯೋ ನಾರಾಯಣೋ ಹರಿಃ' ಎನ್ನುವ ಮಾತಿದೆ. ಅದರಂತೆ ವೈದ್ಯರು ಅದೆಷ್ಟೋ ಜನರ ಜೀವವನ್ನು ಉಳಿಸಿರುವುದು ಉಂಟು. ಹೀಗೆ ಅನಾರೋಗ್ಯಕ್ಕೆ ಒಳಗಾದವರನ್ನು ಉಳಿಸಬೇಕಿರುವ ವೈದ್ಯರು ಇನ್ನು ಭೂಮಿಯನ್ನು ಸ್ಪರ್ಶಿಸದೇ ತಾಯಿಯ ಗರ್ಭದಲ್ಲಿ ನೆಮ್ಮದಿಯಿಂದ ಉಸಿರಾಡುತ್ತಿರುವ ಭ್ರೂಣದ ಉಸಿರು ನಿಲ್ಲಿಸುವ ಕೆಲಸ ನಡೆದಿರುವುದು ನಾಚಿಕೆಗೇಡಿನ ಸಂಗತಿ ಬೆಳಕಿಗೆ ಬರುತ್ತಿದೆ. ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಳಗಾವಿ ಬಳಿಕ ಇದೀಗ ಕೋಲಾರದಲ್ಲಿ ಬೆಳಕಿಗೆ ಬಂದಿದೆ. ಸರಕಾರದಿಂದ ಕೇವಲ ಭ್ರೂಣದ ಆರೋಗ್ಯ ತಪಾಸಣೆಗಾಗಿ ಸ್ಕ್ಯಾನಿಂಗ್ ಮಾಡುವ ಅನುಮತಿ ಪಡೆದು ಭ್ರೂಣ ಲಿಂಗ ಪತ್ತೆ ಮಾಡುತ್ತಿರುವುದು ಖಂಡನಾರ್ಹ. ದುಡ್ಡಿನ ಆಸೆಗಾಗಿ ಇಂತಹ ಹೇಯಕೃತ್ಯ ಮಾಡುತ್ತಿರುವ ವೈದ್ಯರು ವೈದ್ಯವೃತ್ತಿಗೆ ಕಳಂಕವಿದ್ದಂತೆ. ನಕಲಿ ವೈದ್ಯರಿಗೆ ತಕ್ಕ ಶಿಕ್ಷೆ ಸಮಾಜದ ಹಿತ ಕಾಪಾಡುವ ಜವಾಬ್ದಾರಿ ಸರಕಾರ, ಪೊಲೀಸ್ ಇಲಾಖೆಯೊಂದಿಗೆ ಜನಸಾಮಾನ್ಯರಿಗೂ ಇದೆ. ಆದ್ದರಿಂದ ಇಂತಹ ಘಟನೆಗಳು ಕಂಡುಬಂದಲ್ಲಿ ಪೊಲೀಸ್ ಅಧಿಕಾರಿಗ ಗಮನಕ್ಕೆ ತರುವುದು ಉತ್ತಮ.

– **ಲಕ್ಷ್ಮೀ ಶಿವಣ್ಣ** ಮಹಿಳಾ ವಿವಿ ವಿಜಯಪುರ

ದರ ಏರಿಕೆ ಪರ್ವ ಅರಂಭ

ಚುನಾವಣೆ ಪರ್ವ ಮುಗಿದ ನಂತರ ದರ ಏರಿಕೆ ಪರ್ವ ಅರಂಭವಾಗುತ್ತದೆ ಎನ್ನುವ ಜನಸಾಮಾನ್ಯರ ನಿರೀಕ್ಷೆ ಸುಳ್ಳಾಗಲಿಲ್ಲ. ಚುನಾವಣೆ ಮುಗಿದು ಮೂರೇ ದಿನಕ್ಕೆ ಕೆಲವು ಹೆದ್ದಾರಿಶುಲ್ಕ ಏರಿಕೆಯಾಯಿತು. ಈ ಏರಿಕೆ ವಿರುದ್ಧ ಪ್ರತಿಭಟನೆ ಯಾಗುತ್ತಿರುವಂತೆ, ಪೆಟ್ರೋಲ್ -ಡೀಸೆಲ್ ದರಗಳ ಏರಿಕೆಯಾ ಯಿತು. ಇದರ ವಿರುದ್ಧ ಅಕ್ರೋಶ ವ್ಯಕ್ತವಾಗುತ್ತಿರುವಂತೆ ನೀರು ಮತ್ತು ಸಾರಿಗೆ ದರ ಏರಿಕೆಯ ಮಾತು ಕೇಳಿ ಬರುತ್ತಿದೆ. ಹಾಗೆಯೇ ಎಟಿಎಂ ಸೇವಾ ಶುಲ್ಕವೂ ಏರಿಕೆಯಾಗಬಹುದು ಎನ್ನುವ ಮಾತು ಬ್ಯಾಂಕಿಂಗ್ ವಲಯದಲ್ಲಿ ಕೇಳುತ್ತಿದೆ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎನ್ನುವಂತೆ ಜನಸಾಮಾನ್ಯ ರಿಗೆ ಬೆಲೆ ಏರಿಕೆಯಿಂದ ಬಿಡುಗಡೆ ಇಲ್ಲ. ರಾಜಕಾರಿಣಿಗಳು ಎಂದಿನಂತೆ ತಾವೂ ಪ್ರತಿಪಕ್ಷದವರೋ, ಅಡಳಿತ ಪಕ್ಷದವರೋ ಎನ್ನುವುದನ್ನು ನೋಡಿಕೊಂಡು ಈ ಬೆಲೆ ಏರಿಕೆಗೆ ಪ್ರತಿಕ್ರಿಯಿಸುತ್ತಿದ್ದಾರೆ.

-ರಮಾನಂದ ಶರ್ಮಾ, ಬೆಂಗಳೂರು

ದೇಶಕ್ಕೆ ಪ್ರೇರಣೆಯಾದವರು

ಕನ್ನಡಿಗರಿಗೆ ಹೆಮ್ಮೆಯಾಗುವಂತೆ ಹಾಗೂ ದೇಶದ ಜನತೆಗೆ ಪ್ರೇರಣೆ ಸಿಗಲೆಂದು 12ನೇ ಶತಮಾನದ ಸ್ವತಂತ್ರ ಚಿಂತನವಾದಿ ಮತ್ತು ಸಮಾಜದಲ್ಲಿ ಮೇಲ್ವರ್ಗದ ಜನರಿಂದ ದರ್ಬಲರ ಮೇಲೆ ಹೇರಲಾಗಿದ್ದ ಜಾತಿ ಭೇದ ,ಲಿಂಗ ಭೇದ, ವಿಗ್ರಹರಾಧನೆ, ಅಸಮಾನತೆಯೆಂಬ ಅನೇಕ ಮೌಢ್ಯಾಚಾರಗಳ ನಿರ್ಮೂಲನೆಗಾಗಿ ಮತ್ತು ಸ್ತ್ರೀ ಸಮಾನತೆಯಂತಹ ಸಂವಿಧಾನವು ಒಳಗೊಂಡಂತಹ ಮೌಲ್ಯಗಳನ್ನು ಎತ್ತಿ ಹಿಡಿಯಲು ಶರಣ ಕ್ರಾಂತಿಯನ್ನೇ ಆರಂಭಿಸಿದ ಬಸವಣ್ಣನವರ ಮೂರ್ತಿಯನ್ನು ಇತ್ತೀಚೆಗೆ ಉಪ ರಾಷ್ಟ್ರಪತಿ ಉದ್ಘಾಟಿಸಿದರು. ದೆಹಲಿಯ ಸಂಸತ್ ಕಟ್ಟಡದ ಆವರಣದಲ್ಲಿನ ನೂತನವಾಗಿ ನಿರ್ಮಿಸಲಾದ ಕಿತ್ತೂರು ರಾಣಿ ಚೆನ್ನಮ್ಮನ ಮೂರ್ತಿಯನ್ನು ಪ್ರೇರಣಾ ಸ್ಥಳದಲ್ಲಿ ಸ್ಥಾಪಿಸಿರುವುದು ಸಂತೋಷ ಸಂಗತಿಯಾಗಿದೆ.

– **ಶಿವರಾಜ ಎಂ.ಕೆ**, ಗದಗ

ಭಟ್ಟರ್ ಸ್ಕಾಚ್

● **ಪೂರ್ಣಯ್ಯ, ಮೈಸೂರು**
ಭಟ್ರೇ, ಈ ಅಳಿಮಯ್ಯನಿಗೆ ಮಾವಯ್ಯ ಮದುವೆ ಗಿಫ್ಟ್ ಪವರ್ ಬೈಕ್ ಕೊಡಿಸುತ್ತಾ ಪಿಲಿಯನ್ ಸಪೋರ್ಟ್ ಕಿತ್ತುಹಾಕಿಸಿದ್ದನಲ್ಲ ?
- ಅಳಿಯನ ಆಲಿಂಗನದಲ್ಲಿ ಮಗಳು ಕ್ಷೇಮವಾಗಿರುತ್ತಾಳೆ ಅಂತ ತಿಳಿದಿರಬೇಕು !

● **ರೂಪಶ್ರೀ, ಮೈಸೂರು**
ಭಟ್ರೇ, ರೀಲ್ ಮಾಡೋಣ ಬಾ ಅಂದ್ರೂ, ಆತ ಬರ್ತಾ ಇಲ್ಲವಲ್ಲ?
- ರೀಲ್ ಬಿಡೋಣ ಬಾ ಅಂತ ಹೇಳಿ ನೋಡು, ಬರಬಹುದು!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ನಾನೂ ಡಾಕ್ಟರ್ ಆಗಬಹುದಾ?
- ಭಟ್ಟರ್ ಸ್ಕಾಚ್ ಮೇಲೆ ಪಿಎಚ್.ಡಿ. ಮಾಡಿ ಡಾಕ್ಟರ್ ಆಗಬಹುದಲ್ಲ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ ಹೆಂಡತಿಯಲ್ಲೇ ಹೆಂಡ ಇದೆ ಎಂದು ಹೇಳುತ್ತಿದ್ದಾನಲ್ಲ?
- ಅದಕ್ಕಾಗಿಯೇ ಇಬ್ಬರೂ ಸೇರಿ ಕುಡಿಯುತ್ತಿರಬೇಕು!

● **ರಮಾ ನಾಗಚಂದ್ರ, ಬೆಂಗಳೂರು**
ಈ ಸೋಷಿಯಲ್ ಮೀಡಿಯಾ ದಿನದಲ್ಲಿ ಸೌಜನ್ಯ, ಗೌರವ ಅಂದ್ರೆ ಏನು ಭಟ್ರೇ?
- ಮೊಬೈಲ್ ಬದಿಗಿಟ್ಟು, ಇನ್ನೊಬ್ಬರ ಮಾತಿಗೆ ಗಮನಕೊಡುವ ಆಪ್‌ನ್ನು ಡೌನ್‌ಲೋಡ್ ಮಾಡಿಕೊಳ್ಳುವುದು!

● **ವಾಸುದೇವ ಅಡಿಗ, (ಇಮೇಲ್ ಮೂಲಕ)**
ಸರ್, ಪತ್ನಿಯೇ ಪ್ರತ್ಯಕ್ಷ ದೇವತೆ ಅಂದರೆ ಹೇಗೆ?
- ಆಗ 'ಪತಿಯೇ ಪರರ ದೈವ' ಎನ್ನಬಹುದು!

● **ರಾಮಲಿಂಗಪ್ಪ, ಮಂಡ್ಯ**
ಭಟ್ರೇ, ನನ್ನ ಹೆಂಡತಿ ಗೋಡ್ಸೆ ದೂರದ ಸಂಬಂಧಿ ಅನಿಸುತ್ತಿದೆಯಲ್ಲ?
- ಯಾಕೆ ನಿಮ್ಮ ಪರ್ಸಿನಲ್ಲಿರುವ ಗಾಂಧಿ ನೋಟುಗಳನ್ನೆಲ್ಲಾ ಮುಗಿಸುತ್ತಿದ್ದಾಳಾ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಸಿನಿಮಾದಲ್ಲಿ ನೋವು-ನಲಿವುಗಳಿಗೆ ಹಾಡುಗಳನ್ನು ಹಾಡ್ತಾರೆ. ನಿಜ ಜೀವನದಲ್ಲಿ?
- ಎಣ್ಣೆ ಅಂಗಡಿಗೆ ಹೋಗ್ತಾರೆ!

● **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ನಿಮ್ಮ ಮಾಜಿ ಪ್ರೇಯಸಿ ಈಗಲೂ ಸಂಪರ್ಕದಲ್ಲಿ ಇದ್ದಾರಾ?
- ಪ್ರೇಯಸಿ ಯಾವತ್ತೂ ಮಾಜಿ ಆಗುವುದಿಲ್ಲ ಗೊತ್ತಿರಲಿ!

● **ಸತೀಶ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಕೆಲವರು ಕಿತ್ತೋಗುತ್ತೆ ಅಂತ ಗೊತ್ತಿದ್ರೂ ಎಳೆಯುವುದನ್ನು ಬಿಡುವುದಿಲ್ಲವಲ್ಲ?
- ಕಿತ್ತೋಗಲಿ ಎಂಬುದೇ ಅವರ ಉದ್ದೇಶ ಆಗಿರುತ್ತದೆ!

ಸುರಿವ ಮಳೆ ತಂದ ಸಂಕದ ನೆನಪು

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಮತ್ತೆ ಮಳೆಯಾಗುತ್ತಿದೆ, ಮಳೆಗಾಲದ ನೆನಪುಗಳು ಮನಸ್ಸಿನ ತುಂಬಾ ತುಂಬಿ, ಒಂದು ರೀತಿಯ ಆಪ್ತ ನೆನಪುಗಳನ್ನು ಮೂಡಿಸುತ್ತಿವೆ. ಮಳೆ ಎಂದರೆ ಹಾಗೆಯೇ ತಾನೆ; ಅದರಲ್ಲೂ, ನಮ್ಮೂರಿನ ಮಳೆ ಎಂದರೆ ನಮಗೆ ಇನ್ನಷ್ಟು ಇಷ್ಟ! (ನಿಮಗೆ ನಿಮ್ಮೂರಿನ ಮಳೆ ಇಷ್ಟ ಇರಬಹುದಲ್ಲವೆ?) ಒಮ್ಮೆ ಆರಂಭ ಗೊಂಡರೆ, ವಾರಗಟ್ಟಲೆ ಮಳೆ ಬರುವ ಊರು ನಮ್ಮದು. ಜೂನ್‌ನಿಂದ ಸೆಪ್ಟೆಂಬರ್ ತನಕ ಆಗಾಗ, ಮಳೆ ಬೀಳುತ್ತಾ, ಮನೆ ಸುತ್ತಲಿನ ಜಗತ್ತನ್ನು ನೀರಿನಿಂದ ತುಂಬಿ ಬಿಡುವ ಹಳ್ಳಿ ನಮ್ಮದು. ನಮ್ಮ ಹಳ್ಳಿ ಮನೆಯ ಸುತ್ತಲೂ ಸುರಿವ ಮಳೆಯನ್ನು ದೂರ ಸಾಗಿಸಲು ಇರುವ ಪ್ರಾಕೃತಿಕ ನಿರ್ಮಿತಿಗಳೇ ತೋಡುಗಳು ಮತ್ತು ಪುಟ್ಟ ಹೊಳೆಗಳು. ಆ ತೋಡಿನಲ್ಲಿ ರಭಸವಾಗಿ ಹರಿಯುವ ನೀರು. ಅದನ್ನು ದಾಟಬೇಕಾದರೆ, ನಮಗೆ ಅಗತ್ಯವಾಗಿ ಬೇಕು 'ಸಂಕ'! ಶಾಲೆಗೆ ಹೋಗಲು ಸಹ ಸಂಕ ದಾಟ ಬೇಕು, ಗಂಟಿ ಮೇಯಿಸಲು ಗುಡ್ಡೆ ಹೋಗಲು ಸಹ ಸಂಕ ದಾಟಬೇಕು. ಹಳ್ಳಿಯ ಜನರು ಉಪ್ಪು, ಮೆಣಸು ತರಲು ಪೇಟೆಗೆ ಹೋಗಲು ಸಹ ಸಂಕ ದಾಟಿಯೇ ಹೋಗಬೇಕು. ಏನಿದು ಸಂಕ?

ಮಳೆ ಬಂದಾಗ ಹೆಚ್ಚು ಬಳಕೆಯಾಗುವ, ಬೇರೆ ಸಮಯದಲ್ಲೂ ಆಗಾಗ ಮಾತಿನಲ್ಲಿ ನುಸುಳುವ ಒಂದು ಪದ ಎಂದರೆ 'ಸಂಕ'. ನಮ್ಮ ಹಳ್ಳಿಯ ಸುತ್ತ ಮುತ್ತಲೂ ಜನರಾಡುವ ಭಾಷೆಯಲ್ಲಿ ಸಂಕ ಎಂದರೆ, ತೋಡು ಅಥವಾ ಪುಟ್ಟ ಹೊಳೆಯನ್ನು ದಾಟಲು ಎರಡೂ ದಡಗಳಿಗೆ ಅಡ್ಡಲಾಗಿ ಹಾಕುವ ಮರದ ಕಾಂಡ. ಒಂದೆರಡು ಅಡಿ ಅಗಲದ ತೋಡಿನಿಂದ ಹಿಡಿದು, ಹದಿನೈದು ಇಪ್ಪತ್ತು ಅಡಿ ಅಗಲದ ಸಣ್ಣ ಹೊಳೆಗೆ (ದೊಡ್ಡ ತೋಡು) ಅಡ್ಡಲಾಗಿ ಸಹ ಇಂತಹ ಮರದ ಕಾಂಡವನ್ನು ಹಾಕುತ್ತಾರೆ; ತೋಡಿನ ಅಗಲ ತೀರಾ ಜಾಸ್ತಿ ಎನಿಸಿದಾಗ, ಹೆಚ್ಚು ಭದ್ರತೆಗಾಗಿ ಎರಡು ಮರಗಳನ್ನು ಒಟ್ಟೊಟ್ಟಿಗೆ ಎರಡೂ ದಡದ ಅಗಲಕ್ಕೆ ಮಲಗಿಸಿರುತ್ತಿದ್ದರು. ಅದನ್ನು 'ಸಾರ' ಎನ್ನುವುದುಂಟು. ನೆರೆ ಬಂದಾಗ ಕೆಳಗಿನ ತೋಡಿನಲ್ಲಿ ರಭಸದಿಂದ ಹರಿಯುವ ನೀರು; ಮಳೆ ಕಡಿಮೆಯಾದರೂ, ಸುಮಾರು ನವೆಂಬರ್ ತಿಂಗಳಿನ ತನಕವೂ ಹೆಚ್ಚಿನ ತೋಡುಗಳಲ್ಲಿ ನೀರಿರುವುದರಿಂದಾಗಿ, ನಮ್ಮೂರಿನ ಜನರು ಓಡಾಡಲು ಸಂಕವು ಅಗತ್ಯ ಬೇಕೇ ಬೇಕು. ಮತ್ತು ಇದನ್ನು ದಾಟಲು ಒಂದು ಮಟ್ಟದ ಕೌಶಲವೂ ಅಗತ್ಯ! ಆ ಕೌಶಲವನ್ನು ರೂಢಿಸಿಕೊಳ್ಳದೇ ಇದ್ದರೆ, ಸಂಕದ ಮೇಲೆ ನಡೆಯುವಾಗ ಜಾರಿ ಬಿದ್ದು, ತೋಡಿನಲ್ಲಿ ರಭಸ ವಾಗಿ ಹರಿಯುವ ನೀರಿನಲ್ಲಿ ಕೊಚ್ಚಿ ಹೋಗುವ ಸಾಧ್ಯತೆಯೂ ಉಂಟು.

'ಸಂಕದ ಮೇಲಿನ ನಡಿಗೆ' ಎಂದರೆ, ಕೆಳಗೆ ಹರಿಯುತ್ತಿರುವ ನೀರಿಗೆ ಬೀಳದೇ, ಅದರ ರಭಸ ಕಂಡು ಬೆದರದೇ, ಬ್ಯಾಲೆನ್ಸ್ ಮಾಡಿಕೊಂಡು ಆ ಏಕೈಕ ಮರದ ಕಾಂಡದ ಮೇಲೆ ನಡೆಯುವುದು! ನನ್ನ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಸಮಯದಲ್ಲಿ ಸಂಕಕ್ಕೂ ನನಗೂ ಅನುದಿನದ ನಂಟು. ನಮ್ಮ ಮನೆಯಿಂದ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿರುವ ಗೋರಾಜೆ ಶಾಲೆಗೆ ನನ್ನದು ಪ್ರತಿ ದಿನ ಚಾರಣ : ಅದು ಒಂದು ಕಿರಿಯ ಪ್ರಾಥಮಿಕ ಶಾಲೆ. ಪ್ರತಿದಿನವೂ ಆ ಶಾಲೆಗೆ ಹೋಗುವಾಗ, ನಾನು ಹನ್ನೆರಡು ಬಾರಿ ಮರದ ಸಂಕವನ್ನು ದಾಟ ಬೇಕಿತ್ತು! ಹನ್ನೆರಡು ಬಾರಿ ಬ್ಯಾಲೆನ್ಸ್ ಮಾಡಿಕೊಂಡು ಹೋಗಬೇಕಿತ್ತೇ ಎಂದು ಮೂಗಿಗೆ ಬೆರಳೇರಿಸಬೇಡಿ. ಆ ಶಾಲೆಗೆ ಹೋಗುವ ದಾರಿಯಲ್ಲಿ ಮೂರು ತೋಡು (ಹಳ್ಳ)ಗಳಿದ್ದವು. ಒಂದು ದೊಡ್ಡ ತೋಡು, ಇನ್ನೆರಡು ಸಣ್ಣ ತೋಡುಗಳು. ಅವನ್ನು ದಾಟಲು ತಲಾ ಒಂದೊಂದು ಮರದ ಸಂಕ. ಬೆಳಗ್ಗೆ ಮೂರು ಬಾರಿ, ಮಧ್ಯಾಹ್ನ ಊಟಕ್ಕೆ ಬರುವಾಗ ಮೂರು ಬಾರಿ, ಊಟ ಮುಗಿಸಿ ಹೋಗುವಾಗ ಮೂರು ಬಾರಿ, ಸಂಜೆ ವಾಪಸ್ ಬರುವಾಗ ಮತ್ತೆ ಮೂರು ಬಾರಿ ಸಂಕದ ಮೇಲೆ ನಡೆದು ಶಾಲೆಗೆ ಹೋಗುತ್ತಿದ್ದೆವು.

ನಮ್ಮ ಮನೆಯ ಎದುರಿನ ಅಗೇಡಿ ಅಂಚಿನಲ್ಲಿ ಸುಮಾರು ನೂರು ಮೀಟರ್ ನಡೆದು, ಬಲಭಾಗದಲ್ಲಿ ಸಿಗುವ ತೋಡಿನ ಅಂಚಿನಲ್ಲೇ, ಮುಂಡುಕನ ಹಿಂಡಲುಗಳ ಪಕ್ಕದಲ್ಲೇ ತುಸು ದೂರ ಸಾಗಿದ ನಂತರ, ಆ ತೋಡನ್ನೇ ದಾಟಿ ನಡೆಯಬೇಕಾದ ಅನಿವಾರ್ಯತೆ; ಇಲ್ಲೇ ಎದುರಾಗುವುದು ಶಾಲಾ ದಾರಿಯ ಮೊದಲ ಸಂಕ. ಮಳೆಗಾಲದಲ್ಲೋ, ಈ ತೋಡಿನಲ್ಲಿ ಕೆಂಪನೆಯ ನೀರು! ಒಮ್ಮೊಮ್ಮೆ ನಾಲ್ಕಾರು ದಿನ ಎಡೆಬಿಡದೆ ಮಳೆ ಸುರಿವ ಹಳ್ಳಿ ನಮ್ಮದು; ಅಂತಹ ದಿನಗಳಲ್ಲಿ ರಭಸವಾಗಿ ಹರಿಯುವ ನೀರನ್ನು ಆ ತೋಡಿನಲ್ಲಿ ನೋಡುವುದೇ ಒಂದು ವಿಶಿಷ್ಟ ಅನುಭವ; ಸುಳಿ ಸುಳಿ ಸುತ್ತುತ್ತಾ ಹರಿಯುವ ಆ ಕೆಂಪನೆಯ ನೀರನ್ನು ನೋಡುತ್ತಲೇ ಶಾಲೆಗೆ ಹೋಗುತ್ತಿದ್ದೆವು. ಆದರೆ ಈ ತೋಡು ಸಾಕಷ್ಟು ದೊಡ್ಡದು, ಮಕ್ಕಳು ಅಕಸ್ಮಾತ್ ಜಾರಿ ಬಿದ್ದರೆ ಕೊಚ್ಚಿ ಹೋಗುವಷ್ಟು ನೀರು ಒಮ್ಮೊಮ್ಮೆ ಅದರಲ್ಲಿ ಹರಿಯುತ್ತಿತ್ತು. ಆ ನೀರಿನ ರಭಸವನ್ನೇ ನೋಡುತ್ತಾ, ಸಂಕದ ಮೇಲೆ ನಡೆದರೆ ಕಾಲುಜಾರಿ ಬೀಳುವುದೇ ಸೈ. ಆ ನೀರಿನ ಭಯದಿಂದ ದೂರಾಗಲು ಜತೆಗಾರರು ಒಂದು ಉಪಾಯ ಹೇಳಿಕೊಡುತ್ತಿದ್ದರು 'ನೀರನ್ನು ಕಾಂಬುಕಾಗ, ಮರದ ಸಂಕವನ್ನು ಮಾತ್ರ ಕಂಡಕಂಡ್ ನಡಿಕ್. ಆಗ ಹೆದ್ರಿಕೆ ಆತಿಲ್ಲೆ'.

ನಮ್ಮ ಮನೆಯಿಂದ ಸುಮಾರು ಇನ್ನೂರು ಮೀಟರ್ ದೂರದಲ್ಲಿದ್ದ ಈ ಸಂಕವನ್ನು ದಾಟುವಾಗ ಕೆಳಗಿನ ತೋಡಿಗೆ ಒಮ್ಮೆ ನಾನು ಬಿದ್ದಿದ್ದೆ! ಸುಮಾರು ಹದಿನೈದು ಅಡಿ ಅಗಲದ ತೋಡು ಅದು; ಎರಡೂ ದಡಗಳನ್ನು ಜೋಡಿಸಿರುವ ಮರದ ಸಂಕದ ಉದ್ದ ಸುಮಾರು ಇಪ್ಪತ್ತು ಅಡಿ. ಒಂದೇ ಮರ ಹಾಕಿದರೆ ದಾಟಲು ಕಷ್ಟವಾಗುತ್ತದೆ ಎಂದು ಎರಡು ಮರಗಳನ್ನು ಜೋಡಿಸಿದ್ದರು; ಅದರಲ್ಲೊಂದು ಮರ ಓರೆಕೋರೆಯಾಗಿತ್ತು. ಆಗಸ್ಟ್ ತಿಂಗಳಿನ ಒಂದು ದಿನ, ಆ ಸಂಕವನ್ನು ಬಹುಪಾಲು ದಾಟಿ, ಇನ್ನೇನು ಕೊನೆಯ ಮೂರು ಅಡಿ ಹೆಜ್ಜೆ ಹಾಕಿ ಆಚೆ ದಡ ಸೇರಬೇಕು ಎನ್ನುವಷ್ಟರಲ್ಲಿ, ಎರಡು ಮರಗಳ ನಡುವಿನ ಸಂದಿಯಲ್ಲಿ ಸಿಕ್ಕಿಕೊಂಡ ನನ್ನ ಕಾಲು ಎಡವಿತು! ಜಾರಿ ತೋಡಿಗೆ ಬಿದ್ದೆ; ಸುಮಾರು ಆರು ಅಡಿ ಆಳ; ಹೆಚ್ಚಿನ ಏಟಾಗುವ ಸಂಭವ ಇರಲಿಲ್ಲ; ಆ ಸಮಯ ದಲ್ಲಿ ತೋಡಿನಲ್ಲಿ ಹೆಚ್ಚು ನೀರು ಇರಲಿಲ್ಲ - ಬಿದ್ದ ರಭಸಕ್ಕೆ ಹಾಕಿದ್ದ ಅಂಗಿ ಚಡ್ಡಿ ಒದ್ದೆಯಾಯಿತು; ಕೈಲಿದ್ದ ಪುಸ್ತಕಗಳು ನೀರಿನಲ್ಲಿ ಸ್ನಾನ ಮಾಡಿದವು. ಆಚೆ ದಡಕ್ಕೆ ಒತ್ತಿಕೊಂಡಂತೆ ಒಂದು ಮನೆ; ಅಲ್ಲಿನ ಮಕ್ಕಳು ಸಹ ನನ್ನ ಜತೆಯಲ್ಲೇ ಶಾಲೆಗೆ ಹೋಗುವವರು - ಅವರ ತಾಯಿ ಲಕ್ಷ್ಮಮ್ಮ ಎಂಬುವವರು ಓಡಿ ಬಂದು, ತೋಡಿನಿಂದ ಎದ್ದು ಮೇಲೆ ಬರಲು ಸಹಾಯ ಮಾಡಿ, ಅವರ ಮನೆಗೆ ಕರೆದುಕೊಂಡು ಹೋದರು.

'ಬಿದ್ದದ್ದಕ್ಕೆ ಗಾಯ ಎಂತ ಆಗಿಲ್ಲ ಅಲ್ದಾ? ಜಾಸ್ತಿ ನೀರಿರಲಿಲ್ಲ, ಒಳ್ಳೆದಾಯಿತು. ಇರಲಿ.. ನೀನು ಯಾವ ಕಾಲು ಎಡವಿ ಬಿದ್ದದ್ದು?' ಎಂದು ಕೇಳಿದರು. 'ಬಲಗಾಲು' ಎಂದೆ. 'ಓ, ಹಾಗಾದರೆ ನಿನಗೆ ಇವತ್ತು ಒಂದು ಒಳ್ಳೆಯ ಸುದ್ದಿ ಇರತ್. ಬಿದ್ದಿದ್ದೂ ಒಳ್ಳೆಯದಕ್ಕೇ... ನೀ ಏನೂ ಬೇಜಾರ್ ಮಾಡ್ಕಂಬುದೇ ಬೇಡ' ಎಂದು ಹುರಿದುಂಬಿಸಿದರು - ಬಿದ್ದ ನೋವನ್ನು ಮರೆಸುವ, ಸಕಾರಾತ್ಮಕ ಪ್ರೋತ್ಸಾಹದ ಮಾತುಗಳು ಅವು.

ಆ ಮೊದಲ ಸಂಕವನ್ನು ದಾಟಿದ ತಕ್ಷಣ ಒಂದಷ್ಟು ಮಕ್ಕಿಗದ್ದೆಗಳು, ನಂತರ ದಟ್ಟವಾಗಿ ಬೆಳೆದ ಹಕ್ಕಲು, ಗುಡ್ಡೆದಾರಿ. ಆ ಗುಡ್ಡೆಯನ್ನು ಇಳಿಯುವಾಗ ಇನ್ನೊಂದು ಮರದ ಸಂಕ - ಈ ತೋಡಿನ ಅಗಲ ಕಡಿಮೆ. ಆದರೆ ಸಂಕ ಇಳಿಜಾರಾಗಿತ್ತು - ದಾಟುವಾಗ ಸಣ್ಣಗೆ ಬೆದರುವಂತೆ ಮಾಡುತ್ತಿತ್ತು. ಆ ಸಂಕ ದಾಟಿದ ನಂತರ ಒಂದು ಬತ್ತದ ಗದ್ದೆ, ಅದರ ಅಂಚಿನಲ್ಲೇ ಸಾಗಿ ಎಡಕ್ಕೆ ತಿರುವಿದಾಗ, ಇನ್ನೊಂದು ತೋಡು ಎದುರಾಗುತ್ತದೆ. ಅದನ್ನು ದಾಟಲು ನಾಲ್ಕಾರು ಅಡಕೆ ಮರದ ದಬ್ಬೆಗಳನ್ನು ಜೋಡಿಸಿರುತ್ತಿದ್ದರು. ಅಷ್ಟೇನೂ ಅಗಲವಿಲ್ಲದ ತೋಡು ಅದು. ನಡೆಯುವಾಗ ಭಯ ಇರಲಿಲ್ಲ, ಆದರೆ, ಆ ತೋಡಿನುದ್ದಕ್ಕೂ ಎರಡೂ ಕಡೆ ಬೆಳೆದಿದ್ದ ಮುಂಡುಕನ ಮುಳ್ಳುಗಳು ಮೈಗೆ ತಾಗದಂತೆ ನಡೆಯುವ ಜಾಗ್ರತೆ ವಹಿಸಬೇಕಿತ್ತು.

ಬೆಳಗ್ಗೆ ಎದ್ದು ಈ ಮೂರು ಸಂಕಗಳನ್ನು ದಾಟಿ, ಹಾಡಿ ಗುಡ್ಡಗಳಲ್ಲಿ ನಡೆದು ಗೋರಾಜೆ ಶಾಲೆ ತಲುಪಿದ ನಂತರ ಅಧ್ಯಯನ ಶುರು! ಆ ಏಕೋಪಾಧ್ಯಾಯ, ಏಕ ಕೊಠಡಿಯ, ಗುಡಿಸಲು ಶಾಲೆಯಲ್ಲಿ ನಮ್ಮೆಲ್ಲರ ವಿದ್ಯಾಭ್ಯಾಸ. ಅಲ್ಲಿದ್ದದ್ದು ನಾಲ್ಕು ತರಗತಿಗಳು ಮಾತ್ರ; ಎಲ್ಲಕ್ಕೂ ಸೇರಿ ಒಂದೇ ಕೊಠಡಿ; ಮಣ್ಣಿನ ನೆಲ; ಪುಟ್ಟ ಪುಟ್ಟ ಮರದ ಬೆಂಚುಗಳು. ಮಧ್ಯಾಹ್ನ ಊಟದ ಸಮಯವಾದ ಕೂಡಲೆ, ಅದೇ ದಾರಿಯಲ್ಲಿ ವಾಪಸು ಮನೆಗೆ; ನಮ್ಮ ಅಮ್ಮಮ್ಮ ಪ್ರೀತಿಯಿಂದ ಬಡಿಸುತ್ತಿದ್ದ ಬಿಸಿ ಬಿಸಿ ಅನ್ನವನ್ನು ಬೇಗನೆ ತಿಂದು, ಪುನಃ ಅದೇ ದಾರಿ ಹಿಡಿದು ನಡಿಗೆ; ಸಂಜೆ ಶಾಲೆ ಬಿಟ್ಟ ನಂತರ, ಅದೇ ದಾರಿಯಲ್ಲಿ, ಮೂರು ಸಂಕಗಳನ್ನು ದಾಟಿ ಮನೆಗೆ ವಾಪಸು. ದಾರಿಯುದ್ದಕ್ಕೂ ಹಕ್ಕಲು, ಹಾಡಿ, ಗುಡ್ಡೆ, ಗೋವೆಮರಗಳು ಬೆಳೆದಿದ್ದ ಮಕ್ಕಿಗದ್ದೆಯ ಅಂಚು, ಅಲ್ಲಲ್ಲಿ ಬೃಹದಾಕಾರದ ಕಾಟುಮಾವಿನ ಮರಗಳು, ಕೆಲವು ಕಡೆ ದಟ್ಟ ಹಾಡಿ, ಆ ಹಾಡಿಯಲ್ಲಿ ಸಂಚರಿಸುವ ಹಕ್ಕಿಗಳು, ಮಂಗಗಳು, ಹಕ್ಕಲಿನ ಮರಗಳ ಮೇಲೆ ಓತಿಕ್ಯಾತಗಳ ಆಟ, ಅವುಗಳಿಗೆ ಕಲ್ಲೆಸೆಯುವ ಶಾಲಾ ಮಕ್ಕಳು - ಇವೆಲ್ಲವೂ ಗೋರಾಜೆ ಶಾಲೆಯ ಅನುಭವಗಳಲ್ಲಿ ಸೇರಿ ಹೋಗಿವೆ.

ಕರಡ ಬೆಳೆಯುತ್ತಿದ್ದ ಪುಟ್ಟ ಮೈದಾನದಲ್ಲಿ, ನಾಲ್ಕಾರು ಕಾಸಾನು ಮರಗಳ ನೆರಳಿನಲ್ಲಿ, ಒಂದು ಕಡೆ ಹಕ್ಕಲು, ಇನ್ನೊಂದು ಕಡೆ ಗದ್ದೆಗಳಿರುವ ಭೂ ಪ್ರದೇಶದಲ್ಲಿದ್ದ ಗೋರಾಜೆ ಶಾಲೆಯಲ್ಲಿ ನಾಲ್ಕನೆಯ ಇಯತ್ತೆ ಪಾಸು ಮಾಡಿ, ಐದನೆಯ ತರಗತಿಗೆ ಹಾಲಾಡಿ ಶಾಲೆಗೆ ಸೇರಿದೆ. ಮೂರು ಕಿ.ಮೀ. ದೂರದಲ್ಲಿದ್ದ ಆ ಶಾಲೆಗೆ ಸಾಗಲು ಮೂರು ದಾರಿಗಳಿದ್ದು, ಎಲ್ಲಾ ದಾರಿಗಳಲ್ಲೂ ಸಂಕ ದಾಟುವುದು ಅನಿವಾರ್ಯ. ಅಗೆಲ್ಲಾ, ಅಡ್ಡವಾಗಿ ಹರಿಯುತ್ತಿದ್ದ ತೋಡುಗಳಲ್ಲಿ ನೀರಿನಾಟ ನೋಡುವುದು, ತೋಡಿನ ನೀರನ್ನೇ ಆಶ್ರಯಿಸಿದ್ದ ಕಪ್ಪೆ, ಮೀನು, ಕೊಕ್ಕರೆ, ಮಿಂಚುಳ್ಳಿ, ಒಳ್ಳೆ ಹಾವುಗಳನ್ನು ನೋಡುವುದು ಮೊದಲಾದ ವಿವಿಧ ಅನುಭವಗಳನ್ನು ಈ ದಾರಿಗಳು ಕೊಡುತ್ತಿದ್ದವು.

ನಾವು ಆಗ ಸಾಮಾನ್ಯವಾಗಿ ಅನುಸರಿಸುತ್ತಿದ್ದ ದಾರಿ ಮೊದಲಿಗೆ ನಮ್ಮ ಮನೆ ಎದುರಿನ ಅರ್ಧ ಕಿ.ಮೀ. ಉದ್ದನೆಯ ಬೈಲುದಾರಿಯಲ್ಲಿ ಸಾಗುತ್ತಿತ್ತು. ನಂತರ, ಅದರ ತುದಿಯಲ್ಲಿರುವ ತೋಡನ್ನು ದಾಟಿ ಹಾಡಿದಾರಿಯನ್ನು ಅನುಸರಿಸಬೇಕಿತ್ತು. ಈ ತೋಡನ್ನು ದಾಟಲು ಮರದ 'ಸಾರ' ಇತ್ತು. ಸುಮಾರು ಎರಡು ಅಡಿ ಉದ್ದದ ಹಲಗೆಯ ಚೂರುಗಳನ್ನು ಎರಡು ಮರದ ಮೋಪುಗಳಿಗೆ ಭದ್ರವಾಗಿ ಜೋಡಿಸಿ ಮಾಡಲಾಗಿದ್ದ ಈ ಸಾರದ ಮೇಲಿನ ನಡಿಗೆ ಸಾಕಷ್ಟು ಸುರಕ್ಷಿತ. ಒಂದೇ ಮರದ ಕಾಂಡದಿಂದ ಮಾಡಿದ ಸಂಕದ ಮೇಲಿನ ನಡಿಗೆಗಿಂತ, ಮರದ ಸಾರದ ಮೇಲಿನ ನಡಿಗೆ ಎಷ್ಟೋ ಉತ್ತಮ. ನಮ್ಮ ಮನೆಯ ಎದುರಿನಿಂದಲೇ ಹರಿದು ಬರುವ ದೊಡ್ಡ ತೋಡು, ಅರ್ಧ ಕಿ.ಮೀ. ದೂರದ ಈ ಭಾಗಕ್ಕೆ ಬರುವಾಗ ಇನ್ನಷ್ಟು ಮೈದುಂಬಿಕೊಂಡಿರುವುದರಿಂದಲೇ ಇರಬೇಕು, ಜನರ ಅನುಕೂಲಕ್ಕಾಗಿ ಇಲ್ಲಿ ಮರದ ಸಾರವನ್ನು ಪಂಚಾಯತ್ ವತಿಯಿಂದಲೇ ಮಾಡಿಸುತ್ತಿದ್ದರು. ಮಳೆಗಾಲದಲ್ಲಿ ಒಮ್ಮೊಮ್ಮೆ ಆ ತೋಡಿನಲ್ಲಿ ನೆರೆ ಬಂದಾಗ, ನಾವೆಲ್ಲಾ ಮಕ್ಕಳು ಆ ಮರದ ಸಾರದ ಮೇಲೆ ನಿಂತು ಕೆಂಪನೆಯ ನೀರನ್ನು, ಅದು ರಭಸದಿಂದ ಹರಿಯುವ ಶೈಲಿಯನ್ನು ನೋಡುತ್ತಿದ್ದುದುಂಟು.

ಇದೇ ದಾರಿಯಲ್ಲಿ ಮುಂದುವರಿದು, ಹಂದಿಕೊಡ್ಲು ಹಾಡಿಯನ್ನು ದಾಟಿ ಇನ್ನೇನು ಮುಖ್ಯ ರಸ್ತೆಯ ಹತ್ತಿರ ಬಂದು ತಲುಪುತ್ತಿದ್ದೇವೆ ಎನ್ನುವಷ್ಟರಲ್ಲಿ ಒಂದು ತೋಡು ಎದುರಾಗುತ್ತಿತ್ತು. ಇದನ್ನು ದಾಟಲು ಒಂದು ದಪ್ಪನೆಯ ಮರದ ಕಾಂಡವನ್ನು ಹಾಕಿರುತ್ತಿದ್ದರು. ಆದರೆ, ಆ ತೋಡಿನ ಒಂದು ದಡಕ್ಕೂ ಇನ್ನೊಂದು ದಡಕ್ಕೂ ಎತ್ತರದ ವ್ಯತ್ಯಾಸ ಇದ್ದುದರಿಂದ, ಈ ಸಂಕವು ತುಸು ಇಳಿಜಾರಾಗಿತ್ತು; ಆ ಇಳಿಜಾರಿನ ಸಂಕವನ್ನು ತುಸು ಜಾಗ್ರತೆಯಿಂದಲೇ ದಾಟಬೇಕಿತ್ತು.

ನಮ್ಮ ಶಾಲೆಗೆ ಹೋಗಲು ಇನ್ನೊಂದು ದಾರಿಯಿತ್ತು; ವಾಸ್ತವವಾಗಿ ಈ ದಾರಿಯಲ್ಲಿ ನಡೆದು ಹೋದರೆ, ಸುಮಾರು ಅರ್ಧ ಕಿ.ಮೀ. ಕಡಿಮೆ ದೂರ. ಆದರೆ, ದಾರಿಯುದ್ದಕ್ಕೂ ಗುಡ್ಡ, ಕಾಡು, ತುಸು ನಿರ್ಜನ ಪ್ರದೇಶ; ನಂತರ ವಿಶಾಲವಾದ ಬತ್ತದ ಬಯಲಿದ್ದ 'ಹೆರಬೈಲ್'ನಲ್ಲಿ ಆ ದಾರಿ ಸಾಗುತ್ತಿತ್ತು. ಅಲ್ಲೊಂದು ಪುಟ್ಟ ಹೊಳೆ. ಅದನ್ನು ದಾಟಲು ಒಂದೇ ಮರದ ಕಾಂಡದ ಸಂಕ. ಸುಮಾರು ಇಪ್ಪತ್ತೈದು ಅಡಿ ಅಗಲದ ಆ ಸಣ್ಣ ಹೊಳೆಯಲ್ಲಿ ಸದಾ ಕಾಲ ನೀರು; ಮಳೆಗಾಲದಲ್ಲಿ ತುಂಬಾ ನೀರು, ಚಳಿಗಾಲದಲ್ಲಿ ಹದವಾದ ನೀರು, ಬೇಸಗೆಯಲ್ಲಿ ತುಸು ನೀರು. ಅಲ್ಲಿನ ಉದ್ದನೆಯ ಸಂಕವನ್ನು ದಾಟಲು, ಮಕ್ಕಳಿಗೆ ನಿಜವಾಗಿಯೂ ತುಸು ಭಯ. ಒಂದೇ ಆ ಮರದ ಸಂಕದ ಮೇಲೆ ಜಾಗ್ರತೆಯಿಂದ ನಡೆಯುತ್ತಾ, ಮಧ್ಯ ಭಾಗ ತಲುಪಿದಾಕ್ಷಣ ಅದು ಸಣ್ಣಗೆ ಅಲುಗಾಡಲು ಆರಂಭವಾಗುತ್ತಿತ್ತು! ಆಧಾರಕ್ಕೆಂದು ಅದಕ್ಕೊಂದು ಮರದ ಕೈಪಿಡಿಯನ್ನು ಆಗಾಗ ಜೋಡಿಸುತ್ತಿದ್ದರು. ಆದರೆ ಅದು ಹೆಚ್ಚಿನ ಅವಧಿಯಲ್ಲಿ ಬಿದ್ದು ಹೋಗಿರುತ್ತಿದ್ದುದೇ ಜಾಸ್ತಿ. ಆದ್ದರಿಂದ ಆ ಸಂಕದ ಮೇಲಿನ ನಡಿಗೆ ಎಂದರೆ, ಮಕ್ಕಳಿಗಂತೂ ಹಗ್ಗದ ಮೇಲಿನ ನಡಿಗೆ. ಸಣ್ಣ ಮಕ್ಕಳು ಅದನ್ನು ದಾಟುವಾಗ ದೊಡ್ಡ ಮಕ್ಕಳು ಕೈ ಹಿಡಿದುಕೊಳ್ಳಲೇಬೇಕಿತ್ತು.

ಮಳೆಗಾಲದಲ್ಲಿ ಆ ತೋಡಿನಲ್ಲಿ ತುಂಬಾ ನೀರು ಇರುತ್ತಿದ್ದುದರಿಂದ, ಯಾವುದೇ ಕಾರಣಕ್ಕೂ ಆ ದಾರಿಯಲ್ಲಿ ಹೋಗಬಾರದೆಂದು ಮನೆಯವರು ತಾಕೀತು ಮಾಡುತ್ತಿದ್ದರು. ಚಳಿಗಾಲ ಮತ್ತು ಬೇಸಗೆಯಲ್ಲಿ ಒಮ್ಮೊಮ್ಮೆ ಹೋಗುತ್ತಿದ್ದೆವು; ಸಣ್ಣಗೆ ಅಲುಗಾಡುತ್ತಿದ್ದ ಆ ಹೆರಬೈಲು ಸಂಕದ ಮೇಲಿನ ನಡಿಗೆಯನ್ನು ನೆನಪಿಸಿಕೊಂಡರೆ ಈಗಲೂ ಅಂಗೈ ಹಿಂದಿನ ರೋಮ ನೆಟ್ಟಗೆ ನಿಲ್ಲುತ್ತದೆ - ಸಂಕದ ಮೇಲಿನ ನಡಿಗೆಯ ರೋಚಕತೆಯನ್ನು ಮತ್ತೊಮ್ಮೆ ಅನುಭವಿಸಿದಂತಾಗುತ್ತದೆ.

ಪ್ರಸ್ತುತ
ವಿರೇಶ್ ಎಸ್ ಅಬ್ಬಿಗೇರಿ

ವಲಸೆ ಬಂದು ಹಾಳು ಮಾಡುವುದೇಕೆ ಶಿವಾ?

ಲೋಕಸಭಾ ಚುನಾವಣೆ ಇತ್ತೀಚೆಗಷ್ಟೇ ಮುಗಿದಿದೆ. ರಾಜ್ಯದ ಮಟ್ಟಿಗೆ ತೆಗೆದುಕೊಂಡರೆ ಬಿಜೆಪಿ-ಜೆಡಿಎಸ್ ಮೈತ್ರಿ ಅಭೂತಪೂರ್ವ ಯಶಸ್ಸು ಪಡೆದಿದ್ದು ಕನಿಷ್ಠ ಎರಡಂಕಿಯನ್ನಾದರೂ ಮುಟ್ಟಬೇಕೆಂಬ ಕಾಂಗ್ರೆಸ್ ಕನಸಿಗೆ ಕೊಳ್ಳಿಯಿಟ್ಟಂತಾಗಿದೆ. ಮೈತ್ರಿಕೂಟ 19 ಸೀಟುಗಳನ್ನು ಪಡೆದರೆ ಕಾಂಗ್ರೆಸ್ 9 ಸ್ಥಾನಗಳಿಗೆ ತೃಪ್ತಿಪಡಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ನ ಎಲ್ಲ ಅಭ್ಯರ್ಥಿಗಳೂ ಸೋತಾಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ.ಸುರೇಶ ಅವರು ಮಾತ್ರ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಗೆದ್ದ ಪಕ್ಷದ ಮಾನ ಉಳಿಸಿದ್ದರು. ಆದರೆ ದುರಾದೃಷ್ಟವೆಂಬಂತೆ ಈ ಬಾರಿ ತಮ್ಮ ಪಕ್ಷದ 9 ಜನ ಗೆದ್ದು ಸಂಸದರಾಗಿದ್ದು ಸುರೇಶ್ ಅವರಿಗೆ ಮಾತ್ರ ಅದೃಷ್ಟ ಕೈಕೊಟ್ಟಿತು. ಸುರೇಶ ಅವರು ಜನರ ಡಾಕ್ಟರ್ ಎಂದೇ ಖ್ಯಾತರಾಗಿದ್ದ ಜಯದೇವ ಹೃದ್ರೋಗದ ನಿರ್ದೇಶಕರಾಗಿದ್ದ ಡಾ ಮಂಜುನಾಥ್ ರವರ ವಿರುದ್ಧ ಎರಡೂವರೆ ಲಕ್ಷಕ್ಕೂ ಹೆಚ್ಚು ಅಂತರಗಳಿಂದ ಸೋತರು. ಆದರೆ ಈ ಸೋಲು ಕಾಂಗ್ರೆಸ್ ಪಕ್ಷಕ್ಕೆ ಅದರಲ್ಲೂ ಕನಕಪುರದ ಸಹೋದರರಿಗೆ ದಿಗ್ಭ್ರಮೆ ಉಂಟುಮಾಡಿದೆ. ಸುರೇಶ್ ಅವರಂತೂ ಈ ಸೋಲಿನಿಂದ ಇನ್ನೂ ಹೊರಬಂದಿಲ್ಲ. ಹಾಗೆ ನೋಡಿದರೆ ಮೈತ್ರಿಯಾಗಿದ್ದರಿಂದ ಮತ್ತು ಕುಮಾರಸ್ವಾಮಿಯವರ ಚಾಣಾಕ್ಷ ನಡೆಯಿಂದ ಸುರೇಶ ಅವರಿಗೆ ಸೋಲುಂಟಾಗಿದ್ದು, ಒಕ್ಕಲಿಗ ಸಮುದಾಯದ ನಾಯಕತ್ವಕ್ಕಾಗಿ ಎಚ್. ಡಿ. ಕುಮಾರಸ್ವಾಮಿ ಮತ್ತು ಡಿ. ಕೆ.ಶಿವಕುಮಾರ್ ನಡುವೆ ನಡೆಯುತ್ತಿರುವ ಗುದ್ದಾಟ ಈಗ ಮತ್ತೊಂದು ಮಜಲಿಗೆ ಹೊರಳಿದೆ. ಚನ್ನಪಟ್ಟಣದಿಂದ ಗೆದ್ದು ಶಾಸಕರಾಗಿದ್ದ ಕುಮಾರಸ್ವಾಮಿಯವರು ಈಗ ಸಂಸದರು ಮಾತ್ರವಲ್ಲದೆ ಕೇಂದ್ರ ಸರಕಾರದ ಕ್ಯಾಬಿನೆಟ್ ಸಚಿವರೂ ಕೂಡ ಆದರು. ಹಾಗಾಗಿ ಈಗ ಅವರಿಂದ ತೆರವಾದ ಚನ್ನಪಟ್ಟಣ ಕ್ಷೇತ್ರದಿಂದ ಮುಂದೆ ಯಾರು ಸ್ಪರ್ಧಿಸಲಿದ್ದಾರೆ ಎನ್ನುವುದು ಕುತೂಹಲಕ್ಕ ಕಾರಣವಾಗಿದೆ. ಬಿಜೆಪಿಯೇನೋ ಮೈತ್ರಿ ಮರ್ಪಾಲನೆಗಾಗಿ ಅದು ಜೆಡಿಎಸ್ ಸೀಟಾಗಿರುವುದರಿಂದ ಅವರಿಗೆ ಬಿಟ್ಟು ಕೊಡುವುದಾಗಿ ಹೇಳುತ್ತಿದೆ. ಒಂದೊಮ್ಮೆ ಸಿ. ಪಿ. ಯೋಗೀಶ್ವರ್ ಅವರೇ ಜೆಡಿಎಸ್ ಚಿಹ್ನೆಯಿಂದ ನಿಂತರೂ ಅಚ್ಚರಿ ಪಡಬೇಕಾಗಿಲ್ಲ.

ಕಾಂಗ್ರೆಸ್‌ನಿಂದ ಲೋಕಸಭೆಯಲ್ಲಿ ಸೋತಿರುವ ಸುರೇಶ್ ಅವರು ನಿಲ್ಲಬಹುದೆಂದು ಅಂದಾಜಿಸಲಾಗುತ್ತಿತ್ತು. ಆದರೆ ಈಗ ಓಡಾಡುತ್ತಿರುವ ತಾಜಾ ಸುದ್ದಿಯ ಪ್ರಕಾರ ಸುರೇಶ್ ಅವರಿಗೆ ತಮ್ಮ ಕ್ಷೇತ್ರವಾದ ಕನಕಪುರವನ್ನು ತ್ಯಾಗ (?) ಮಾಡಿ ಡಿಕೆಶಿಯವರೇ ಚನ್ನಪಟ್ಟಣಕ್ಕೆ ಬಂದು ನಿಲ್ಲಲಿದ್ದಾರೆ ಎಂದು ಹೇಳಲಾಗಿದೆ. ಹೌದು. ಈಗ ತಾನೇ ಚುನಾವಣೆಯಲ್ಲಿ ಸೋತಿರುವ ಸುರೇಶ್ ಅವರಿಗೆ ಮತ್ತೆ ಸೋಲುಂಟಾದರೆ ಅವರ ರಾಜಕೀಯ ಜೀವನಕ್ಕೆ ಪೆಟ್ಟು ಬೀಳಲಿದೆ ಎಂದರಿತಿರುವ ಡಿಕೆಶಿ ಅವರು ತಾವೇ ರಿಸ್ಕ್ ತೆಗೆದುಕೊಳ್ಳಲಿದ್ದಾರೆ ಎನ್ನಲಾಗಿದೆ. ಅಲ್ಲದೆ ಒಂದೊಮ್ಮೆ ಅವರು ನಿಂತರೆ ಉಪಮುಖ್ಯ ಮಂತ್ರಿ ಎನ್ನುವ ಕಾರಣಕ್ಕೆ ಗೆಲ್ಲುವ ಸಾಧ್ಯತೆಗಳು ಹೆಚ್ಚಾಗಿವೆ. ಆದರೆ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಮತ್ತು ಬಿಜೆಪಿ ವೋಟ್ ಬ್ಯಾಂಕ್ ಒಂದಾಗುವುದರಿಂದ ಸುರೇಶ್ ಅವರ ಗೆಲುವಿಗೆ ತೊಡಕಾಗ ಬಹುದೆಂದು ಅಂದಾಜಿಸಲಾಗಿದೆ.

ಅದೂ ಅಲ್ಲದೆ ಒಂದೊಮ್ಮೆ ಸೋತರೆ ತಮ್ಮ ರಾಜಕೀಯ ಭವಿಷ್ಯಕ್ಕೂ ಊಹಿಸಿಕೊಳ್ಳಲಾಗದ ಪೆಟ್ಟು ಬೀಳುತ್ತದೆ ಎನ್ನುವುದನ್ನು ಶಿವಕುಮಾರ್ ಅವರೂ ಅರಿಯದ ವಿಷಯವೇನಲ್ಲ. ಆದರೆ ಇಂತಹ ರಿಸ್ಕ್ ತೆಗೆದುಕೊಳ್ಳದೇ ರಾಜಕೀಯದಲ್ಲಿ ಎತ್ತರಕ್ಕೆ ಬೆಳೆಯಲು ಸಾಧ್ಯವಿಲ್ಲ ಎನ್ನುವ ಅಂಶವನ್ನು ಅವರೂ ಅರ್ಥ ಮಾಡಿಕೊಂಡಿದ್ದಾರೆ. ಹಾಗಾಗಿ ಶತಾಯ ಗತಾಯ ಗೆಲ್ಲಲು ಬೇಕಾಗಿರುವ ಎಲ್ಲ ತಂತ್ರಗಳು, ಕೆಲಸಗಳನ್ನು ಅವರು ಮಾಡಲಿದ್ದಾರೆ ಎನ್ನುವುದು ಅವರಿಗೆ ತಿಳಿದಿದೆ.

ಇದೆಲ್ಲದರ ಮಧ್ಯೆ ಸಾಮಾನ್ಯ ನಾಗರಿಕನಿಗೆ ಅನಿಸುವುದೇನು ಎಂದು ತಿಳಿದುಕೊಳ್ಳುವ ಗೋಜಿಗೆ ಯಾರೂ ಹೋದಂತಿಲ್ಲ. ಈಗಾಗಲೇ ಉಪಮುಖ್ಯಮಂತ್ರಿಯೂ ಆಗಿರುವ ಶಿವಕುಮಾರ್ ಅವರು ತಮ್ಮ ಕುಟುಂಬದ ರಾಜಕೀಯ ಲಾಭಕ್ಕಾಗಿ ಇದ್ದ ಸ್ಥಾನವನ್ನು ತ್ಯಜಿಸಿ ಇನ್ನೊಂದು ಕ್ಷೇತ್ರಕ್ಕೆ ವಲಸೆ ಹೋಗುವುದು ಶುದ್ಧ ಕುಟುಂಬದ ಸ್ವಾರ್ಥ. ಆದರೆ ಜನರು ಮಾತ್ರ ನಾವು ನಿಮ್ಮನ್ನು ಚುನಾಯಿಸಿದ್ದೇವೆ. ಇನ್ನೂ ಅವಧಿ ಇರುವಾಗಲೇ ನಮ್ಮ ಪ್ರತಿನಿಧಿಯಾದ ನೀವು ಹೀಗೆ ಕ್ಷೇತ್ರ ತೊರೆದು ಹೋಗುವುದು ಯಾಕೆಂದು ಯಾರೂ ಪ್ರಶ್ನಿಸುವುದಿಲ್ಲ, ಬದಲಿಗೆ ಗಮನಿಸಿ ನೋಡಿ, ಬದಲಾಗಿ ಅವರು ತಮಗೊಂದು ರೋಚಕ ಚುನಾವಣಾ ಹಣಾಹಣಿ ನೋಡಲು ಸಿಗುತ್ತದೆ ಎಂದು ಜಾತಕ ಪಕ್ಷಿಯಂತೆ ಕಾಯುತ್ತ ಕೂಡುತ್ತಾರೆ. ಇಂಥವರ ಮಧ್ಯೆ ರಾಜ್ಯ ಮುಂದಕ್ಕೆ ಹೋಗಬೇಕೆಂದರೆ ಎಲ್ಲಿಂದ ಹೋಗಬೇಕು.

(ಲೇಖಕರು: ಹವ್ಯಾಸಿ ಬರಹಗಾರರು)

ಭಾರತದ ಯೋಗಕ್ಕೀಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುಯೋಗ

ಯೋಗಾಕ್ಷರ
ಜಯಶ್ರೀ ಕಾಲ್ಕುಂದ್ರಿ
vveditoped@gmail.com

ವಿಶ್ವಸಂಸ್ಥೆಯು ಜೂನ್ 21ರಂದು ಅಂತಾರಾಷ್ಟ್ರೀಯ ಯೋಗದಿನವನ್ನಾಗಿ ಆಚರಿಸಲು ಘೋಷಣೆ ಮಾಡಿದ ದಿನದಿಂದ ಭಾರತ ಮಾತ್ರವಲ್ಲ, ವಿಶ್ವದೆಲ್ಲೆಡೆ ಯೋಗದ ಕಂಪು ಪಸರಿಸಿದೆ ವಿಶ್ವದ ಪ್ರಮುಖ ನಗರಗಳಲ್ಲಿ ಯೋಗ ಪ್ರದರ್ಶನಗಳನ್ನು ನಡೆಸಲಾಗುತ್ತದೆ. ಇಷ್ಟು ಮಾತ್ರವಲ್ಲ, ಯೋಗದಿಂದ ಜನತೆಯನ್ನು ನಿರೋಗಿಗಳಾಗುವ ದಿಶೆಯಲ್ಲಿ, ಕೇಂದ್ರದ ಆಯುಷ್ ಮಂತ್ರಾಲಯವು ಕಾರ್ಯೋನ್ಮುಖವಾಗಿದೆ. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿಗಳಾದ ಅಂಟೋನಿಯೋ ಗುಟರಸ್ ಅವರು, ಭಿಯೋಗ ಜನರನ್ನು ಒಗ್ಗೂಡಿಸುತ್ತದೆ. ದೇಹ ಮತ್ತು ಮನಸ್ಸನ್ನು ಬೆಸೆಯುತ್ತದೆ. ಶಿಸ್ತು ಮತ್ತು ಶಾಂತಿಯನ್ನು ಕಾಪಾಡಿಕೊಳ್ಳಲು, ಮಾರ್ಗದರ್ಶಕವಾಗಿದೆ. ಮಾನವೀಯತೆ ಮತ್ತು ಪ್ರಕೃತಿಯನ್ನು ಸಂಗಮಿಸುವ ಯೋಗ, ಬಲ, ಸೌಹಾರ್ದ ಮತ್ತು ಶಾಂತಿಗೆ ಮೂಲವಾಗಿದೆ. ವಿಶ್ವ ವಿಘಟನೆ ಯಾಗುತ್ತಿರುವ ಈ ಸಂದರ್ಭಕ್ಕೆ, ಪ್ರಾಚೀನ ಅಭ್ಯಾಸವಾದ ಯೋಗ ಮದ್ದಾಗಿದೆ. ಎಂದು ಅಭಿಪ್ರಾಯ ಪಡುತ್ತಾರೆ. ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಭಾರತೀಯ ಮೂಲದ ಯೋಗ ಜನ ಪ್ರಿಯವಾಗಿದೆ. ಯೋಗದ ಮಹತ್ವ, ವೇದ, ಉಪನಿಷತ್ತು, ಭಗವದ್ಗೀತೆ ಹೀಗೆ ಇನ್ನೂ ಅನೇಕ ಧಾರ್ಮಿಕ ಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಐಹಿಕ ಕಾಮನೆಗಳಿಂದ ಮನಸ್ಸನ್ನು ವಿಮೋಚನೆಗೊಳಿಸುವ ಯೋಗವು, ಪ್ರಪಂಚಕ್ಕೆ ಭಾರತದ ಕೊಡುಗೆಯೆಂಬುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ತರುವಂತಹ ವಿಷಯ. ಪತಂಜಲಿ ಮುನಿಗಳು ಯೋಗದ ಪಿತಾಮಹರೆನಿಸಿದ್ದಾರೆ. ಸಂಸ್ಕೃತ ಪದವಾದ ಯೋಗದ ಮೂಲ ಪದ ಯುಜ ಎನ್ನಲಾಗಿದೆ. ಪತಂಜಲಿ ಮುನಿಗಳು, ಯೋಗ ಸಂಸ್ಥಾಪಕರು ಮಾತ್ರವಲ್ಲ, ಆಧ್ಯಾತ್ಮಿಕ ಚಿಂತಕರಾಗಿದ್ದರು. ಪತಂಜಲಿ ಯೋಗ ಸೂತ್ರ, ಹಿಂದೂ ತತ್ವಶಾಸ್ತ್ರದ ಪರಮ ಪವಿತ್ರ ಗ್ರಂಥವೆಂದೇ ಪರಿಗಣಿಸಲಾಗುತ್ತದೆ.

2014ರಲ್ಲಿ, ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಂದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ, ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿವಸವೆಂದು ಘೋಷಿಸಬೇಕೆಂಬ ಪ್ರಸ್ತಾಪಕ್ಕೆ ಮನ್ನಣೆ ದೊರೆತು, ಭಾರತದ ಯೋಗದ ಹಿರಿಮೆಯ ಮುಕುಟಕ್ಕೆ ಗರಿ ಮೂಡಿರುವದು ನಿಜಕ್ಕೂ ಪ್ರಶಂಶಾರ್ಹ. ಜೂನ್ 21ರಂದು ಅತ್ಯಂತ ಹೆಚ್ಚು ಸಮಯ ಹಗಲಿರುವ ದಿನವೂ ಹೌದು. ಆರೋಗ್ಯಪೂರ್ಣ ಬದುಕು ಯಾರಿಗೆ ಬೇಡ? ಇಂದಿನ ನಿರಂತರ ಬದಲಾವಣೆಯ ವೇಗ ದಲ್ಲಿ, ನವೀನತೆ, ವೈವಿಧ್ಯ ಮತ್ತು ಐಹಿಕ ಸುಖಗಳನ್ನು ಅರಸುತ್ತಾ ಬರುತ್ತಿರುವ ಮಾನವನನ್ನು ಅನೇಕ ರೀತಿಯ ಚಿಂತೆ, ಒತ್ತಡಗಳು ಸುತ್ತುವರಿದಿವೆ. ಅಧುನಿಕ ಜೀವನಶೈಲಿ, ಮಾನವನನ್ನು ಅನಾರೋಗ್ಯ ಮಾತ್ರವಲ್ಲ, ಕಷ್ಟ-ಕಾರ್ಪಣ್ಯಗಳ ಸಮುದ್ರದಲ್ಲಿ ಓಲಾಡುವಂತೆ ಮಾಡಿದೆ ಎನ್ನಬಹುದು. ಒತ್ತಡಗಳಿಂದ ಮಾನವನ ಮನಸ್ಸು, ದೇಹಗಳೆರಡೂ ಕುಸಿಯು ತ್ತಿವೆ. ನಮ್ಮ ಪೂರ್ವಜರು, ಸ್ವಸ್ಥ ಮನಸ್ಸು, ದೇಹಾರೋಗ್ಯ ಹಾಗೂ ಆಧ್ಯಾತ್ಮಿಕ ಸಾಧನೆಗಾಗಿ ಸಂಶೋಧಿಸಿದ ಯೋಗಶಾಸ್ತ್ರ ದಲ್ಲಿ ಬಳಲಿ ಬೆಂಡಾದ ಮಾನವನ ನೋವು, ಅಶಾಂತಿಗಳಿಗೂ ಸಂಪೂರ್ಣ ಪರಿಹಾರವಿದೆ, ನುರಿತ ವೈದ್ಯರಿಂದಲೂ ಗುಣ ಪಡಿಸಲಾಗದ ಶಾರೀರಿಕ ಮತ್ತು ಮಾನಸಿಕ ವ್ಯಾಧಿಗಳಿಂದ ಬಳಲುತ್ತಿರುವ ಜನಸಾಮಾನ್ಯರು, ಈ ಸಮಸ್ಯೆಯ ಪರಿಹಾರ ಕ್ಕಾಗಿ ಯೋಗಾಭ್ಯಾಸದ ಮೊರೆ ಹೋಗುತ್ತಿದ್ದಾರೆ. ಲಿಂಗ, ವಯಸ್ಸು, ಜಾತಿ ಮತ್ತು ಧರ್ಮಗಳನ್ನು ಮೀರಿ ಜನತೆ ಯೋಗದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ತಪೋಬಲದಂತೆ ಸತತ ಯೋಗಾಭ್ಯಾಸದಿಂದಲೂ ಒಬ್ಬ ವ್ಯಕ್ತಿಯು ಅತ್ಯಂತ ಸೂಕ್ಷ್ಮರೂಪವನ್ನು ಪಡೆದು ಅದೃಶ್ಯನಾಗಬಹುದಾಂತಹ ಶಕ್ತಿಯನ್ನು ಪಡೆಯಬಹುದು ಎನ್ನಲಾಗಿದೆ.

ನಾವು ಸೇವಿಸುವ ಆಹಾರ, ಜೀವಕೋಶಗಳನ್ನು ತಲುಪಿ, ದೇಹದ ಅಂಗಗಳು, ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿರುವುದೇ ಆರೋಗ್ಯವೆಂಬ ಭಾವನೆ ಜನಸಾಮಾನ್ಯರಲ್ಲಿ ಮನೆಮಾಡಿದೆ. ಶಾರೀರಿಕ ಆರೋಗ್ಯದ ಜೊತೆಜೊತೆಗೆ, ಉತ್ತಮ ಮಾನಸಿಕ ಸ್ಥಿತಿಯೂ ಪೂರಕವಾಗಿದ್ದಾಗ ಮಾತ್ರ ಬದುಕು ಸುಗಮವಾಗಿ ಸಾಗಬಲ್ಲದು. ಯೋಗದ ದೃಷ್ಟಿಯಲ್ಲಿ, ಪ್ರತಿ ವ್ಯಕ್ತಿ, ಶಾರೀರಿಕ-ಮಾನಸಿಕ ಆರೋಗ್ಯಗಳ ಜೊತೆಜೊತೆಗೆ ಆಧ್ಯಾತ್ಮಿಕವಾಗಿಯೂ ಆರೋಗ್ಯವಾಗಿದ್ದರೆ ಮಾತ್ರ ಆರೋಗ್ಯ ಪೂರ್ಣನೆನಿಸಿಕೊಳ್ಳುತ್ತಾನೆ ಎನ್ನಲಾಗಿದೆ.

ರೋಗ ನಿವಾರಣೆಯಲ್ಲಿ, ಯೋಗದ ಪಾತ್ರ ವಿಶಿಷ್ಟವೆನಿಸಿದೆ. ವರ್ತಮಾನದ ವ್ಯಾಧಿಗಳು ಮಾತ್ರವಲ್ಲ, ಮುಂದೆ ಕಾಡಲಿರುವ ರೋಗಗಳನ್ನು ನಿಗ್ರಹಿಸುವ ಮಾಂತ್ರಿಕ ಶಕ್ತಿ ಯೋಗಕ್ಕಿದೆ. ಯೋಗವೆಂಬುದು ರೋಗ ಸಂಸ್ಕಾರವನ್ನೇ ಕಿತ್ತು ಬಿಸುಡುವಷ್ಟು ಪ್ರಬಲ ಅಸ್ತ್ರವೆನಿಸಿದೆ. ಯೋಗದ ಒಂದು ಭಾಗವೇ ಯೋಗಾಸನವೆನ್ನಬಹುದು. ಮನಸ್ಸಿನಿಂದ ಯಾವುದೇ ಸಾಧನೆ ಮಾಡಬೇಕೆಂದರೆ ಮೊದಲು ದೇಹವನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುವದಗತ್ಯ. ಯೋಗವೆಂದರೆ ಧ್ಯಾನವೆಂದು ಸಂತ ವ್ಯಾಸರು ನುಡಿಯುತ್ತಾರೆ. ದೀರ್ಘ ಧ್ಯಾನ ಮುದ್ರೆಗಳಿಂದ ಮನಸ್ಸಿಗೆ ಅನಿರ್ವಚನೀಯ ಶಾಂತಿ ದೊರೆತು, ಆತ್ಮ ಮತ್ತು ಪರಮಾತ್ಮಗಳೆರಡೂ ಒಂದೇ ಎನಿಸುತ್ತವೆ. ಅಜ್ಞಾನ. ಐಭೋಗದ ಲಾಲಸೆ, ಕಳವಳ, ಆತಂಕಗಳು ಮರೆಯಾಗಿ ನೆಮ್ಮದಿಯ ಭಾವ ಮೂಡುತ್ತದೆ. ಧ್ಯಾನವನ್ನು ದಿನದಲ್ಲಿ ಒಂದು ಬಾರಿ ಅಥವಾ ಎರಡು ಬಾರಿ(ಸುಮಾರು 20 ನಿಮಿಷಗಳ ಕಾಲ) ಮಾಡುವದರಿಂದ, ಹಲವಾರು ಪ್ರಯೋಜನಗಳಿವೆ. ಧ್ಯಾನದಿಂದ ಕ್ರಿಯಾಶೀಲತೆ, ಏಕಾಗ್ರತೆ, ಚುರುಕುತನ, ನೆನಪಿನ ಶಕ್ತಿ ಮತ್ತು ದೈಹಿಕ ಶಕ್ತಿಗಳನ್ನು ಹೆಚ್ಚಿಸಿಕೊಳ್ಳಬಹುದು.

ಅತ್ಯಂತ ಆತಂಕಭರಿತ ಸನ್ನಿವೇಶಗಳು ಎದುರಾದಾಗ, ಧ್ಯಾನದ ಮೂಲಕ ಮನಸ್ಸಿನಲ್ಲಿ ಮೂಡುವ ಇತ್ಯಾತ್ಮಕ ಭಾವನೆಗಳನ್ನು ನಿರ್ವಹಣೆ ಮಾಡಲು ಸಾಧ್ಯ. ಇಷ್ಟು ಮಾತ್ರವಲ್ಲ, ದೀರ್ಘಕಾಲದಿಂದ ಕಾಡುವ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳೆನಿಸಿದ ಮೈಗ್ರೇನ್, ಖಿನ್ನತೆ, ಮಾದಕದ್ರವ್ಯ ವ್ಯಸನ, ನಿದ್ರಾರಾಹಿತ್ಯಗಳನ್ನು ನಿವಾರಿಸಿಕೊಳ್ಳಬಹುದು. ಯೋಗವೆಂದರೆ ಯೋಗವೂ ಹೌದು, ಅದೇ ರೀತಿ ಪ್ರಾಣಾಯಾಮವೂ ಹೌದು. ನಮ್ಮ ಉಸಿರಿನಲ್ಲಿ ಪ್ರಾಣ ಶಕ್ತಿ ಹರಿಯುತ್ತದೆ. ಈ ಪ್ರಾಣ ಶಕ್ತಿಯನ್ನು ವ್ಯವಸ್ಥಿತವಾಗಿ ನಿಯಂತ್ರಿಸುವದರಿಂದ ದೇಹದಲ್ಲಿ ಹರಿಯುವ ಚೈತನ್ಯವನ್ನೂ ಸಹ ಕ್ರಮಬದ್ಧಗೊಳಿಸಬಹುದು. ಯೋಗವು ಎಂಟು ಅಂಗಗಳನ್ನು ಹೊಂದಿದೆ. ಅದೇ ಅಷ್ಟಾಂಗ ಯೋಗ. ಪ್ರಾಚೀನ ಋಷಿ- ಮುನಿಗಳು ಪ್ರತಿಪಾದಿಸಿದ ಎಂಟು ಯೋಗ ಸೂತ್ರಗಳೆಂದರೆ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಯಮಸೂತ್ರದಲ್ಲಿ, ಪಾಲಿಸ ಬೇಕಾದ ನಿಯಮಗಳೆಂದರೆ, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳು. ಯಾವುದೇ ಕಾಲದಲ್ಲಿ ಯಾರಿಗೂ ನೋವುಂಟು ಮಾಡದಿರುವದು ಅಹಿಂಸೆ, ಕೆಲಸ-ಕಾರ್ಯಗಳಲ್ಲಿ ಯಥಾರ್ಥತೆ ತೋರುವದು ಸತ್ಯ, ಧರ್ಮರಹಿತ ಹಣವನ್ನು ಗಳಿಸದಿರುವದು ಅಸ್ತೇಯ, ಧರ್ಮಾನುಸಾರ ವಿವಾಹವಾದ ಸಂಗಾತಿಗೆ ನಿಷ್ಠೆಯಿಂದಿರು ವದು ಬ್ರಹ್ಮಚರ್ಯ ಮತ್ತು ಅಗತ್ಯಕ್ಕಿಂತಲೂ ಹೆಚ್ಚಾಗಿ ಏನನ್ನೂ ಸ್ವೀಕರಿಸದಿರುವದು. ಅಪರಿಗ್ರಹಗಳು ಯಮ ನಿಯಮ ಗಳೆನಿಸಿವೆ. ಪತಂಜಲಿ ಮುನಿಗಳ ಉಪದೇಶಾಮೃತದಂತೆ, ಈ ಐದೂ ನಿಯಮಗಳನ್ನು ಪರಿಪಾಲಿಸಿದ ಮನುಜ ದೇವಮಾನ ವನೆನುಸುತ್ತಾನೆ. ಮಾನವನ ದೇಹವೇ ದೇಗುಲವೆನಿಸಿದೆ. ಇದರಲ್ಲಿ ಪ್ರಾಣ ಸ್ವರೂಪನಾದ ಭಗವಂತ ನೆಲೆಸಿರುವದರಿಂದ. ಈ ದೇಹವನ್ನು ಶುಚಿಗೊಳಿಸಿಕೊಳ್ಳುವುದರ ಜೊತೆಗೆ ಋಣಾತ್ಮಕ ಭಾವನೆಗಳನ್ನು ಹೊರತಳ್ಳಬೇಕು. ಮನಸ್ಸಿನಿಂದ ಸಾಧನೆ ಮಾಡಲು ದೇಹದ ಆರೋಗ್ಯವೂ ಅತಿ ಮುಖ್ಯ. ದೇಹವನ್ನು ವಿವಿಧ ಭಂಗಿಗಳಲ್ಲಿ ತಿರುಗಿಸಿ, ಯೋಗಾಸನ ಮಾಡುವುದರಿಂದ ದೇಹದಲ್ಲಿ, ರಕ್ತದ ಪರಿಚಲನೆ ಸರಿಯಾಗುವುದರೊಂದಿಗೆ, ವಾತ-ಶೀತ-ಪಿತ್ತಗಳು ಸಮಸ್ಥಿತಿಯಲ್ಲಿರುತ್ತವೆ. ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಗಳು ಸಮತೋಲನದಲ್ಲಿರುತ್ತವೆ. ಈ ನಿಯಮಗಳ ಪಾಲನೆಯೇ ಮಹಾವ್ರತ ಎನಿಸಿದೆ. ಪ್ರಾಥಮಿಕ ವಾಗಿ ಗುರುಮುಖದಿಂದಲೇ ಯೋಗಾಸನಗಳನ್ನು ಕಲಿಯು ವದು ಸೂಕ್ತ, ಅಭ್ಯಾಸದಿಂದ ಆಸನ ಸ್ಥಿರವಾಗಿರಬೇಕು ಮತ್ತು ನೋವುರಹಿತವಾಗಿರಬೇಕು, ಎಲ್ಲಾ ಆಸನಗಳನ್ನು ಅಭ್ಯಸಿ ಸುತ್ತಾ ಹೋದರೆ, ಆಧ್ಯಾತ್ಮ ವಿದ್ಯೆ ಗೋಚರವಾಗುತ್ತದೆ. ಭಗವಂತನಲ್ಲಿ ಶ್ರದ್ಧೆ-ಭಕ್ತಿಗಳು ಮೂಡಿ ಮನಸ್ಸು ಸದಾ ಪ್ರಸನ್ನ ಚಿತ್ತವಾಗಿರುತ್ತದೆ. ಪತಂಜಲಿ ಮುನಿಗಳ ಪ್ರಕಾರ, ಯೋಗಾಸ ನವೆಂದರೆ, ಯೋಗಾಭ್ಯಾಸಿಯು ಧೃಡ ಮತ್ತು ಆರಾಮ ಸ್ಥಿತಿಯಲ್ಲಿ ಕುಳಿತುಕೊಳ್ಳುವ ಭಂಗಿ ಎಂದು ವ್ಯಾಖ್ಯಾನಿಸಿದ್ದಾರೆ. ಯೋಗದ ವಿವಿಧ ಆಸನಗಳನ್ನು ದೇಹದ ಭಾಗಗಳಿಗೆ ವ್ಯಾಯಾಮವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಜನಪ್ರಿಯ ಯೋಗಾಸನಗಳೆಂದರೆ, ಸೂರ್ಯ ನಮಸ್ಕಾರ, ಭುಜಂಗಾಸನ, ವೀರಭದ್ರಾಸನ, ಶೀರ್ಷಾಸನ, ಮತ್ತು ತಾಡಾಸನಗಳು. ಯೋಗಾಸನಗಳನ್ನು ನಿರಂತರ ಮಾಡುವದರಿಂದ ರಕ್ತ ಪರಿಚಲನೆ ಉತ್ತಮವಾಗಿ, ಸ್ನಾಯು ಬಲ ಸುಧಾರಿಸು ವುದರೊಂದಿಗೆ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ಉತ್ತಮ ನಿದ್ರೆ ಬರುತ್ತದೆ.

ಯೋಗಾಭ್ಯಾಸಗಳಿಗೂ ಮತ್ತು ವ್ಯಾಯಾಮಗಳಿಗೂ ಹಲವಾರು ಅಂತರಗಳಿವೆ. ಯೋಗಾಭ್ಯಾಸಗಳನ್ನು ಮಾಡುವಾಗ ಮಿತವಾದ ಶಕ್ತಿ ವ್ಯಯವಾದರೆ, ವ್ಯಾಯಾಮಗಳನ್ನು ಮಾಡುವಾಗ ಹೆಚ್ಚಿನ ಶಕ್ತಿಯ ವ್ಯಯವಾಗುತ್ತದೆ. ಯೋಗಾಭ್ಯಾಸಗಳು ಆಯಾಸವನ್ನುಂಟು ಮಾಡದೆ, ದೇಹವನ್ನು ಹಗುರವಾಗಿಸುತ್ತದೆ. ಇದಕ್ಕೆ ವಿಪರೀತವಾಗಿ ವ್ಯಾಯಾಮಗಳು, ಆಯಾಸದ ಜೊತೆಗೆ ದೈಹಿಕ ಅಸ್ವಸ್ಥತೆಯನ್ನುಂಟು ಮಾಡು ತ್ತವೆ. ಯೋಗಾಭ್ಯಾಸಗಳಿಗೆ ವಯಸ್ಸು ತಡೆಗೋಡೆಯಾಗ ಲಾರದು. ವಯಸ್ಸು ಹೆಚ್ಚಾದಂತೆ ವ್ಯಾಯಾಮಗಳನ್ನು ಮಾಡುವುದು ಕಷ್ಟವೆನಿಸುತ್ತದೆ. ಯೋಗಾಸನಗಳು, ಶಾರೀರಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯ ಸುಧಾರಣೆಯ ಗುರಿ ಹೊಂದಿದರೆ, ವ್ಯಾಯಾಮಗಳು ಶಾರೀರಿಕ ಮತ್ತು ಮಾನಸಿಕ ಆರೋಗ್ಯ ಸುಧಾರಣೆಯ ಗುರಿ ಹೊಂದಿವೆ.

ಇಂದಿನ ದಿನಗಳಲ್ಲಿ ವಿಶ್ವದಾದ್ಯಂತ ಸುಮಾರು ಐದು ಕೋಟಿಗೂ ಮಿಕ್ಕು ಜನರು ಯೋಗಾಭ್ಯಾಸ ಮಾಡುತ್ತಿದ್ದಾರೆ. ಗಮನಾರ್ಹ ವಿಷಯವೆಂದರೆ, ಅಮೆರಿಕದಲ್ಲಿ ಯೋಗ ವಾಣಿಜ್ಯ ಉದ್ಯಮವಾಗಿದೆ. ಯೋಗ ಸಾಧನೆಗೆ ಪೂರಕವಾಗಿರುವ ಯೋಗ ಪ್ಯಾಂಟ್ಸ್, ಯೋಗ ಮ್ಯಾಟ್, ಯೋಗ ಕ್ಲಬ್‌ಗಳು ಹೀಗೆ ಎಲ್ಲವೂ ವಾಣಿಜ್ಯೀಕರಣಗೊಂಡಿವೆ.

ಅಂತರಂಗದ ಕನ್ನಡಿಯಾದ ಯೋಗ ಹಿಂದೂ ಧರ್ಮವನ್ನು ಪ್ರಚುರ ಪಡಿಸುತ್ತದೆ ಎಂಬ ಅಪಾದನೆ, ಆಕ್ಷೇಪ, ಆರೋಪಗಳು ತೇಲಿ ಬರುತ್ತಿರುವುದು ವಿಪರ್ಯಾಸದ ಸಂಗತಿ. ಯೋಗ ಸಾಧನೆ ಚಿಂತನೆಯನ್ನಾಧರಿಸಿದ್ದೇ ಹೊರತು ಧರ್ಮವನ್ನಾಧರಿಸಿದ್ದಲ್ಲವೆಂಬ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. ಯೋಗ ವ್ಯಕ್ತಿಯ ವಿಕಸನಕ್ಕೆ ಸಾಧನವೆಂದು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ್ದಾರೆ. ಆರೋಪ-ಪ್ರತ್ಯಾರೋಪಗಳೇನೇ ಇರಲಿ, ಯೋಗಾಭ್ಯಾಸದ ಜನಪ್ರಿಯತೆ ಹೆಚ್ಚುತ್ತಲೇ ಇರುವುದು ಸಮಾಧಾನಕರ ಸಂಗತಿ. ಪ್ರಧಾನಿ ಮೋದಿಯವರು, ಅಭಿಪ್ರಾಯ ಪಡುವಂತೆ, ಯೋಗ ಪ್ರೀತಿಯನ್ನು ಧಾರೆಯೆರೆಯುತ್ತದೆ. ಯೋಗದ ಮೂಲಕ ಏಕ ಭಾರತ, ಶ್ರೇಷ್ಠ ಭಾರತ ಎಂಬುದನ್ನು ಜಗತ್ತಿನ ಮುಂದೆ ನಾವು ಸಾದರಪಡಿಸಬಹುದು. ವಿಶ್ವಾದ್ಯಂತ ಜನರು ಸ್ವಪ್ರೇರಣೆಯಿಂದ ಭಾಗಿಯಾಗಿರುವುದು ಯೋಗ ಶಕ್ತಿಯ ವಿಸ್ತರಣಶೀಲತೆಯನ್ನು ತೋರುತ್ತದೆ. ಹೀಗಾಗಿಯೇ 'ವಸುಧೈವ ಕುಟುಂಬಕಂ' ಗಾಗಿ ಯೋಗ ಅವಶ್ಯವಾಗಿದೆ. ಯೋಗಾಭ್ಯಾಸಗಳಿಂದ ಜಾಗತಿಕ ಆರೋಗ್ಯ ಸಮಸ್ಯೆಗಳು ಪರಿಹಾರವಾಗಿ, ವಿಶ್ವದೆಲ್ಲೆಡೆ ಜನತೆ ಆರೋಗ್ಯವಂತರಾಗಲೆಂಬ ಸದಾಶಯ ಭಾರತೀಯರದು.

ಅಭಿಮತ
ರಾಸುಮ ಭಟ್

ನಳಂದ ವೈಭವ ಮರುಕಳಿಸಲಿ

ನಳಂದ ಪ್ರಾಂತ್ಯವು ಭಾರತದ ರಾಜ್ಯ, ಬಿಹಾರದ ರಾಜಧಾನಿಯಾದ ಪಾಟ್ನಾದ ಆಗ್ನೇಯ ಭಾಗದಲ್ಲಿ ಸುಮಾರು 55 ಮೈಲು ದೂರದಲ್ಲಿದೆ. ಇಲ್ಲಿ ಪ್ರಖ್ಯಾತ ನಳಂದ ವಿಶ್ವವಿದ್ಯಾಲಯವು ಕ್ರಿ.ಶ. 427 ರಿಂದ 1197 ವರೆಗೆ ವಿಶ್ವದ ಪ್ರಮುಖ ವ್ಯಾಸಂಗ ಕೇಂದ್ರವಾಗಿತ್ತು. ಇದು ಇತಿಹಾಸದಲ್ಲಿ ನಮೂದಿತವಾದ ಮೊದಲ ಅತಿ ಶ್ರೇಷ್ಠವಾದ ವಿಶ್ವವಿದ್ಯಾಲಯ ಎಂದು ಕರೆಯಲ್ಪಟ್ಟಿದೆ.

ನಳಂದ ವಿಶ್ವವಿದ್ಯಾಲಯದ ಇತಿಹಾಸವನ್ನು ಗಮನಿಸುವುದಾದರೆ ಇದು ಗುಪ್ತ ಸಾಮ್ರಾಟ ಕುಮಾರಗುಪ್ತನ ಕಾಲದಲ್ಲಿ ಸ್ಥಾಪಿತವಾಯಿತೆಂದು ಐತಿಹಾಸಿಕ ಅಧ್ಯಯನವು ತಿಳಿಸುತ್ತದೆ.ಆ ಸ್ಥಳದಲ್ಲಿ ಅವರ ಒಂದು ಮುದ್ರೆಯು ದೊರೆತಿದ್ದರಿಂದ ಪ್ರಜ್ಞಾವರ್ಮ ಮತ್ತು ಜುವಾಂಗ್‌ಜುಂಗ್ ಇಬ್ಬರೂ ಅವನನ್ನೇ ಇದರ ಸ್ಥಾಪಕನೆಂದು ಉಲ್ಲೇಖಿಸಿದ್ದಾರೆ. ಇತಿಹಾಸಜ್ಞ ಸುಕುಮಾರ್ ದತ್ತರ ಪ್ರಕಾರ ನಳಂದ ವಿಶ್ವವಿದ್ಯಾಲಯದ ಚರಿತ್ರೆಯು ಗುಪ್ತರ ವಂಶಪಾರಂಪರ್ಯದ ಪ್ರಗತಿಪರ ಸಾಂಸ್ಕೃತಿಕ ಸಂಪ್ರದಾಯದ ಮೇಲೆ ಪ್ರಭಾವ ಬೀರಿದ ಆರರಿಂದ ಒಂಬತ್ತನೆಯ ಶತಮಾನದವರೆಗೆ ಇದರ ಬೆಳವಣಿಗೆ, ಅಭಿ ವೃದ್ಧಿ ಮತ್ತು ಸೌಕರ್ಯಕ್ಕೆ ಗುಪ್ತರು ಸಹಕರಿಸಿದರು. ಪ್ರಖ್ಯಾತ ಚೀನಿ ಯಾತ್ರಿಕ, ಇತಿಹಾಸಕಾರ ಹ್ಯೂಯೆನ್ ತ್ಸಾಂಗ್ ಕ್ರಿ.ಶ. 629-645 ಐದು ವರ್ಷ ನಳಂದದಲ್ಲಿ ವಿದ್ಯಾರ್ಥಿಯಾಗಿದ್ದ. ನಳಂದ ವಿಶ್ವವಿದ್ಯಾ ಲಯವು ಉತ್ತುಂಗ ಸ್ಥಿತಿಯಲ್ಲಿದ್ದಾಗ ಸುಮಾರು 10,000 ವಿದ್ಯಾರ್ಥಿ ಗಳನ್ನು ಮತ್ತು 2,000 ಅಧ್ಯಾಪಕರನ್ನು ಒಳಗೊಂಡಿತ್ತು ಹಾಗೂ 90 ಲಕ್ಷಕ್ಕೂ ಹೆಚ್ಚು ಅಮೂಲ್ಯ ಹಸ್ತಪ್ರತಿಗಳನ್ನು ಹೊಂದಿತ್ತು ಎಂದೂ ಇತಿಹಾಸದಲ್ಲಿ ದಾಖಲಾಗಿದೆ.1193ರಲ್ಲಿ ನಳಂದ ವಿಶ್ವವಿದ್ಯಾಲಯವು ಬಖ್ತಿಯಾರ್ ಖಿಲ್ಜಿಯ ದಾಳಿಯಿಂದ ಸಂಪೂರ್ಣವಾಗಿ ನಾಶವಾಯಿತು.

ಪ್ರಸ್ತುತ ಬಿಹಾರದ ರಾಜ್ ಗೀರ್‌ನಲ್ಲಿ ಹೊಸದಾಗಿ 17 ರಾಷ್ಟ್ರಗಳಾದ ಆಸ್ಟ್ರೇಲಿಯಾ, ಬಾಂಗ್ಲಾದೇಶ, ಭೂತಾನ್, ಬ್ರೂನಿ, ಕಾಂಬೋಡಿಯಾ, ಚೀನಾ, ಇಂಡೋನೇಷಿಯಾ, ಲಾವೋಸ್, ಮಾರಿಷಸ್, ಮ್ಯಾನ್ಮಾರ್, ನ್ಯೂಜಿಲೆಂಡ್, ಪೋರ್ಚುಗಲ್, ಸಿಂಗಾಪುರ, ದ.ಕೊರಿಯಾ, ಶ್ರೀಲಂಕಾ, ಥಾಯ್ಲೆಂಡ್ ಮತ್ತು ವಿಯೆಟ್ನಾಂ ಸಹಭಾಗಿತ್ವದಲ್ಲಿ 455 ಎಕರೆ ಸ್ಥಳದಲ್ಲಿ 1749 ಕೋಟಿ ರು. ವೆಚ್ಚದಲ್ಲಿ 40 ತರಗತಿ ಕೊಠಡಿಗಳೊಂದಿಗೆ ಎರಡು ಶೈಕ್ಷಣಿಕ ಬ್ಲಾಕ್‌ಗಳು ಸೇರಿ ಒಟ್ಟು 1,900 ಆಸನ ಸಾಮರ್ಥ್ಯ ವಿರುವ ಮತ್ತು ತಲಾ 300 ಆಸನಗಳ ಸಾಮರ್ಥ್ಯದ 2 ಸಭಾಂಗಣಗಳನ್ನು ಹೊಂದಿ ದ್ದು, ಸುಮಾರು 550 ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊಂದಿರುವ ಹಾಸ್ಟೆಲ್‌ನ್ನು ಸಹ ಹೊಂದಿರುವ, ನೂತನ ನಳಂದ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಕೇಂದ್ರ, 2000 ವ್ಯಕ್ತಿಗಳಿಗೆ ಅವಕಾಶ ಕಲ್ಪಿಸುವ ಆಂಫಿಥಿಯೇಟರ್, ಅಧ್ಯಾಪಕರ ಕ್ಲಬ್ ಮತ್ತು ಕ್ರೀಡಾ ಸಂಕೀರ್ಣ ಸೇರಿದಂತೆ ಹಲವಾರು ಇತರ ಸೌಲಭ್ಯಗಳನ್ನು ಹೊಂದಿದೆ.

ಜೊತೆಗೆ ಸೌರ ಸ್ಥಾವರ, ನೀರಿನ ಸಂಸ್ಕರಣಾ ಘಟಕಗಳು, ತ್ಯಾಜ್ಯ ನೀರು ಮರುಬಳಕೆ ಘಟಕ, 100 ಎಕರೆ ಜಲಮೂಲವನ್ನೂ ಹೊಂದಿರುವ ನಳಂದ ವಿಶ್ವವಿದ್ಯಾಲಯ ಮತ್ತೊಮ್ಮೆ ಜಗತ್ತಿನಲ್ಲಿ ತನ್ನ ಛಾಪು ಮೂಡಿಸಲೆಂದೂ ಆಶಿಸೋಣ.

(ಲೇಖಕರು: ಸಂಶೋಧನಾ ವಿದ್ಯಾರ್ಥಿ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 46

ಸಮಾಚಾರ ಸಣ್ಣದಲ್ಲ

ಪುನರ್ ಮನನದಲ್ಲಿ ರಾಜ್ಯಕ್ಕೆ ಪ್ರಥಮ

ಹೊಸಪೇಟೆ: ಕರ್ನಾಟಕ ರಾಜ್ಯದ ಗೃಹರಕ್ಷಕ ದಳದಿಂದ ಹಮ್ಮಿಕೊಂಡಿದ್ದ ಪುನರ್ ಮನನ ತರಬೇತಿಯಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕು ಘಟಕದ ಗೃಹರಕ್ಷಕಿ ಗಾಯಿತ್ರಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಬಂಗಾರದ ಪದಕ ನೀಡಿ ಅಧಿಕಾರಿಗಳು ಸನ್ಮಾನಿಸಿದ್ದಾರೆ. ಹೆಚ್ಚುವರಿ ಪೊಲೀಸ್ ಅಧೀಕ್ಷಕ ರವಿಕುಮಾರ್, ತರಬೇತಿ ಬೋಧಕ ಬಸವರಾಜ್, ಹೆಚ್ಚುವರಿ ಬೋಧಕರು ಕೌಸರ್ ಬೀ, ಇಲಾಖೆ ಶೃತಿ ಇತರರಿದ್ದರು.

ಹಕ್ಕುಪತ್ರ ರಿಜಿಸ್ಟರ್‌ನಲ್ಲಿ ಸೇರಿಸಲು ಮನವಿ

ಹೊಸಪೇಟೆ: ಸಮೀಪದ ನಾಗೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗುಡಿಒಬಳಾಪುರದ ಆಶ್ರಯ ಯೋಜನೆಯ 95 ಜನ ಫಲಾನುಭವಿಗಳಿಗೆ 1991ರಲ್ಲಿ ನೀಡಿರುವ ನಿವೇಶದ ಹಕ್ಕುಪತ್ರಗಳನ್ನು ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಸೇರಿಸುವಂತೆ ಒತ್ತಾಯಿಸಿ ತಹಸೀಲ್ದಾರ್ ಕಚೇರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. 1991ರಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ 95 ಜನ ಬಡ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿದ್ದಾರೆ. ಆದರೆ ಇದುವರೆಗೂ ಪಂಚಾಯಿತಿಯವರು ಮೂಲಸೌಕರ್ಯ ಒದಗಿಸದೇ ಹಾಗೂ ಡಿಮ್ಯಾಂಡ್ ರಿಜಿಸ್ಟರ್ ಸೇರಿಸುವಂತೆ ಒತ್ತಾಯಿಸಿದರೂ ಸ್ಪಂದಿಸುತ್ತಿಲ್ಲ ಎಂದು ದೂರಿದರು. ಅಲ್ಲದೆ ಹಿಂದೆ ಹಲವು ಬಾರಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದಲ್ಲಿಯೂ ಸಹ ಗಮನಕ್ಕೆ ತರಲಾಗಿತ್ತು. ಜೊತೆಗೆ ಶಾಸಕ ಎಚ್.ಆರ್. ಗವಿಯಪ್ಪ ಅವರಿಗೂ ಮನವಿ ಸಲ್ಲಿಸಲಾಗಿದ್ದು, ಕೂಡಲೇ ಸಮಸ್ಯೆ ಬಗೆಹರಿಸುವಂತೆ ಫಲಾನುಭವಿಗಳು ಒತ್ತಾಯಿಸಿದರು.

ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಬಳ್ಳಾರಿ: ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮದ ವ್ಯಕ್ತಿಗತ ಉದ್ಯಮಶೀಲತೆ ಘಟಕದಡಿ ಸಾಲ-ಸೌಲಭ್ಯ ಪಡೆಯಲು ಸ್ವ-ಸಹಾಯ ಗುಂಪುಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ. ಒಟ್ಟು 17 ಫಲಾನುಭವಿಗಳ ಗುರಿ ನಿಗದಿಪಡಿಸಿದ್ದು, ಬ್ಯಾಂಕ್ ವಿಧಿಸುವ ಶೇ.7 ರ ಮೇಲ್ಪಟ್ಟು ಶೇಖಡವಾರು ಬಡ್ಡಿ ಮೊತ್ತವನ್ನು (ಬಡ್ಡಿ ಸಹಾಯಧನ) ಭರಿಸಲಾಗುವುದು. ಜುಲೈ 4 ರೊಳಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಆಧಾರ್‌ಕಾರ್ಡ್, ಯೋಜನಾ ವರದಿ, ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರ, ಸ್ವ-ಸಹಾಯ ಗುಂಪುಗಳ ಭಾವಚಿತ್ರ ಹಾಗೂ ಗುಂಪಿಗೆ ಸಂಬಂಧಪಟ್ಟ ದಾಖಲಾತಿ ಮತ್ತು ಯೋಜನಾ ವರದಿಯನ್ನು ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಂಪ್ಲಿ ಪುರಸಭೆ ಕಾರ್ಯಾಲಯ ಕಚೇರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಲಾಬಿ ಕಾಯಿ ಕೊರಕದ ತರಬೇತಿ

ಬಳ್ಳಾರಿ: ತಾಲೂಕಿನ ಹಂದಿಹಾಳು ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ಹತ್ತಿ ಬೆಳೆಯಲ್ಲಿ ಗುಲಾಬಿ ಕಾಯಿ ಕೊರಕದ ನಿರ್ವಹಣೆ ಕುರಿತು ರೈತರಿಗೆ ತರಬೇತಿ ನೀಡಲಾಯಿತು. ಉಪ ಕೃಷಿ ನಿರ್ದೇಶಕ ಕೆಂಗೇಗೌಡ ಮಾತನಾಡಿ, ಪ್ರಸ್ತುತದಲ್ಲಿ ಮಣ್ಣು ಫಲವತ್ತತೆ ಕಳೆದುಕೊಳ್ಳುತ್ತಿದ್ದು, ಸಾವಯವ ಇಂಗಾಲದ ಅಂಶ ಕೂಡ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ಹಾಗಾಗಿ ಮಣ್ಣು ಪರೀಕ್ಷೆಯನ್ನು ರೈತರು ತಪ್ಪದೇ ಮಾಡಿಸಬೇಕು ಹಾಗೂ ಮಣ್ಣಿನ ಗುಣಧರ್ಮದ ಆಧಾರದ ಮೇರೆಗೆ ರಸಗೊಬ್ಬರಗಳನ್ನು ಬಳಸಬೇಕು ಎಂದು ಹೇಳಿದರು. ಕೃಷಿ ಭೂಮಿಯ ಸ್ಥಿರತೆ ಕಾಪಾಡಲು ರೈತರು ಹಸಿರೆಲೆ ಗೊಬ್ಬರ ಸಸ್ಯಗಳಂತಹ ಸೆಣಬು, ಪಿಳ್ಳೆಪಿಸುರು ಕಡೆ ರೈತರು ಮನಸ್ಸು ಮಾಡಬೇಕು ಹಾಗೂ ಕೃಷಿ ಇಲಾಖೆ ಯೋಜನೆಗಳಾದ ಪ್ರಧಾ ನಮಂತ್ರಿ ಫಸಲ್ ಬಿಮಾ ಯೋಜನೆ, ಪಿಎಂಎಫ್‌ಎಮ್‌ಇ ಹಾಗೂ ಕೃಷಿ ಭಾಗ್ಯ ಯೋಜನೆಗಳನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ರೈತರು ಎಕರೆಗೆ 2 ರಿಂದ 3 ಪ್ಯಾಕೆಟ್ ಹತ್ತಿ ಬೀಜವನ್ನು ಉಪಯೋಗಿಸದೆ, ಕೇವಲ ಒಂದು ಪ್ಯಾಕೆಟ್ ಬೀಜವನ್ನು ಉಪಯೋಗಿಸಿದ್ದಲ್ಲಿ ಗಿಡದಿಂದ ಗಿಡಕ್ಕೆ ಅಂತರ ಕಾಪಾಡುವುದರಿಂದ ಇಳುವರಿ ಹೆಚ್ಚಿಸಬಹುದು ಎಂದು ತಿಳಿಸಿದರು. ಈ ವೇಳೆ ಆತ್ಮ ಯೋಜನೆಯ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ವಾಣಿ ಕೋರಪ್ಪಳ, ಗ್ರಾಮ ಪಂಚಾಯಿತಿ ಅಧ್ಯಕ್ಷ ಯು.ಗಣೇಶ್, ಗ್ರಾಮ ಪಂಚಾಯಿತಿ ಸದಸ್ಯರಾದ ಪವಿತ್ರ, ಲಿಂಗಪ್ಪ, ರೆಹಮತ್ ಬೀ ಸೇರಿದಂತೆ ಗ್ರಾಮದ ರೈತರು, ಸಾರ್ವಜನಿಕರು ಹಾಗೂ ಇತರರು ಹಾಜರಿದ್ದರು.

ತಾಯಿ, ಮಗಳು ಕಾಣೆ: ಪತ್ತೆಗೆ ಮನವಿ

ಬಳ್ಳಾರಿ: ತಾಲೂಕಿನ ತೆಗ್ಗಿನ ಬೂದಿಹಾಳ್ ಗ್ರಾಮದ ನಿವಾಸಿ ಆಶಾ ಎನ್ನುವ 28 ವರ್ಷದ ಮಹಿಳೆ ಹಾಗೂ ಮಗಳಾದ ಪೂರ್ವಿಕಾ ಎನ್ನುವ 9 ವರ್ಷದ ಬಾಲಕಿಯು ಜೂ.15 ರಂದು ಕಾಣೆಯಾಗಿರುವ ಕುರಿತು ಪಿಡಿ ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ. ಎತ್ತರ 5.3 ಅಡಿ, ಕೋಲುಮುಖ, ಗೋಧಿಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಹಸಿರು ಬಣ್ಣದ ಸೀರೆ ಮತ್ತು ಕುಪ್ಪಸ ಧರಿಸಿರುತ್ತಾಳೆ. ಬಾಲಕಿಯ ಚಹರೆ: ಎತ್ತರ 3.5 ಅಡಿ, ಅಡಿ, ಕೋಲುಮುಖ, ಗೋಧಿಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಬಿಳಿ ಮತ್ತು ಕಂದು ಬಣ್ಣದ ಗೌನ್ ಧರಿಸಿರುತ್ತಾಳೆ. ತಾಯಿ ಮತ್ತು ಮಗಳ ಬಗ್ಗೆ ಮಾಹಿತಿ ದೊರೆತಲ್ಲಿ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 08392-258100 ಅಥವಾ 100, ಎಸ್‌ಪಿ ಅವರ ದೂ.08392-265010, ಪಿಎಸ್‌ಐ ಮೊ.9480803052 ಗೆ ಸಂಪರ್ಕಿಸಬಹುದು.

ಜಿಲ್ಲೆಯಲ್ಲಿ ಶಿಶು ಮರಣ ಶೂನ್ಯಕ್ಕೆ ತರಲು ಸೂಕ್ತ ಕ್ರಮವಹಿಸಿ: ಡಿಸಿ

ರೋಗಿಗಳಿಗೆ ಸಕಾಲದಲ್ಲಿ ಸೇವೆ ನೀಡಿ

ಬಳ್ಳಾರಿ: ತಾಯಿ ಮರಣ ಹಾಗೂ ಶಿಶುವಿನ ಮರಣವನ್ನು ತಡೆಗಟ್ಟಲು ವೈದ್ಯಾಧಿಕಾರಿಗಳು, ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಸ್ಪಂದಿಸಿ ಸೂಕ್ತ ಚಿಕಿತ್ಸೆ ನೀಡಲು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಮ್ಸ್ ಸಹಯೋಗದೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ತಜ್ಞ ವೈದ್ಯರು, ವೈದ್ಯಾಧಿಕಾರಿಗಳು, ಅಧಿಕಾರಿಗಳು, ಸಿಬ್ಬಂದಿಯವರೊಂದಿಗೆ ತಾಯಿ ಮರಣ ಮತ್ತು ಶಿಶುಮರಣ ಕುರಿತು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಗರ್ಭಿಣಿ, ಬಾಣಂತಿಯರು ಮತ್ತು ಶಿಶು ಮರಣವನ್ನು ಶೂನ್ಯಕ್ಕೆ ತರಲು ಸೂಕ್ತ ಮುಂಜಾಗ್ರತೆಯೊಂದಿಗೆ ಕ್ರಮವಹಿಸಿ, ಅಗತ್ಯವಿದ್ದಲ್ಲಿ ಮಾತ್ರ ಮೇಲ್ಮಟ್ಟದ ಆಸ್ಪತ್ರೆಗೆ ಮುಂಚಿತವಾಗಿ ಮಾಹಿತಿ ನೀಡಿ ಆಂಬ್ಯುಲೆನ್ಸ್‌ನೊಂದಿಗೆ ಕಳುಹಿಸಬೇಕು ಎಂದು ತಿಳಿಸಿದರು.

ಮನೆಯಲ್ಲಿ ಹೆರಿಗೆ ಮಾಡಿಸುವುದರಿಂದ ತಾಯಿ ಮಗುವಿಗೆ ಉಂಟಾಗುವ ತೊಂದರೆಗಳ ಬಗ್ಗೆ ಮಾಹಿತಿ ನೀಡಿ ಅರಿವು ಮೂಡಿಸಬೇಕು. ಗಂಭೀರ ಸಮಸ್ಯೆಗಳು ಇದ್ದಾಗ ಪಾಲಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮನವರಿಕೆ ಮಾಡಿಕೊಡಬೇಕು ಎಂದರು. ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಲು ಇರುವ ವೈದ್ಯಕೀಯ ಸೌಲಭ್ಯಗಳ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಜಾಗೃತಿ ನೀಡುವಂತೆ ಸೂಚಿಸಿದರು.

ಕಬ್ಬಿಣಾಂಶ ಮಾತ್ರೆಗಳನ್ನು ನುಂಗಿಸುವ ಮೂಲಕ ರಕ್ತಹೀನತೆ ತಡೆಯಲು ಮತ್ತು ನಿಗದಿತವಾಗಿ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೆಚ್.ಐ.ವಿ ಹೆಚ್‌ಬಿಸಿಜಿ ಪರೀಕ್ಷೆಯನ್ನು ಕೈಗೊಳ್ಳುವ ಮೂಲಕ, ಸ್ಕ್ಯಾನಿಂಗ್ ಅವಶ್ಯವಿರುವಾಗ ವೈದ್ಯರ ಸಲಹೆಯಂತೆ ಮಾಡಿಸಿ ಮಗುವಿನ ಆರೋಗ್ಯದಲ್ಲಿ ಸಂಭಾವ್ಯ ನ್ಯೂನ್ಯತೆಗಳನ್ನು ಪೂರ್ವದಲ್ಲಿಯೇ ಗುರುತಿಸಿ ತಾಯಿ ಮತ್ತು ಶಿಶುವಿನ ಆರೋಗ್ಯದ ದೃಷ್ಟಿಯಲ್ಲಿ ಗಂಭೀರವಾಗಿ ಪರಿಗಣಿಸಿ ಕಾರ್ಯ ನಿರ್ವಹಿಸಲು ಸೂಚಿಸಿದರು.

ಸರಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ತಾಯಿ ಶಿಶುವಿನ ಮರಣವನ್ನು ಶೂನ್ಯಕ್ಕೆ ತರಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸಾರೆಡ್ಡಿ, ವಿಮ್ಸ್ ಮಕ್ಕಳ ವಿಭಾಗದ ವೈದ್ಯ ಡಾ.ವಿಶ್ವನಾಥ, ಪ್ರಸೂತಿ ವಿಭಾಗದ ವೈದ್ಯ ಡಾ.ವೀರೇಂದ್ರಕುಮಾರ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಸೇರಿದಂತೆ ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಅಧಿಕಾರಿಗಳು, ತಜ್ಞವೈದ್ಯರು, ವೈದ್ಯಾಧಿಕಾರಿಗಳು, ಸಿಬ್ಬಂದಿಯವರು ಉಪಸ್ಥಿತರಿದ್ದರು.

ತಾಯಿ ಮರಣ ಮತ್ತು ಶಿಶುಮರಣ ಕುರಿತು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಪರಿಶೀಲನಾ ಸಭೆ ನಡೆಯಿತು.

ಗಂಭೀರ ಸಮಸ್ಯೆಗಳ ಮುತುವರ್ಜಿವಹಿಸಿ

ಗರ್ಭಿಣಿ ಎಂದು ತಿಳಿದ ದಿನದಿಂದಲೇ ಗರ್ಭಿಣಿಗೆ ಕಂಡು ಬರಬಹುದಾದ ಸಾಮಾನ್ಯ, ಗಂಭೀರ ಸಮಸ್ಯೆಗಳ ಕುರಿತು ಮುತುವರ್ಜಿ ವಹಿಸಲು ಕ್ಷೇತ್ರ ಮಟ್ಟದ ಸಿಬ್ಬಂದಿಯವರು ಗರ್ಭಿಣಿ ಹಾಗೂ ಸಂಬಂಧಿಸಿದ ಪಾಲಕರೊಂದಿಗೆ ಸಮನ್ವಯ ಮಾಡಿಕೊಂಡು ಸೂಕ್ತ ಸಲಹೆ, ಉಪಚಾರ ನೀಡುವ ಕಾರ್ಯ ಆಗಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

> ಸರಕಾರದ ಯೋಜನೆಯಾದ ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಯೋಜನೆಯಡಿ ದೊರಕುವ ಉಚಿತ ಊಟ, ಔಷಧಿ, ಉಚಿತ ರಕ್ತ, ಪರೀಕ್ಷೆ, ಉಚಿತ ನಗುಮಗು ವಾಹನ ಮೂಲಕ ಮನೆಗೆ ಬಿಡುವ ಕುರಿತು ಹಾಗೂ ಜನನಿ ಸುರಕ್ಷಾ ಯೋಜನೆಯಡಿ ಸಹಾಯಧನ ಅವರ ಖಾತೆಗೆ ಜಮಾವಾಗಿರುವ ಬಗ್ಗೆ ನಿಗಾ ವಹಿಸಿ.
> - ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ

ಐಟಿ ಟ್ಯೂಟರ್ ಒಡಂಬಡಿಕೆಗೆ ಸಹಿ

ಹೊಸಪೇಟೆ: ಸ್ಥಳೀಯ ಪ್ರೌಢದೇವರಾಯ ತಾಂತ್ರಿಕ ಎಂಜಿನಿಯರಿಂಗ್ ಕಾಲೇಜ್ (ಪಿಡಿಐಟಿ) ಮತ್ತು ಅಮೆರಿಕದ ಅಟ್ಲಾಂಟಿಸ್ ವಿಶ್ವವಿದ್ಯಾಲಯ ಸಹಯೋಗದಲ್ಲಿ ಐ.ಟಿ.ಟ್ಯೂಟರ್ ಪ್ರೊ ಎಂಬ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಅಲ್ಲಂ ಗುರುಬಸವರಾಜ್ ಮತ್ತು ಕಾರ್ಯದರ್ಶಿ ಡಾ.ಅರವಿಂದ್ ಪಟೇಲ್ ಅವರ ನೇತೃತ್ವದಲ್ಲಿ ಸಹಿ ಹಾಕಲಾಯಿತು. ಅದರಂತೆ ಸಂಶೋಧನೆ ಮತ್ತು ಉಪನ್ಯಾಸ ಚಟುವಟಿಕೆಗಳಿಗಾಗಿ ಎರಡೂ ಸಂಸ್ಥೆಗಳು ಅಧ್ಯಾಪಕರ ವಿನಿಮಯ ಕಾರ್ಯಕ್ರಮ ನಡೆಸಬಹುದಾಗಿದೆ. ಅಟ್ಲಾಂಟಿಸ್ ವಿಶ್ವವಿದ್ಯಾಲಯದ ಎಂ.ಡಿ ಹಾಗೂ ಕನ್ನಡಿಗ ಕೈಲಾಸ್ ಚಿಂತಾಮಣಿ ಮಾತನಾಡಿ, ಎರಡೂ ದೇಶಗಳ ನಡುವಿನ ಶೈಕ್ಷಣಿಕ ಮತ್ತು ಸಂಶೋಧನಾ ಸಹಕಾರ, ಪರಸ್ಪರ ಪ್ರಯೋಜನವನ್ನು ಗುರುತಿಸುವ ಹೊಸ ಅಧ್ಯಾಯಕ್ಕೆ ಈ ಒಪ್ಪಂದ ನಾಂದಿಯಾಗಿದೆ ಎಂದರು. ಕಾಲೇಜಿನ ಡೀನ್ ಡಾ.ಅರುಣ್ ಮುಧೋಳ ಮಾತನಾಡಿ, ವಿದೇಶಕ್ಕೆ ಉನ್ನತ ವ್ಯಾಸಂಗಕ್ಕೆ ಹೋಗಲು ಇಚ್ಛಿಸುವ ಪಿಡಿಐಟಿ ವಿದ್ಯಾರ್ಥಿಗಳಿಗೆ ಈ ಒಪ್ಪಂದದಿಂದಾಗಿ ಜಿ.ಆರ್.ಇ, ಟೊಫೆಲ್ ಮುಂತಾದ ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೆ ನೇರವಾಗಿ ಸಂದರ್ಶನದ ಅವಕಾಶವನ್ನು ಅಟ್ಲಾಂಟಿಸ್ ವಿಶ್ವವಿದ್ಯಾಲಯ ಕಲ್ಪಿಸುತ್ತದೆ ಎಂದು ತಿಳಿಸಿದರು.

ಪ್ರಾಚಾರ್ಯ ಪ್ರೊ.ಯು.ಎಂ.ರೋಹಿತ್ ಮಾತನಾಡಿ, ಬಳ್ಳಾರಿಯ ವೀ ವೀ ಸಂಘದ ಇನ್ನೊಂದು ಎಂಜಿನಿಯರಿಂಗ್ ಕಾಲೇಜಾದ ಆರ್.ವೈ.ಎಂ.ಇ.ಸಿಗೂ ಈ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಕಲ್ಪಿಸಲಾಗುವುದು ಎಂದರು. ಉಪಪ್ರಾಂಶುಪಾಲ ಪ್ರೊ.ಪಾರ್ವತಿ ಕಡ್ಲಿ ಮತ್ತು ವಿವಿಧ ತಾಂತ್ರಿಕ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

> ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಇದರ ಮೂಲಕ ಹಲವಾರು ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ, ಜೊತೆಗೆ ಸಂಶೋಧನೆ, ವಿಜ್ಞಾನ ಮತ್ತು ನಾವೀನ್ಯತೆಗಳನ್ನು ತಿಳಿಸುವ ವೇದಿಕೆಯಾಗಲಿದೆ. ಇದರ ಅಡಿಯಲ್ಲಿ ಆನ್ಲೈನ್ ಕಲಿಕೆಗೂ ಅವಕಾಶ ವಿದೆ, ಕೈಗಾರಿಕೆ ಉದ್ಯಮಗಳಲ್ಲಿ ಅವಶ್ಯಕವಿರುವ ನವೀನ ತಂತ್ರಜ್ಞಾನ ಹಾಗೂ ಕೌಶಲಗಳ ತರಬೇತಿಯನ್ನು ಇಲ್ಲಿ ನೀಡಲಾಗುತ್ತದೆ.
> - ಕರಿಬಸವರಾಜ್ ಬಾದಾಮಿ, ಮಂಡಳಿಯ ಅಧ್ಯಕ್ಷ

ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಅಲ್ಲಂ ಗುರುಬಸವರಾಜ್ ಮತ್ತು ಕಾರ್ಯದರ್ಶಿ ಡಾ.ಅರವಿಂದ್ ಪಟೇಲ್ ಅವರ ನೇತೃತ್ವದಲ್ಲಿ ಸಹಿ ಹಾಕಲಾಯಿತು.

ರೇಣುಕಾಸ್ವಾಮಿ ಕೊಲೆ ಶಿಕ್ಷೆಗೆ ಆಗ್ರಹ

ಸಮಿತಿ ನೇತೃತ್ವದಲ್ಲಿ ಸಮಾಜದ ಪ್ರಮುಖರು ನಗರದ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕೆಲ ಕಾಲ ಧರಣ ನಡೆಸಿದರು. ಬಳಿಕ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್‌ಗೆ ಮನವಿ ಸಲ್ಲಿಸಿದರು.

ಹೊಸಪೇಟೆ: ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ ಮತ್ತು ಗ್ಯಾಂಗ್‌ಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿ ನಗರದಲ್ಲಿ ಬೇಡ, ಜಂಗಮ ಸಮಾಜ, ಅಖಿಲ ಭಾರತ ವೀರಶೈವ ಲಿಂಗಾಯುತ ಮಹಾಸಭಾ, ವೀರಶೈವ ಲಿಂಗಾಯತ ಸಮಾಜದಿಂದ ಪ್ರತಿಭಟನೆ ನಡೆಸಲಾಯಿತು.

ಸಮಿತಿ ನೇತೃತ್ವದಲ್ಲಿ ಸಮಾಜದ ಪ್ರಮುಖರು ನಗರದ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕೆಲ ಕಾಲ ಧರಣ ನಡೆಸಿದರು. ಬಳಿಕ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್‌ಗೆ ಮನವಿ ಸಲ್ಲಿಸಿದರು.

ದರ್ಶನ ಮತ್ತು ಗ್ಯಾಂಗ್ ಗೆ ಶಿಕ್ಷೆಯಾಗಬೇಕು, ಗಲ್ಲು ಶಿಕ್ಷೆ ಕೊಡಬೇಕು. ಮಾನವ ಸಮಾಜ ತಲೆ ತಗ್ಗಿಸೋ ಕೆಲಸ ಮಾಡಿದ್ದಾರೆ. ಕ್ರೂರವಾಗಿ ಚಿತ್ರಹಿಂಸೆ ಕೊಟ್ಟು ಕೊಲ್ಲಲಾಗಿದೆ.

ಇಂತಹ ಕೃತ್ಯ ಎಲ್ಲೋ ಬೇರೆ ದೇಶಗಳಲ್ಲಿ ಕೇಳಿದ್ದಿವಿ. ಆದರೆ ಇಲ್ಲೇ ನಮ್ಮ ರಾಜ್ಯದಲ್ಲೇ ಈ ಘೋರ ಘಟನೆ ನಡೆದಿದೆ. ಇಂತಹ ನೀಚ ಕೃತ್ಯ ಎಸಗಿದವರಿಗೆ ತಕ್ಕ ಶಿಕ್ಷೆಯಾಗಬೇಕಿದೆ ಎಂದು ಧರಣ ನಿರತರು ಒತ್ತಾಯಿಸಿದರು.

ರೇಣುಕಾ ಸ್ವಾಮಿ ಪತ್ನಿ ಈಗ 5 ತಿಂಗಳ ಗರ್ಭಿಣ ಇದ್ದಾಳೆ, ಆ ಮಗುಗೆ ಆ ತಾಯಿ ಏನು ಹೇಳ್ತಾಳೆ, ಇಂತಹ ಘೋರ ಅನ್ಯಾಯ ಮಾಡಿದವರಿಗೆ ತಕ್ಕ ಶಿಕ್ಷೆಯಾಗಲಿ ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ರೇವಣಸಿದ್ಧಪ್ಪ, ಶಂಕರ್ ಮೇಟಿ, ಮಧುರಚೆನ್ನ ಶಾಸ್ತ್ರೀ ಸೇರಿದಂತೆ ಸಮಿತಿ ಮುಖಂಡರು ಇತರರಿದ್ದರು.

ಅವಳಿ ಜಿಲ್ಲೆಗೆ ರೈಲ್ವೆ ಯೋಜನೆ ಜಾರಿಗೊಳಿಸಲು ಆಗ್ರಹ

ಹೊಸಪೇಟೆ: ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಪ್ರಮುಖ ರೈಲ್ವೇ ಯೋಜನೆಗಳ ಜಾರಿಗೊಳಿಸಬೇಕು ಎಂದು ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಈ ಬಗ್ಗೆ ಸಮಿತಿ ಪದಾಧಿಕಾರಿಗಳು ಬಳ್ಳಾರಿ ಲೋಕಸಭಾ ಕ್ಷೇತ್ರ ಸಂಸದ ಈ.ತುಕಾರಾಂ ಅವರನ್ನು ಸಂಡೂರಿನಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕ್ರಿಯಾ ಸಮಿತಿ ಅಧ್ಯಕ್ಷ ವೈ. ಯಮುನೇಶ್ ಮಾತನಾಡಿ, ಬಳ್ಳಾರಿ ಮತ್ತು ವಿಜಯನಗರ ರಾಜ್ಯದಲ್ಲಿ ಅತ್ಯಂತ ತ್ವರಿತಗತಿಯಿಂದ ಬೆಳೆಯುತ್ತಿರುವ ಜಿಲ್ಲೆಗಳಾಗಿವೆ. ಈ ಎರಡು ಜಿಲ್ಲೆಗಳಿಂದ ನೈರುತ್ಯ ರೈಲ್ವೆ ವಲಯಕ್ಕೆ ಅತ್ಯಧಿಕ ಪ್ರಮಾಣದಲ್ಲಿ ಆದಾಯ ಸಂಗ್ರಹವಾಗುತ್ತಿದೆ. ಆದುದರಿಂದ ಈ ಜಿಲ್ಲೆಗಳ ಪ್ರವಾಸೋದ್ಯಮ, ಕೈಗಾರಿಕೆ, ಆರ್ಥಿಕ ಕ್ಷೇತ್ರದಲ್ಲಿ ಬೆಳವಣಿಗೆ ನಿಟ್ಟಿನಲ್ಲಿ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಮಂಜೂರು ಮಾಡಬೇಕೆಂದು ಮನವಿ ಮಾಡಿದರು.

ಹೊಸಪೇಟೆ ರೈಲ್ವೇ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಬೇಕು. ಪ್ರಯಾಣಿಕರ ರೈಲುಗಳ ವಿಳಂಬರಹಿತ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಹೊಸಪೇಟೆಯಲ್ಲಿ ಎರಡು ಹೆಚ್ಚುವರಿ ಪ್ಲಾಟ್‌ಫಾರಂಗಳ ನಿರ್ಮಾಣ ಹಾಗೂ ರೈಲುಗಳಿಗೆ ನೀರು ತುಂಬಿಸುವ ಸೌಲಭ್ಯ ಕಲ್ಪಿಸಬೇಕು. ಪ್ರಯಾಣಿಕರ ರೈಲುಗಳ ದುರಸ್ಥಿ ಮತ್ತು ನಿರ್ವಹಣೆಗೆ ಅನುಕೂಲವಾಗುವಂತೆ ಪಿಟ್‌ಲೈನ್ ನಿರ್ಮಾಣಮಾಡಬೇಕು.

ಗೂಡ್ಸ್ ಮತ್ತು ಸರಕು ಸಾಗಾಣಿಕೆಯ ಗಾಡಿಗಳ ಸಂಚಾರವನ್ನು ಕಾರಿಗನೂರಿಗೆ ಸ್ಥಳಾಂತರಿಸಬೇಕು. ಚಿತ್ತವಾಡ್ಗಿ(ಐ.ಎಸ್.ಆರ್.ಗೇಟ್) ಎಲ್.ಸಿ.ನಂ-4 ಕ್ಕೆ ರೈಲ್ವೆ ಕೆಳಸೇತುವೆ ನಿರ್ಮಾಣ ಮಾಡಬೇಕು. ರೈಲ್ವೆ ಇಲಾಖೆಗೆ ಅತ್ಯಾಧಿಕ ಆದಾಯದ ಮೂಲವಾಗಿರುವ ಸಂಡೂರು ತಾಲೂಕಿಗೆ ಪ್ರಯಾಣಿಕರ ರೈಲು ಸಂಪರ್ಕ ಕಲ್ಪಿಸಬೇಕು. ಯಶವಂತನಗರ- ಸ್ವಾಮಿಹಳ್ಳಿ ಮೊಳಕಾಲ್ಮುರು ರಾಯದುರ್ಗ ಮಧ್ಯೆ ನೂತನ ರೈಲ್ವೆ ಮಾರ್ಗ ನಿರ್ಮಾಣಮಾಡಬೇಕು. ಹಗರಿಬೊಮ್ಮನಹಳ್ಳಿಯಲ್ಲಿ ರೈಲ್ವೆ ಮೇಲ್‌ಸೇತುವೆ ಹಾಗೂ ಅಂಡರ್‌ಪಾಸ್ ನಿರ್ಮಾಣಮಾಡಬೇಕು. ಈಗಾಗಲೇ ಸಮೀಕ್ಷೆ ಮುಗಿದಿರುವ ಸಂಡೂರು-ಕಂಪ್ಲಿ - ಗಂಗಾವತಿ ನಡುವೆ ನೂತನ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಮುಂದಾಗಬೇಕು. ಗದಗ- ಮುಂಡರಗಿ-ಹಡಗಲಿ-ಹರಪನಹಳ್ಳಿ ನಡುವೆ ನೂತನ ರೈಲ್ವೆ ಮಾರ್ಗ ನಿರ್ಮಿಸಬೇಕು ಎಂದು ಮನವಿಮಾಡಿದರು.

ಮನವಿ ಸ್ವೀಕರಿಸಿ ಪ್ರತಿಕ್ರಿಯಿಸಿದ ಸಂಸದ ಈ. ತುಕರಾಂ, ಕೇಂದ್ರ ರೈಲ್ವೇ ಖಾತೆ ಸಹಾಯಕ ಸಚಿವ ಸೋಮಣ್ಣ ಅವರನ್ನು ನವದೆಹಲಿಯಲ್ಲಿ ಭೇಟಿಯಾಗಿ ಜಿಲ್ಲೆಗಳ ಬೇಡಿಕೆಗಳ ಬಗ್ಗೆ ಚರ್ಚಿಸಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕ್ರಿಯಾಸಮಿತಿಯ ಪ್ರೊ. ಜಿ. ಉಮಾಮಹೇಶ್ವರ್, ಅಯ್ಯಾಳಿ ಮೂರ್ತಿ, ಮಹೇಶ್, ವಿಶ್ವನಾಥ್ ಕೌತಾಳ್, ಆರ್.ರಾಘವೇಂದ್ರ, ಖಾದರ್ ಭಾಷಾ, ಮಾರುತಿ ರಾವ್, ಕೃಷ್ಣಕುಮಾರ್, ಗಿರೀಶ, ದೇವರಾಜ್, ಬಾಬುರಾವ್, ವಿನಾಯಕ್ ಇತರರಿದ್ದರು.

ಪದಾಧಿಕಾರಿಗಳು ಬಳ್ಳಾರಿ ಲೋಕಸಭಾ ಕ್ಷೇತ್ರ ಸಂಸದ ಈ.ತುಕಾರಾಂ ಅವರನ್ನು ಸಂಡೂರಿನಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿದರು.

ಸಂಡೂರು ದಕ್ಷಿಣ ವಲಯದಿಂದ ಜಿಪ್ ಲೈನ್, ಯೊರೋಪ್ ಹೈ ರೋಪ್, ಎಂ.ಪಿ.ಸಿ.ಎ ಹಾಗೂ ಅರಣ್ಯ ಪ್ರದೇಶದ ಅಭಿವೃದ್ಧಿ ಕಾಮಗಾರಿಗೆ ಸಂಸದ ಈ. ತುಕರಾಂ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಎಚ್. ಷಡಾಕ್ಷರಯ್ಯ, ತಹಸೀಲ್ದಾರ ಅನಿಲ್ ಕುಮಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಿತ್ರಿಕಿ ಸತೀಶ್, ಗುತ್ತಿಗೆದಾರ ಪಿ. ಜಯರಾಮ, ಅರಣ್ಯ ವಲಯ ಅರಣ್ಯಾಧಿಕಾರಿಗಳು, ಸಂಸದರ ಆಪ್ತ ಕಾರ್ಯದರ್ಶಿ ಎಸ್.ವಿ. ಹಿರೇಮಠ ಇತರರಿದ್ದರು.

ತೈಲ ಬೆಲೆ ಹೆಚ್ಚಳ ಖಂಡಿಸಿ ಬಿಜೆಪಿ ಪ್ರತಿಭಟನೆ

ಹರಪನಹಳ್ಳಿ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇತ್ತೀಚೆಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ತಾಲೂಕು ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿತಹಶೀಲ್ದಾರ ರವರಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ಹರಿಹರ ವೃತ್ತದಿಂದ ಹೊಸಪೇಟೆ ರಸ್ತೆ ಮೂಲಕ ಮೆರವಣಿಗೆ ಯೊಂದಿಗೆ ಪ್ರವಾಸಿ ಮಂದಿರ ವೃತ್ತಕ್ಕೆ ಆಗಮಿಸಿದ ಕಾರ್ಯಕರ್ತರು ಬಹಿರಂಗ ಸಭೆ ನಡೆಸಿದರು. ಹರಪನಹಳ್ಳಿ ತಾಲೂಕು ಬರಗಾಲದಿಂದ ಬಡವರು, ಮಧ್ಯಮ ವರ್ಗದ ಜನರು ಈಗಾಗಲೇ ತತ್ತರಿಸಿದ್ದಾರೆ, ಗಾಯದ ಮೇಲೆ ಬರೆ ಎಳೆದಂತೆ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿದ್ದಾರೆ ಇದು ಖಂಡನೀಯ ಎಂದು ಅವರು ಹೇಳಿದರು.

ಈಗಾಗಲೇ ತರಕಾರಿಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದಾರೆ, ಬಿಟ್ಟಿ ಭಾಗ್ಯಗಳಿಗೆ ನೀಡಲು ತೈಲ ದರ ಏರಿಸಿರುವುದು ಎಷ್ಟು ಸಾಧ್ಯ, ರಾಜ್ಯ ಸರಕಾರ ತೈಲ ಬೆಲೆ ಹೆಚ್ಚಳ ಮಾಡಿ ಜನಸಾಮಾನ್ಯರಿಗೆ ತುಂಬಾ ತೊಂದರೆ ಮಾಡಿದ್ದು, ಈಗ ಏರಿಸಿರುವ ದರವನ್ನು ಮೊದಲಿನ ದರಕ್ಕೆ ಇಳಿಸಬೇಕು, ಇಲ್ಲದಿದ್ದರೆ ಹೋರಾಟ ಮುಂದುವರೆಸುತ್ತೇವೆ ಎಂದು ಅವರು ಎಚ್ಚರಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ಕಲ್ಲಹಳ್ಳಿ ಲಕ್ಷ್ಮಣ, ಮುಖಂಡರಾದ ಆರುಂಡಿ ನಾಗರಾಜ, ಜಿಲ್ಲಾ ಬಿಜೆಪಿ ಪ್ರದಾನ ಕಾರ್ಯದರ್ಶಿ ಸಂಜೀವರೆಡ್ಡಿ, ಬಾಗಳಿ ಕೊಟ್ರೇಶಪ್ಪ, ತಾ.ಪಂ ಮಾಜಿ ಉಪಾಧ್ಯಕ್ಷ ಮಂಜನಾಯ್ಕ, ಒಂಕಾರಗೌಡ, ಹಲುವಾಗಲು ದ್ಯಾಮನಗೌಡ್ರು, ಕುಸುಮಾ ಜಗದೀಶ, ರೇಖಾ, ಪುರಸಭಾ ಸದಸ್ಯ ಮಂಜುನಾಥ ಇಜಂತಕರ್, ಎಸ್ಪಿ.ಲಿಂಬ್ಯಾನಾಯ್ಕ, ಮಲ್ಲೇಶ್, ನಾಗರಾಜ ಪಾಟೇಲ್, ಕಂಚಿಕೇರಿ ಶಾನುಬೋಗರ ಕೆಂಚಪ್ಪ, ಜಟ್ಟೆಪ್ಪ,ಕಣವಿಹಳ್ಳಿ ಮಂಜುನಾಥ, ವಕೀಲರಾದ ಪ್ರಾಣೇಶ, ಲಿಂಗಾನಂದ, ದೇವರಾಜ, ಚೆನ್ನನಗೌಡ ಇತರರು ಪಾಲ್ಗೊಂಡಿದ್ದರು.

ಕೃಷಿಕರ ಮೇಲೆ ಕಾಂಗ್ರೆಸ್ ಬರೆ

ಹಗರಿಬೊಮ್ಮನಹಳ್ಳಿ: ಪ್ರಸ್ತುತ ಮುಂಗಾರು ಮಳೆ ನಾಡಿನಾದ್ಯಂತ ಉತ್ತಮ ಮಳೆಯಿಂದ ರೈತ ಚಟುವಟಿಕೆಗಳು ಭರದಿಂದ ಸಾಗಿರುವಾಗ, ರಾಜ್ಯದ ಕಾಂಗ್ರೆಸ್ ಸರಕಾರ ಪೆಟ್ರೋಲ್, ಡಿಸೇಲ್ ಬೆಲೆ ಹೆಚ್ಚಿಸಿ ರೈತರಿಗೆ ಗಾಯದ ಮೇಲೆ ಬರೆ ಎಳೆಯುತ್ತಿದೆ ಎಂದು ಬಿಜೆಪಿ ಮುಖಂಡ ಮುಟುಗನಹಳ್ಳಿ ಕೊಟ್ರೇಶ್ ಆಕ್ರೋಶ ವ್ಯಕ್ತಪಡಿಸಿದರು.

ಅವರು ಪಟ್ಟಣದಲ್ಲಿ ಬಿಜೆಪಿ ಹಗರಿಬೊಮ್ಮನಹಳ್ಳಿ ಮಂಡಲದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ, ಈಗಾಗಲೇ ರೈತರ ಬೀಜ, ಗೊಬ್ಬರದ ಬೆಲೆಗಳನ್ನು ಹೆಚ್ಚಿಸಿ ರೈತರಿಗೆ ಹೊರೆಯಾಗಿದೆ. ಸದ್ಯ ಡಿಸೇಲ್ ಬೆಲೆ ಏರಿಸುತ್ತಿರುವುದರಿಂದ ಟ್ರ್ಯಾಕ್ಟರ್ ಉಳುಮೆ, ಬಿತ್ತನೆಗೆ ತೊಂದರೆಯಾಗುತ್ತದೆ. ರಾಜ್ಯ ಸರಕಾರ ಇದೇ ರೀತಿ ಪ್ರತಿಯೊಂದು ಅಗತ್ಯ ಸಾಮಾನುಗಳ ಬೆಲೆಗಳನ್ನು ಹೆಚ್ಚುಸುತ್ತಾ ಸಾಗಿದರೆ ಜನಸಾಮಾನ್ಯರ ಬದುಕು ಬೀದಿಗೆ ಬರುವುದು ಖಚಿತ ಎಂದರು.

ಈ ವೇಳೆ ಮುಖಂಡರಾದ ಬುಡ್ಡಿ ಬಸವರಾಜ್, ಟಿ.ಮಹೇಂದ್ರ, ಮಂಡಲ ಅಧ್ಯಕ್ಷ ಬೆಣ್ಣಿಕಲ್ಲು ಪ್ರಕಾಶ್ ಮಾತನಾಡಿದರು. ಇದಕ್ಕೂ ಮೊದಲು ಬಿಜೆಪಿ ಕಾರ್ಯಕರ್ತರು ಪಟ್ಟಣದ ಈಶ್ವರ ದೇವಸ್ಥಾನದಿಂದ ಕಾಲ್ನೆಡಿಗೆ ಮೂಲಕ ಬಸವೇಶ್ವರ ವೃತ್ತದವರೆಗೆ ರಾಜ್ಯ ಸರಕಾದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು. ಬಿಜೆಪಿ ಮಂಡಲ ಪ್ರದಾನ ಕಾರ್ಯದರ್ಶಿ ಕೋಗಳಿ ಹನುಮಂತಪ್ಪ, ಯುವ ಮೋರ್ಚಾದ ದಿವಾಕರ್ ಗೌಡ, ಎಚ್.ಮರಿಯಪ್ಪ, ಕರಿಬಸಪ್ಪ, ಲೋಕೇಶ್, ಅನಿಲ್ ಕುಮಾರ ಜಾಣ, ಭರ್ಮನಗೌಡ್ರು, ಜೋಗಿ ಹನುಮಂತಪ್ಪ, ನವೀನ್, ಶಾಂತಮ್ಮ, ಸಾಲ್ಮನಿ ನಾಗರಾಜ್, ರಾಮಣ್ಣ ಎ.ಕೆ, ಮಂಜುನಾಥ ಮತ್ತಿತರರಿದ್ದರು.

ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಮಂಡಲ ಕಾರ್ಯಕರ್ತರು ಪ್ರತಿಭಟನಾ ಮನವಿಯನ್ನು ತಹಸೀಲ್ದಾರ್‌ರವರಿಗೆ ಸಲ್ಲಿಸಿದರು.

ರೈತರು ಸ್ವೀಕರಿಸಿದ ರಸೀದಿ ಜೋಪಾನ: ಸಂತೋಷ್

ಬಳ್ಳಾರಿ: ಜಿಲ್ಲೆಯ ಮೆಣಸಿನಕಾಯಿ ಬೆಲೆಗಾರರು ಹಾಗೂ ನರ್ಸರಿ ಮಾಲೀಕರು ಉತ್ತಮ ಬೆಳೆಗಳನ್ನು ಪಡೆಯಲು ಸೂಕ್ತ ಕ್ರಮಗಳನ್ನು ಅನುಸರಿಸಬೇಕು ಎಂದು ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ತಿಳಿಸಿದ್ದಾರೆ. ಸೂಚನೆಗಳು: ರೈತರು ಪ್ರಸಕ್ತ ಸಾಲಿಗೆ ಮೆಣಸಿನಕಾಯಿ ಸಸಿಯನ್ನು ಜಿ.ಎಸ್.ಟಿ ನೊಂದಣಿಯನ್ನು ಹೊಂದಿರುವ ನರ್ಸರಿಗಳಿಂದಲೇ ಖರೀದಿಸಿ ನಾಟಿ ಮಾಡಿ, ಬಿಲ್ಲನ್ನು ಪಹಣಿಯಲ್ಲಿರುವ ರೈತರ ಹೆಸರಿಗೆ ಪಡೆಯುವುದು ಕಡ್ಡಾಯವಾಗಿದೆ. ರೈತ ಬಾಂಧವರು ಒಂದೇ ಕಂಪನಿಯ ಬೀಜಗಳ ಮೇಲೆ ಅವಲಂಭಿತವಾಗದೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಅಧಿಕ ಇಳುವರಿಯ ಇತರೆ ಕಂಪನಿಯ ಬೀಜಗಳನ್ನು ಸಹ ಖರೀದಿಸಿ ನಾಟಿ ಮಾಡಬಹುದು. ರೈತರು ಸ್ವೀಕರಿಸಿದ ರಸೀದಿಯನ್ನು ಬೆಳೆ ಮಾರಾಟ ಆಗುವವರೆಗೂ ಜೋಪಾನವಾಗಿ ಇಟ್ಟುಕೊಳ್ಳುವುದು. ನರ್ಸರಿಗಳಲ್ಲಿ ರೈತರಿಂದ ಬೀಜ ಪಡೆದಿರುವ ಮತ್ತು ಸಸಿಗಳನ್ನು ವಿತರಿಸಿದ ದಿನಾಂಕಗಳ ವಹಿಯನ್ನು ಸಹ ನಿರ್ವಹಿಸಬೇಕು. ಉಪಯೋಗಿಸಿ ಸದರಿ ಬಿಲ್ಲುಗಳ ವಿವರವನ್ನು ವಹಿಗಳಲ್ಲಿ ನಿರ್ವಹಿಸುವುದು. ನರ್ಸರಿ ಮಾಲಿಕರು ಸಸಿಗಳನ್ನು ಉತ್ಪಾದಿಸುವ ಸಮಯದಲ್ಲಿ ರೈತರಿಂದ ಯಾವ ಕಂಪನಿಯ ಬೀಜ ಖರಿದಿಸಿರುತ್ತಾರೆ ಎಂಬುವುದರ ಬಗ್ಗೆ ಖತರಿಪಡಿಸಿಕೊಳ್ಳಲು ಬೀಜ ಖರಿದಿಸಿರುವ ಜಿ.ಎಸ್.ಟಿ ಸಂಖ್ಯೆ ಹೊಂದಿರುವ ಬಿಲ್ಲುಗಳ ಜೆರಾಕ್ಸ್ ಪ್ರತಿಯನ್ನು ಪಡೆದ ನಂತರವೇ ತಮ್ಮ ನರ್ಸರಿಯಲ್ಲಿ ಬೀಜವನ್ನು ಸಸಿ ತಯಾರಿಸಲು ನಾಟಿಮಾಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿತ್ಯ ಬಳಕೆ ವಸ್ತುಗಳು ದುಬಾರಿಯಾಗಲಿವೆ

ಹೂವಿನಹಡಗಲಿ: ಪೆಟ್ರೋಲ್ ಡಿಸೇಲ್ ಬೆಲೆ ಏರಿಕೆಯಿಂದ ನಿತ್ಯ ಬಳಕೆ ವಸ್ತುಗಳು ದುಬಾರಿಯಾಗಿ ಜನಸಾಮಾನ್ಯರ ಬದುಕು ದುಸ್ತರವಾಗುತ್ತದೆ ಎಂದು ಶಾಸಕ ಕೃಷ್ಣನಾಯ್ಕ ಹೇಳಿದರು.

ಪಟ್ಟಣದಲ್ಲಿ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಖಂಡಿಸಿ ಸಿದ್ದರಾಮಯ್ಯ ಸರಕಾರದ ವಿರುದ್ಧ ಹಡಗಲಿ ಬಿಜೆಪಿ ಮಂಡಲವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಯಿಂದ ದಿನನಿತ್ಯದ ದಿನಸಿ ಸಾಮಗ್ರಿಗಳಿಂದ ಹಿಡಿದು ತರಕಾರಿ ಹಣ್ಣು ಪ್ರತಿಯೊಂದು ವಸ್ತುವಿನ ಬೆಲೆ ಏರಿಕೆಯಾಗುತ್ತದೆ, ಇದರಿಂದ ಜನಸಾಮನ್ನರು ಬದುಕು ಬಹಳ ದುಸ್ತರವಾಗಲಿದೆ ಎಂದರು. ಪಂಚಭಾಗ್ಯಗಳಿಂದ ರಾಜ್ಯದ ಸ್ಥಿತಿ ಅದೋಗತಿಗೆ ತಲುಪಿ ರಾಜ್ಯ ಸರಕಾರ ದಿವಾಳಿಯ ಹಂತಕ್ಕೆ ಹೋಗಿದೆ. ಎಸ್ಸಿ-ಎಸ್ಟಿ ಅನುದಾನವನ್ನು ಪಂಚಭಾಗ್ಯಗಳಿಗೆ ಬಳಸಿ ಈ ಸಮುದಾಯದ ಜನರ ಬಾಯಿಗೆ ಮಣ್ಣು ಹಾಕಿದ್ದಾರೆ ಎಂದ ಅವರು ಎಸ್ಟಿ ನಿಗಮದಲ್ಲಿ ನಡೆದಂತಹ ಹಗರಣ ಪ್ರವಾಸೋದ್ಯಮ ಇಲಾಖೆಯಲ್ಲಿ ನಡೆದಿದೆ ಎಂದು ಕೃಷ್ಣನಾಯ್ಕ ಆರೋಪಿಸಿದರು. ರಾಜ್ಯದ 164 ಕ್ಷೇತ್ರಗಳಲ್ಲಿ ಜನ ಕಾಂಗ್ರೆಸ್ ವಿರುದ್ಧ ಮತ ಚಲಾಯಿಸಿದ್ದಾರೆ ಸದ್ಯದಲ್ಲೇ ಕಾಂಗ್ರೆಸ್ ಸರ್ಕಾರ ಬಹುಮತವನ್ನು ಕಳೆದುಕೊಳ್ಳಲಿದೆ ಎಂದು ಭವಿಷ್ಯ ನುಡಿದರು. ಪ್ರತಿಭಟನೆಯಲ್ಲಿ ಜೆಡಿಎಸ್ ನಾಯಕರಾದ ಕೆ ಪುತ್ರೇಶ್, ಬಿಜೆಪಿ ಮಂಡಲ ಅಧ್ಯಕ್ಷರಾದ ಹಣ್ಣಿ ಶಶಿಧರ್, ಮುಖಂಡರಾದ ಮೋಹನ್ ರೆಡ್ಡಿ, ಎಂ.ಪರಮೇಶ್ವರಪ್ಪ, ಅಣ್ಣಿಗೇರಿ ವೀರೇಶ್, ವಾರದ್ ಗೌಸ್‌ಮೋದ್ದೀನ್, ಮುಖಂಡರು ಭಾಗವಹಿಸಿದ್ದರು.

ಹೂವಿನಹಡಗಲಿ ಪಟ್ಟಣದಲ್ಲಿ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಖಂಡಿಸಿ ಸಿದ್ದರಾಮಯ್ಯ ಸರಕಾರದ ವಿರುದ್ಧ ಹಡಗಲಿ ಬಿಜೆಪಿ ಮಂಡಲವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಶಾಸಕ ಕೃಷ್ಣನಾಯ್ಕ ಮಾತನಾಡಿದರು.

> ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಜನರ ವಿಶ್ವಾಸವನ್ನು ಕಳೆದುಕೊಂಡಿದೆ.
> - ನಂದಿಹಳ್ಳಿ ಹಾಲಪ್ಪ, ಮಾಜಿ ಶಾಸಕ

ಯೋಗ ದಿನಾಚರಣೆ ಸಿಎಂ ರಿಂದ ಚಾಲನೆ

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆಯುಷ್ ಇಲಾಖೆ ಸಹಯೋಗದಲ್ಲಿ ಸ್ವಂತ ಹಾಗೂ ಸಮಾಜಕ್ಕಾಗಿ ಯೋಗ ಎಂಬ ಧ್ಯೇಯವಾಕ್ಯದೊಂದಿಗೆ 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಇಂದು ಸಂಡೂರು ತಾಲೂಕಿನ ತೋರಣಗಲ್ಲಿನ ವಿದ್ಯಾನಗರದ ಜೆಎಸ್‌ಡಬ್ಲ್ಯು ಟೌನ್‌ಶಿಪ್‌ನಲ್ಲಿ ಏರ್ಪಡಿಸಲಾಗಿದೆ. ಇಂದು ಬೆಳಗ್ಗೆ 6.15 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆವಹಿಸುವರು. ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಘನ ಉಪಸ್ಥಿತಿ ಇರುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶಾಸಕ ಜೆ.ಎನ್. ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ ರಾಂ ನಾಗರಾಜ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ, ಆಯುಷ್ ಇಲಾಖೆ ಆಯುಕ್ತ ಬಿ.ಶ್ರೀನಿವಾಸುಲು, ಪ್ರಶಾಂತ್ ಕುಮಾರ್ ಮಿಶ್ರಾ, ರಂಜಿತ್ ಕುಮಾರ್ ಬಂಡಾರು, ಅಧಿಕಾರಿ ಡಾ.ಸರಳಾದೇವಿ ಬಿ,ಎಸ್., ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಕೊಪ್ಪಳ: ನಗರದ ಜೆಸ್ಕಾಂ ಕಚೇರಿ ವ್ಯಾಪ್ತಿಯ 110/33/11 ಕೆ.ವಿ. ಬೆಟಗೇರ ವಿದ್ಯುತ್ ಕೇಂದ್ರದಲ್ಲಿ ಮೊದಲನೆ ತ್ರೈಮಾಸಿಕ ಕೆಲಸ ನಡೆಸುತ್ತಿರುವ ಪ್ರಯುಕ್ತ 110/33/11 ಕೆ.ವಿ. ವಿದ್ಯುತ್ ವ್ಯತ್ಯಯವಾಗಲಿದೆ. ಕೇಂದ್ರ ಬೆಟಗೇರಾ ಹಾಗೂ 33/11 ಕೆ.ವಿ. ವಿದ್ಯುತ್ ಕೇಂದ್ರ ಅಳವಂಡಿಯಿಂದ ಸರಬರಾಜು ಆಗುವ ಎಲ್ಲಾ 33 ಕೆ.ವಿ. ಹಾಗೂ 11 ಕೆ.ವಿ ಮಾರ್ಗಗಳಿಗೆ ಒಳಪಡ ಎಲ್ಲಾ ಗ್ರಾಮಗಳಲ್ಲಿ ಜೂ. 21 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕು. ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕೆಲಸ ಕಾರ್ಯಗಳನ್ನು ಮಾಡಬಾರದು. ಒಂದು ವೇಳೆ ವಿದ್ಯುತ್ ಅಪಘಾತ ಸಂಭವಿಸಿದಲ್ಲಿ ಕಂಪನಿಯು ಜವಾಬ್ದಾರಿಯಲ್ಲ ಎಂದು ಕೊಪ್ಪಳ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಕ್ಕುಪತ್ರ ನೀಡುವುದಾಗಿ ಭರವಸೆ: ಜಿಪಂ ಸಿಇಒ

ಕೂಕನೂರ: ಸರಕಾರ ನೀಡಿದ ನಿವೇಶನಕ್ಕೆ 20 ವರ್ಷ ಕಳೆದರೂ ಹಕ್ಕುಪತ್ರ ನೀಡದ ಕ್ರಮ ಖಂಡಿಸಿ, ತಾಲೂಕಿನ ಮಂಗಳೂರು ಗ್ರಾಮ ಪಂಚಾಯತ್ ಮುಂದೆ ನೊಂದ ಕುಟುಂಬಗಳು ಗುರುವಾರ ಪ್ರತಿಭಟಿಸಿದರು. ಪ್ರತಿಭಟನಾ ಸ್ಥಳಕ್ಕೆ ಕೊಪ್ಪಳ ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಆಗಮಿಸಿ ಮನವಿ ಸ್ವೀಕರಿಸಿ, ಸುಮಾರು ವರ್ಷಗಳಿಂದ ಹಕ್ಕುಪತ್ರ ಸಮಸ್ಯೆ ಇರುವುದು ನನ್ನ ಗಮನಕ್ಕೆ ಬಂದಿದೆ. ಕೆಲವೇ ದಿನಗಳಲ್ಲಿ ಅಲ್ಲಿಯ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಈಗಾಗಲೇ ಸರಕಾರದ ಗಮನಕ್ಕೆ ತಂದಿದ್ದೇವೆ ಮಾನ್ಯ ಶಾಸಕರು ಮತ್ತು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಹಕ್ಕು ಪತ್ರ ನೀಡುವಂತ ಕೆಲಸ ಮಾಡುತ್ತೇವೆ ಜತೆಗೆ ಅಲ್ಲಿಯ ಮೂಲಭೂತ ಸೌಕರ್ಯಗಳನ್ನು ಕೂಡ ಅಚ್ಚುಕಟ್ಟಾಗಿ ನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸುವೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೂಡ ಮಾಡುತ್ತೇವೆ ನಿಮ್ಮ ಒಂದು ಬೇಡಿಕೆಯನ್ನು ಆದಷ್ಟು ಬೇಗ ಈಡೇರಿಸುತ್ತೇವೆ ಎಂದರು.

ಕೆರೆಗೆ ನೀರು ಬಿಡಲು ಅಗತ್ಯ ಕ್ರಮ ಕೈಗೊಳ್ಳಿ

ಮಾನ್ವಿ: ಪಟ್ಟಣಕ್ಕೆ ಕುಡಿವ ನೀರನ್ನು ಪೂರೈಸುವುದಕ್ಕಾಗಿ ರಬ್ಬಣಕಲ್‌ನಲ್ಲಿ 86 ಎಕರೆಯಲ್ಲಿ ನಿರ್ಮಿಸಿರುವ ಕೆರೆಯನ್ನು ತುಂಬಿಸುವುದಕ್ಕೆ ತುಂಗಭದ್ರ ಜಲಾಶಯದಿಂದ ಕಾಲುವೆ ಮೂಲಕ ನೀರನ್ನು ಬಿಡಲಾಯಿತು. ಪುರಸಭೆ ಮುಖ್ಯಾಧಿಕಾರಿ ಗಂಗಾಧರ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರಾದ ಮಹೇಶ್ ಹಾಗೂ ಪುರಸಭೆಯ ಸಿಬ್ಬಂದಿ ಕಾಲುವೆಯಿಂದ ಕೆರೆಗೆ ನೀರನ್ನು ಬಿಡುವುದಕ್ಕೆ ಶ್ರಮಿಸುತ್ತಿದ್ದಾರೆ. ತಹಸೀಲ್ದಾರ್ ರಾಜು ಪಿರಂಗಿ ರಬ್ಬಣಕಲ್ ಕೆರೆಯನ್ನು ತುಂಬಿಸುತ್ತಿರುವುದನ್ನು ಪರಿಶೀಲಿಸಿ ಮಾತನಾಡಿ, ಕಾಲುವೆಯಿಂದ ಕುಡಿವ ನೀರಿಗಾಗಿ ನೀರನ್ನು ಕೆಲವೇ ದಿನಗಳ ಕಾಲ ಮಾತ್ರ ಬಿಡುತ್ತಿರುವುದರಿಂದ ಪುರಸಭೆ ಸಿಬ್ಬಂದಿ ಹಾಗೂ ಅಧಿಕಾರಿಗಳು ಕೆರೆ ತುಂಬಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್, ಕಂದಯ ನೀರಿಕ್ಷಕ ಚರಣ್ ಸಿಂಗ್, ಯೋಜನ ನಿರ್ದೇಶಕ ಜಗದೀಶ್ ಗಂಗಣ್ಣ ನವರು ಸೇರಿದಂತೆ ಪುರಸಭೆಯ ಸಿಬ್ಬಂದಿ ಇದ್ದರು.

ಕುಷ್ಟಗಿ ಅಭಿವೃದ್ಧಿಗೆ ಸದಾ ಸಿದ್ಧ : ಶಾಸಕ

ಕುಷ್ಟಗಿ: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಲೋಕೋಪಯೋಗಿ ಇಲಾಖೆ ಸಹಯೋಗದಲ್ಲಿ ಎರಡು ಶಾಲಾ ಕೊಠಡಿ ಮತ್ತು ನಿರ್ಮಿತಿ ಕೇಂದ್ರ ಕುಷ್ಟಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ 28 ಲಕ್ಷ ರು. ವೆಚ್ಚದಲ್ಲಿ ಪಟ್ಟಣದ ವಾರ್ಡ್ ನಂಬರ 23ರ ತೆಗ್ಗಿನ ಓಣಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕುಷ್ಟಗಿಯ ಎರಡು ಶಾಲಾ ಕೊಠಡಿಯ ಭೂಮಿ ಪೂಜೆ ಕಾರ್ಯಕ್ರಮ ಉದ್ಘಾಟನೆಯನ್ನು ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಉದ್ಘಾಟನೆ ಮಾಡಿದರು. ಈ ವೇಳೆ ಮಾಜಿ ಪುರಸಭೆ ಅಧ್ಯಕ್ಷ ಹಾಗೂ ಹಾಲಿ ಪುರಸಭೆ ಸದಸ್ಯ ಜಿ.ಕೆ.ಹಿರೇಮಠ, ಪುರಸಭೆ ಸದಸ್ಯ ಮಾಹಾಂತೇಶ ಕಲಬಾವಿ, ಜಯತೀರ್ಥ ಆಚಾರ್, ಕ್ಷೇತ್ರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಸುರೇಂದ್ರ ಕಾಂಬಳೆ, ನಿರ್ಮಿತಿ ಕೇಂದ್ರ ಎಂಜಿನಿಯರ್ ಆದೇಶ, ಬಿ.ಆರ್.ಸಿ ಮೈಬುಸಾಬ, ಮುಖಂಡ ಪರುಶುರಾಮ ನಾಗರಾಳ, ಹುಸೇನಸಾಬ, ದೇವರಾಜ ಆಜಾಳ, ಚಂದ್ರಕಾಂತ ವಡಗೇರಿ ಸೇರಿದಂತೆ ಉಪಸ್ಥಿತರಿದ್ದರು.

ವಿ+ ಸೋಮವಾರ

ಕಾರಹುಣ್ಣಿಮೆ ಹಬ್ಬದ ಸಂಭ್ರಮ ಸಡಗರ | ಮೂರು ದಿನದ ಹಬ್ಬಕ್ಕೆ ಭರದ ಸಿದ್ಧತೆ

ಮುಂಗಾರು ಸಾಂಸ್ಕೃತಿಕ ಹಬ್ಬ ಆರಂಭ

ರಾಯಚೂರು: ಪ್ರತಿ ವರ್ಷದಂತೆ ಮುಂಗಾರು ಸಾಂಸ್ಕೃತಿಕ ಹಬ್ಬ ಗುರುವಾರ ಬೆಳಗ್ಗೆಯಿಂದ ಪ್ರಾರಂಭವಾಗಲಿದ್ದು ಸಕಲ ಸಿದ್ದತೆ ಮೈದಾನವನ್ನು ಕಲ್ಲೇಳುವ ಸ್ಪರ್ಧೆಗೆ ಸಿದ್ದಗೊಳಿಸಲಾಗಿದೆ. ಪೂರ್ವ ಸಿದ್ಧತೆಗಳನ್ನು ಮಾಜಿ ಶಾಸಕ ಎಂ. ಪಾಪರೆಡ್ಡಿ ಹಾಗೂ ಮುನ್ನೂರು ಕಾಪು ಸಮಾಜದ ಮುಖಂಡರುಗಳು ಪರಿಶೀಲನೆ ನಡೆಸಿದರು.

1) ಮುಂಗಾರು ಸಾಂಸ್ಕೃತಿಕ ರಾಯಚೂರು ಹಬ್ಬದ ಮೊದಲ ದಿನವಾದ ಗುರುವಾರ ರಾಜೇಂದ್ರ ಗಂಜ್ ಆವರಣದಲ್ಲಿ ಕರ್ನಾಟಕ ರಾಜ್ಯಕ್ಕೆ ಸೀಮಿತವಾದ 1 ಟನ್ ಭಾರದ ಕಲ್ಲು ಎಳೆಯುವ ಸ್ಪರ್ಧೆಗೆ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಚಾಲನೆ ನೀಡಲಿದ್ದು ಮಟಮಾರಿಯ ಶ್ರೀ ವೀರಭದ್ರ ಶಿವಾಚಾರ್ಯರು, ಸೋಮವಾರಪೇಟೆಯ ಶ್ರೀ ಅಭಿನವ ರಾಚೋಟಿ ವೀರಶಿವಾಚಾರ್ಯರು, ಶಂಭುಸೋಮನಾಥ ಶೀವಾಚಾರ್ಯರು ಸಾನ್ನಿಧ್ಯವಹಿಸಲಿದ್ದು ಶಾಸಕರು, ವಿವಿಧ ಸಮಾಜದ ಮುಖಂಡರು, ನಗರಸಭೆ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಈ ಬಾರಿ ಭಾರ ಎಳೆಯುವ ಏಳು ಜೋಡೆತ್ತುಗಳಿಗೆ ಪ್ರಥಮ ಬಹುಮಾನವಾಗಿ 65 ಸಾವಿರ, ದ್ವಿತೀಯ 55 ಸಾವಿರ, ತೃತೀಯ 45, 4ನೇ ಸ್ಥಾನ ಪಡೆದ ಎತ್ತುಗಳಿಗೆ 35 ಸಾವಿರ, 5ನೇ ಬಹುಮಾನ ಪಡೆದ ಎತ್ತುಗಳಿಗೆ 30, 6ನೇ ಬಹುಮಾನವಾಗಿ 15 ಸಾ ಹಾಗೂ 7ನೇ ಬಹುಮಾನವಾಗಿ 10 ಸಾವಿರ ನಗದು, ಟ್ರೋಫಿ ನೀಡಲಾಗುವುದು ಎಂದರು.

ಗುರುವಾರ ಸಂಜೆ ನಗರದ ಶ್ರೀವೀರಾಂಜನೇಯ್ಯ ಕಲ್ಯಾಣ ಮಂಟಪದಲ್ಲಿ ನೃತ್ಯ ರೂಪಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಶಾಸಕ ಡಾ. ಶಿವರಾಜ ಪಾಟೀಲ ಚಾಲನೆ ನೀಡಲಿದ್ದು, ಶ್ರೀಶಾಂತಮಲ್ಲ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು, ಸಮಾಜದ ಅಧ್ಯಕ್ಷ ಬೆಲ್ಲಂ ನರಸರೆಡ್ಡಿ ಸೇರಿ ಅನೇಕರು ಭಾಗವಹಿಸಲಿದ್ದಾರೆ.

ಜಿಲ್ಲೆಯಲ್ಲಿ ಮೂರು ದಿನ ಎಪಿಎಂಸಿ ಆವರಣದಲ್ಲಿ ಪ್ರತಿ ವರ್ಷದಂತೆ ನಡೆಯುವ ಮುಂಗಾರು ಸಾಂಸ್ಕೃತಿಕ ಹಬ್ಬ ಪ್ರಾರಂಭವಾಗಿದೆ.

ಕರ್ನಾಟಕದ ಧಾರವಾಡ, ಬೆಳಗಾವಿ, ಬೆಂಗಳೂರು, ಮಹಾರಾಷ್ಟ್ರದ ಕಲಾ ತಂಡಗಳು ಜತೆಗೆ ಸ್ಪರ್ಧೆಗಾಗಿ ನಗರದ 13 ಕಾಲೇಜಿನ ವಿದ್ಯಾರ್ಥಿಗಳ ತಂಡ ಭಾಗವಹಿಸಲಿವೆ ಎಂದರು.

2) ನಾಳೆ ಅಖಿಲ ಭಾರತ ಮಟ್ಟದ 2 ಟನ್ ಭಾರದ ಕಲ್ಲು ಎಳೆಯುವ ಸ್ಪರ್ಧೆಯ ಸಾನ್ನಿಧ್ಯವನ್ನು ಹರಿಹರಪುರದ ಶ್ರೀ ಜಗದ್ಗುರು ಶಂಕರಾವಾರ್ಯ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮೀಜಿ ಗಬ್ಬೂರಿನ ಬೂದಿಬಸವೇಶ್ವರ ಶಿಚಾಚಾರ್ಯರು, ನವಲಕಲ್‌ನ ಅಭಿನವ ಸೋಮನಾಥ ಶಿವಾಚಾರ್ಯರು ವಹಿಸಲಿದು ಸಚಿವ ಎನ್.ಎಸ್.ಬೋಸರಾಜ್ ಉದ್ಘಾಟಿಸಲಿದ್ದಾರೆ. ಜಿಲ್ಲೆಯ ಶಾಸಕರು, ಸಮಾಜದ ಮುಖಂಡರು, ಜನಪ್ರತಿನಿಧಿಗಳು ಭಾಗವಹಿಸುವರು.

ಭಾರ ಎಳೆದ ಎತ್ತುಗಳಿಗೆ ಮೊದಲ ಬಹುಮಾನವಾಗಿ 80 ಸಾವಿರ ದ್ವಿತೀಯ 65 ಸಾವಿರ, ತೃತೀಯ 55 ಸಾವಿರ, 4ನೇ ಸ್ಥಾನ ಪಡೆದ ಎತ್ತುಗಳಿಗೆ 45, 5ನೇ ಬಹುಮಾನ ಪಡೆದ ಎತ್ತುಗಳಿಗೆ 40 ಸಾವಿರ,, 6ನೇ ಬಹುಮಾನವಾಗಿ 30 ಸಾ ಹಾಗೂ 7ನೇ ಬಹುಮಾನವಾಗಿ 20 ಸಾವಿರ ನಗದು, ಟ್ರೋಫಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಕುಲದೇವತೆ ಶ್ರೀ ಮಾತಾ ಲಕ್ಷ್ಮಮದೇವಿ ಮೂರ್ತಿಯ ಅಂಬಾರಿ ಹಾಗೂ ಎತ್ತುಗಳ ಜತೆ ಹರಿಹರಪುರದ ಶ್ರೀ ಜಗದ್ಗುರು ಶಂಕರಾವಾರ್ಯ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮೀಜಿಯವರ ಬೃಹತ್ ಮೆರವಣಿಗೆಗೆ ಸಚಿವ ಎನ್.ಎಸ್.ಬೋಸರಾಜ್ ಚಾಲನೆ ನೀಡಲಿದ್ದು ರಾಜೇಂದ್ರ ಗಂಜ್‌ನಿಂದ ನಗರದ ಪ್ರಮುಖ ರಸ್ತೆಯಲ್ಲಿ ಜರುಗಲಿದೆ ಎಂದರು. ಈ ಮೆರವಣಿಗೆಯಲ್ಲಿ ತಮಿಳುನಾಡಿನ 3, ಕೇರಳದ 2 ಸೇರಿ ರಾಜ್ಯದ ಎಲ್ಲ ಜಿಲ್ಲೆಯ ತಲಾ ಒಂದು ಕಲಾತಂಡದಂತೆ 40 ಕಲಾತಂಡಗಳು ಭಾಗವಹಿಸಲಿದ್ದು. ರಾಯಚೂರಿನಲ್ಲಿ 40 ಕಲಾತಂಡ ಭಾಗಿಯಾಗಲಿವೆ. ಆ ಮೂಲಕ ಕಲಾವಿದರಿಗೆ ಪ್ರೋತ್ಸಾಹದ ರೂಪದಲ್ಲಿ ಆರ್ಥಿಕ ಸಹಾಯವೂ ಸಮಾಜದಿಂದ ಮಾಡಲಾಗುತ್ತಿದೆ ಎಂದರು.

ನಾಳೆ ಸಂಜೆ ನಗರದ ನಿಜಲಿಂಗಪ್ಪ ಕಾಲೋನಿಯ ಗಣೇಶಕಟ್ಟೆಯ ಮುಂಭಾಗದ ಆವರಣದಲ್ಲಿ ನೃತ್ಯ ರೂಪಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಶಾಸಕ ಡಾ.ಶಿವರಾಜ ಪಾಟೀಲ ಚಾಲನೆ ನೀಡಲಿದ್ದು, ಶ್ರೀ ಶಾಂತಮಲ್ಲ ಶಿವಾಚಾರ್ಯರು, ಸೋಮವಾರಪೇಟೆಯ ಶ್ರೀ ಅಭಿನವ ರಾಚೋಟಿ ವೀರ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು, ಸಮಾಜದ ಅಧ್ಯಕ್ಷ ಬೆಲ್ಲಂ ನರಸರೆಡ್ಡಿ ಸೇರಿ ಅನೇಕರು ಭಾಗವಹಿಸಲಿದ್ದಾರೆ. ತಮಿಳುನಾಡು, ಮಣಿಪುರ, ರಾಜಸ್ತಾನ, ಹೈದ್ರಾಬಾದ್, ಬಾಂಬೆ ಹಾಗೂ ಓರಿಸ್ಸಾದ ಕಲಾವಿದರು ಕಲಾ ಪ್ರದರ್ಶನ ನೀಡಲಿದ್ದಾರೆಂದು ಹೇಳಿದರು.

3) ನಾಡಿದ್ದು ಜೂ.23 ರಂದು ಚಿಕ್ಕಸೂಗೂರು ಕೊಡಂಗಲ್ ಶ್ರೀ ಜಗದ್ಗುರು ಡಾ. ಸಿದ್ದಲಿಂಗಮಹಾಸ್ವಾಮೀಜಿಗಳ ಸಾನ್ನಿಧ್ಯದಲ್ಲಿ 2ವರೇ ಟನ್ ಭಾರದ ಕಲ್ಲು ಎಳೆಯುವ ಸ್ಪರ್ಧೆಗೆ ಸಂಸದ ಜಿ.ಕುಮಾರ ನಾಯಕ ಉದ್ಘಾಟಿಸಲಿದ್ದಾರೆ. ಗದ್ವಾಲ್ ಶಾಸಕ ಬಂಡ ಕೃಷ್ಣ ಮೋಹನರೆಡ್ಡಿ, ಮಕ್ತಲ್ ಶಾಸಕ ವಾಕಿಟಿ ಶ್ರೀಹರಿ, ಬಾಲಂಕು ಆಸ್ಪತ್ರೆಯ ಡಾ.ವಿ.ಶ್ರೀಧರರೆಡ್ಡಿ ಸೇರಿ ಹಲವರು ಭಾಗವಹಿಸುವರು.

ಭಾರ ಎಳೆದ ಎತ್ತುಗಳಿಗೆ ಮೊದಲ ಬಹುಮಾನವಾಗಿ 90 ಸಾವಿರ ದ್ವಿತೀಯ 75 ಸಾವಿರ, ತೃತೀಯ 65 ಸಾವಿರ, 4ನೇ ಸ್ಥಾನ ಪಡೆದ ಎತ್ತುಗಳಿಗೆ 55, 5ನೇ ಬಹುಮಾನ ಪಡೆದ ಎತ್ತುಗಳಿಗೆ 45 ಸಾವಿರ,, 6ನೇ ಬಹುಮಾನವಾಗಿ 35 ಸಾ ಹಾಗೂ 7ನೇ ಬಹುಮಾನವಾಗಿ 20 ಸಾವಿರ ನಗದು, ಟ್ರೋಫಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

> ರೈತರ ಕೃಷಿಗೆ ಬೆನ್ನೆಲುಬಾಗಿರುವ ಎತ್ತುಗಳ ಉಳಿಸಿ ಬೆಳೆಸುವ ಪ್ರೋತ್ಸಾಹದ ಹಿನ್ನೆಲೆ ಭಾರ ಎಳೆಯುವ ಎತ್ತುಗಳಿಗೆ ಬಹುಮಾನ ನೀಡಲು 10 ಲಕ್ಷ ಕಲಾತಂಡಗಳಿಗೆ 15 ಲಕ್ಷ ಖರ್ಚು ಸೇರಿ ಮೂರು ದಿನಗಳ ಉತ್ಸವಕ್ಕೆ ಸುಮಾರು 50 ಲಕ್ಷ ವೆಚ್ಚವಾಗಲಿದ್ದು ಎಲ್ಲವನ್ನೂ ಸಮಾಜದ ಜನರೇ ದೇಣಿಗೆ ನೀಡಿ ಸಹಾಯ ಮಾಡುತ್ತಿದ್ದಾರೆ.
>
> - ಎಂ ಪಾಪರೆಡ್ಡಿ ಮಾಜಿ ಶಾಸಕರು

ಮಧ್ಯಾಹ್ನ 3ಕ್ಕೆ ಮಾತಾ ಮಹಾಲಕ್ಷ್ಮೀ ದೇವಸ್ಥಾನದ ಬಳಿ ಕಲ್ಲು ಗುಂಡು, ಉಸುಕಿನ ಚೀಲ ಎತ್ತಲು ವ್ಯವಸ್ಥೆ ಮಾಡಿದ್ದು, ಸಂಜೆ 5ಕ್ಕೆ ಆಂಧ್ರ, ಕರ್ನಾಟಕ, ಮಹಾರಾಷ್ಟ್ರದ ಕುಸ್ತಿ ಪಟುಗಳಿಂದ ಕುಸ್ತಿ ಪಂದ್ಯಾವಳಿ ಇದ್ದು ಗೆದ್ದವರಿಗೆ 1 ಲಕ್ಷ ಬಹುಮಾನ ನೀಡಲು ನಿರ್ಧರಿಸಲಾಗಿದೆ. ನಾಲ್ಕು ಕುಸ್ತಿ ಪಂದ್ಯಾವಳಿ ಜರುಗಲಿದ್ದು, ಮೊದಲ ಬಹುಮಾನ ಪಡೆದವರಿಗೆ 50 ಸಾವಿರ, 5ರಿಂದ 10 ಸಾವಿರದ ವರೆಗೆ ಆರ್ಥಿಕ ಸಹಾಯ ನೀಡಿ ಕಲಾವಿದರ ಪ್ರೋತ್ಸಾಹಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ತಯಾರಿಯಲ್ಲಿ ಅಧ್ಯಕ್ಷ ಬೆಲ್ಲಂ ನರಸರೆಡ್ಡಿ, ಜಿ.ಬಸವರಾಜರೆಡ್ಡಿ, ಭಂಗಿ ನರಸರೆಡ್ಡಿ, ಪಿ.ಚಂದ್ರಶೇಖರರೆಡ್ಡಿ, ಎನ್.ಶ್ರೀನಿವಾಸ ರೆಡ್ಡಿ, ಎನ್. ಶೇಖರರೆಡ್ಡಿ, ಪಿ.ರಾಜೇಂದ್ರರೆಡ್ಡಿ, ಜಿ.ನರಸರೆಡ್ಡಿ, ಜನಾರ್ಧನರೆಡ್ಡಿ, ಡ್ಯಾಡಿ ವೀರೇಶರೆಡ್ಡಿ, ಕೆ. ಜಂಪಾರೆಡ್ಡಿ, ಪಿ.ಮಲ್ಲೇಶ ಇದ್ದರು.

ಮಾನ್ವಿ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ರಾಜ್ಯ ಸರಕಾರವು ಇಂಧನ ಬೆಲೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಬಹುಜನ ಸಮಾಜ ಪಾರ್ಟಿ ತಾಲೂಕು ಘಟಕ ವತಿಯಿಂದ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ವಿರುಪನಗೌಡ ಜಟ್ಟಿ, ಗಂಗಾಧರ, ರಮೇಶ್, ಬೆಟ್ಟಪ್ಪನಾಯಕ್ ಸೇರಿದಂತೆ ಇದ್ದರು.

ನಟ ದರ್ಶನ್, ಗ್ಯಾಂಗ್ ಗಲ್ಲು ಶಿಕ್ಷೆಗೆ ಆಗ್ರಹ

ಗಂಗಾವತಿ: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಲು ಆಗ್ರಹಿಸಿ, ನಗರದ ತಹಸೀಲ್ದಾರ್ ಕಚೇರಿ ಮುಂದೆ ತಾಲೂಕು ನಾಗರೀಕ ಸಮಾಜದಿಂದ ಗುರುವಾರ ಪ್ರತಿಭಟಿಸಿ, ತಹಸೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಜಂಗಮ ಸಮಾಜದ ಮುಖಂಡ ತಿಪ್ಪೇರುದ್ರಸ್ವಾಮಿ ಮಾತನಾಡಿ, ರೇಣುಕಾ ಸ್ವಾಮಿಯನ್ನು ರಾತ್ರಿ ಇಡೀ ಚಿತ್ರಹಿಂಸೆ ಕೊಟ್ಟು, ಆತನನ್ನು ಹತ್ಯೆ ಮಾಡಲಾಗಿದೆ. ಇದು ನಾಗರೀಕ ಸಮಾಜ ತಲೆತಗ್ಗಿಸುವ ವಿಚಾರ. ಹತ್ಯೆ ಆರೋಪಿಗಳಿಗೆ ಗಲ್ಲು ಶಿಕ್ಷೆ ಆಗಬೇಕು. ರೇಣುಕಾಸ್ವಾಮಿ ಪತ್ನಿಗೆ ಸರಕಾರಿ ಉದ್ಯೋಗ ನೀಡಬೇಕು ಎಂದು ಮನವಿ ಮಾಡಿದರು.

ರೇಣುಕಾ ಸ್ವಾಮಿ ಪವಿತ್ರ ಗೌಡಗೆ ಅಶ್ಲೀಲ ಮೆಸೇಜ್ ಮಾಡಿದ್ದಾರೆ ಎಂಬ ಕಾರಣಕ್ಕೆ ಹತ್ಯೆ ಮಾಡಿದ್ದು ಸರಿಯಲ್ಲ. ಆತನಿಗೆ ಬುದ್ಧಿ ಹೇಳಿ, ಇಲ್ಲವೇ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟು ಕಾನೂನು ಪ್ರಕಾರ ಆತನ ಮೇಲೆ ಕ್ರಮ ಜರುಗಿಸಬಹುದಿತ್ತು. ಆದರೆ, ತಾವೇ ಕಾನೂನು ಕೈಗೆತ್ತಿಕೊಂಡು ಆತನನ್ನು ಅಮಾನುಷವಾಗಿ ಹಿಂಸೆ ಮಾಡಿ, ಕೊಲೆ ಮಾಡಿರುವುದು ಅಕ್ಷಮ್ಯ ಅಪರಾಧ. ಹಣ ಇದ್ದರೆ ಏನು ಬೇಕಾದರೂ ಮಾಡಿ, ದಕ್ಕಿಸಿಕೊಳ್ಳಬಹುದು ಎಂಬ ಅಹಂಕಾರ ದರ್ಶನ್ ಗೆ ಹೆಚ್ಚಾಗಿದೆ.

ಈ ನೆಲದ ಕಾನೂನು ಬಡವರಿಗೊಂದು, ಶ್ರೀಮಂತರಿಗೊಂದು, ಮಂತ್ರಿಗಳಿಗೊಂದು ಎಂದು ಇಲ್ಲ. ಎಲ್ಲರಿಗೂ ಒಂದೇ ಕಾನೂನು ಹಾಗಾಗಿ ತಪ್ಪು ಮಾಡಿದವರಿಗೆ ಕಠಿಣ ಶಿಕ್ಷೆ ಆಗಲಿ, ರೇಣುಕಾ ಸ್ವಾಮಿ ಕುಟುಂಬಕ್ಕೆ ಸರಕಾರ ನ್ಯಾಯ ನೀಡಲಿ ಎಂದರು. ಕೆಲ ಹೊತ್ತು ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು.

ಬಿಜೆಪಿ ಮುಖಂಡ ರಾಮ ನಾಯ್ಕ, ಗೋವಿಂದಪ್ಪ ಮ್ಯಾದರ, ಜಂಗಮ ಸಮಾಜದ ಮುಖಂಡ ರೇವಣಸಿದ್ದಯ್ಯಸ್ವಾಮಿ ಅರಳಿಹಳ್ಳಿಮಠ, ಸಂಗಯ್ಯಸ್ವಾಮಿ ಸಂಶಿಮಠ, ಎಸ್.ಬಿ.ಹಿರೇಮಠ, ಆದಯ್ಯಸ್ವಾಮಿ ಹಿರೇಮಠ, ಎಚ್.ಎಂ.ವಿರೂಪಾಕ್ಷಸ್ವಾಮಿ, ಶಾಂತಮಲ್ಲಯ್ಯ ಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ, ವೀರಯ್ಯ ಹುಲಿಗುಡ್ಡ, ಗಂಗಾಧರ ಸ್ವಾಮಿ ಕೋರಿಯರ, ಮಲ್ಲಯ್ಯಸ್ವಾಮಿ, ಅಯ್ಯಪ್ಪ ಸ್ವಾಮಿ, ಅಮರೇಶ ಹಿರೇಮಠ ಇದ್ದರು.

ರೇಣುಕಾಸ್ವಾಮಿ ಹತ್ಯೆ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಲು ಆಗ್ರಹಿಸಿ, ತಾಲೂಕು ನಾಗರೀಕ ಸಮಾಜದಿಂದ ಗುರುವಾರ ತಹಸೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಎಂಆರ್‌ಪಿಗಿಂತ ಹೆಚ್ಚಿನ ದರಕ್ಕೆ ಮದ್ಯ ಮಾರಾಟ

ಮಾನ್ವಿ: ತಾಲೂಕಿನಲ್ಲಿ ಅಬಕಾರಿ ನಿಯಮಗಳನ್ನು ಉಲ್ಲಂಘಿಸಿ ಮದ್ಯವನ್ನು ಮಾರಾಟ ಮಾಡಲಾಗುತ್ತಿದ್ದರು ಅಬ ಕಾರಿ ಇಲಾಖೆಯು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ತಾಲೂಕು ಸಮಿತಿಯ ಅಧ್ಯಕ್ಷ ಹೊಳೆಪ್ಪ ಉಟಕನೂರು ಆರೋಪಿಸಿದರು.

ಪಟ್ಟಣದ ಪತ್ರಿಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮದ್ಯದ ಅಂಗಡಿಗಳಲ್ಲಿಯೇ ಜನರಿಗೆ ಮದ್ಯಪಾನ ಮಾಡುವುದಕ್ಕೆ ಮದ್ಯದ ಅಂಗಡಿಯ ವರು ಅವಕಾಶ ಮಾಡಿಕೊಡುತ್ತಿದ್ದರೆ. ಎಂಆರ್‌ಪಿ. ದರಕ್ಕಿಂತಲು ಹೆಚ್ಚಿನ ಮೊತ್ತಕ್ಕೆ ಮದ್ಯವನ್ನು ಮಾರಾಟಮಾಡು ತ್ತಿದ್ದಾರೆ.

ಬಾರ್ ಅಂಡ್ ರೆಸ್ಟೂರೆಂಟ ಹಾಗೂ ವಸತಿ ನಿಲಯದ ಮಾಲಿಕರು ನಿಯಮದ ವಿರುದ್ಧವಾಗಿ ಮದ್ಯವನ್ನು ಹೊರಗಡೆ ಕೊಂಡೊಯುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ರಸ್ತೆ ಬದಿಯಲ್ಲಿನ ಡಾಬಗಳಲ್ಲಿ ಅಕ್ರಮವಾಗಿ ಪರವಾನಿಗೆ ಇಲ್ಲದೆ ಮದ್ಯಮಾರಾಟ ಮಾಡಲಾಗುತ್ತಿದೆ. ತಾಲೂಕಿನ ಎಲ್ಲಾ ಗ್ರಾಮಗಳಲ್ಲಿನ ಸಣ್ಣ, ಸಣ್ಣ ಅಂಗಡಿಗಳಲ್ಲಿಯು ಪರವಾನಿಗೆ ಇಲ್ಲದೆ ಮದ್ಯಮರಾಟ ಮಾಡಲಾಗುತ್ತಿರುವುದರಿಂದ ರೈತ ಕೂಲಿ ಕಾರ್ಮಿ ಕರು, ಯುವಕರು ಮದ್ಯಪಾನದ ದುಷ್ಟ ಟ್ಟಕ್ಕೆ ಬಲಿಯಾಗಿ ಅರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಹಾಗೂ ಕುಟುಂಬಗಳಲ್ಲಿ ಅಶಾಂತಿಯ ವಾತಾವರಣ ನಿರ್ಮಣವಾಗುತ್ತಿರುವು ದರಿಂದ ಗ್ರಾಮಗಳಲ್ಲಿ ಸಮಾಜಿಕ, ಆರ್ಥಿಕ ಸ್ಥಿತಿ ಕುಸಿಯುತ್ತಿರುವುದರಿಂದ ತಾಲೂಕಿನ ಅಬಕಾರಿ ಇಲಾಖೆಯ ಅಧಿಕಾರಿಗಳು ನಿಯಮಗಳನ್ನು ಪಾಲನೆ ಮಾಡುವಂತೆ ಮದ್ಯಮಾರಾಟ ಗಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು ನಿಯಮವನ್ನು ಮಿರುವವರ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊ ಳ್ಳಬೇಕು ಎಂದು ಒತ್ತಾಯಿಸಿದರು. ಕಿರಣಕುಮಾರ ಉದ್ಬಾಳ, ಶೇಖರಪ್ಪ, ರವಿಕುಮಾರ, ಬಸವಲಿಂಗಪ್ಪ ಸೇರಿದಂತೆ ಇನ್ನಿತರರು ಇದ್ದರು. ಪಟ್ಟಣದ ಪತ್ರಿಕಾಭವನದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ತಾಲೂಕು ಸಮಿತಿಯ ಅಧ್ಯಕ್ಷ ಹೊಳೆಪ್ಪ ಉಟಕನೂರು ಸುದ್ದಿಗಾರರೊಂದಿಗೆ ಮಾತನಾಡಿದರು.

ದ್ವಿತೀಯ ಪಿಯುಸಿ ಪರೀಕ್ಷೆ -3 ಜೂ. 24 ರಿಂದ

ಸರಕಾರದ ಮಾರ್ಗಸೂಚಿಯಂತೆ ಪರೀಕ್ಷೆ ನಡೆಸಿ; ಎಡಿಸಿ ಡಾ. ಕೆ.ಆರ್.ದುರುಗೇಶ ಸೂಚನೆ

ರಾಯಚೂರು: ಜಿಲ್ಲೆಯ 6 ಪರೀಕ್ಷಾ ಕೇಂದ್ರಗಳಲ್ಲಿ ಜೂ. 24 ರಿಂದ ಜು. 5ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ-3 ನಡೆಯಲಿದ್ದು, ಸರಕಾರದ ಮಾರ್ಗಸೂಚಿಯಂತೆ ಅಧಿಕಾರಿಗಳು ಮುತುವರ್ಜಿ ವಹಿಸಿ ಪರೀಕ್ಷೆ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ. ಕೆ.ಆರ್.ದುರುಗೇಶ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

6 ಪರೀಕ್ಷಾ ಕೇಂದ್ರಗಳಿಂದ ಒಟ್ಟು 4527 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆಗಳನ್ನು ಸಮಗ್ರತೆ, ಪಾವಿತ್ರ್ಯ ಮತ್ತು ಗೌಪ್ಯತೆಯಿಂದ ವ್ಯವಸ್ಥಿತವಾಗಿ ನಡೆಸಲು ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಹಾಗೂ ಪರೀಕ್ಷೆಗಳು ಹೆಚ್ಚು ಪಾರದರ್ಶಕವಾಗಿ ನಡೆಯಲು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರದ ಒಳಗೆ ಮತ್ತು ಹೊರಗೆ ಅನುಮಾನಸ್ಪದ ವ್ಯಕ್ತಿಗಳ ಚಲನವಲನ ವೀಕ್ಷಣೆಗಾಗಿ ವೆಬ್ ಕಾಸ್ಟಿಂಗ್ ಕಣ್ಗಾವಲು ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಖಜಾನೆಯಿಂದ ಗೌಪ್ಯ ಲಕೋಟೆಗಳನ್ನು ತಹಸೀಲ್ದಾರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಪ್ರಾಂಶುಪಾಲರನ್ನು ಒಳಗೊಂಡ ತ್ರಿಸದಸ್ಯ ಸಮಿತಿಯವರು ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿ ಸುರಕ್ಷತೆಯಲ್ಲಿ ಪರೀಕ್ಷಾ ಕೇಂದ್ರಕ್ಕೆ ವಿತರಿಸಲಿದ್ದಾರೆ. ಈ ವಾಹನಗಳಿಗೆ ಜಿಪಿಎಸ್ ಟ್ರಾಂಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಖಜಾನಿ ಅಧಿಕಾರಿ ಮೈಬುಬಿ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠ ಅಧಿಕಾರಿ ಶಿವಕುಮಾರು, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕಾಳಪ್ಪ ಬಡಿಗೇರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಸುರೇಂದ್ರ ಬಾಬು, ಸಾರಿಗೆ ಇಲಾಖೆಯ ಅಧಿಕಾರಿ ಸಾಜೀದ್ ಸೇರಿ ಜಿಲ್ಲೆ ವಿವಿಧ ತಹಸೀಲ್ದಾರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರಾಂಶುಪಾಲರು ಹಾಗೂ ಪರೀಕ್ಷೆ ಕೇಂದ್ರದ ಮುಖ್ಯ ಅಧಿಕ್ಷಕರು ಸಭೆಯಲ್ಲಿ ಇದ್ದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ – 3ರ ಪೂರ್ವ ಸಿದ್ಧತೆ ಕುರಿತು ಅಪರ ಜಿಲ್ಲಾಧಿಕಾರಿ ಡಾ. ಕೆ.ಆರ್.ದುರುಗೇಶ್ ಮಾತನಾಡಿದರು.

ಪರೀಕ್ಷಾ ಕೇಂದ್ರಗಳ ಸುತ್ತ 144 ಸೆಕ್ಷನ್ ಜಾರಿ

ಪರೀಕ್ಷಾ ಕೇಂದ್ರಗಳ ಸುತ್ತಲು 144 ಸೆಕ್ಷನ್ ಹಾಗೂ ಪರೀಕ್ಷೆ ಕೇಂದ್ರಗಳಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ದ್ವಿತೀಯ ಪಿಯುಸಿ ಪರೀಕ್ಷೆ-3 ಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ಪರೀಕ್ಷಾ ದಿನಗಳಂದು ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸುವಂತೆ ಸೂಚಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು ಹಾಗೂ ಅತ್ಯಧಿಕ ತಾಪಮಾನ ಮತ್ತು ಇತರೆ ಕಾರಣಗಳಿಂದ ಉದ್ಭವಿಸುವ ತುರ್ತು ವೈದ್ಯಕೀಯ ನಿರ್ವಹಣೆಗಾಗಿ ಆರೋಗ್ಯ ಸಹಾಯಕರನ್ನು ನೇಮಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಕರ್ತವ್ಯಲೋಪ ಪೇದೆ ಅಮಾನತು

ಕಾರಟಗಿ: ಕರ್ತವ್ಯಲೋಪದ ಆರೋಪದಡಿ ಕಾರಟಗಿ ಪೊಲೀಸ್ ಠಾಣೆಯ ಪೇದೆಯೊಬ್ಬರನ್ನು ಅಮಾನತು ಮಾಡಿ, ಎಸ್ಪಿ ಯಶೋಧ ವಂಟಗೋಡಿ ಆದೇಶಿಸಿದ್ದಾರೆ. ಪೇದೆ ನಾಗರಾಜ ಅಮಾನತು ಆಗಿರುವ ಪೇದೆ. ಮೇ. 21ರಂದು ಅಪ್ರಾಪ್ತ ಬಾಲಕಿಯೊಬ್ಬಳ ಅಪಹರಣ ಪ್ರಕರಣದ ಆರೋಪಿಯನ್ನು ಮನೆಗೆ ಕಳುಹಿಸಿ, ಬಾಲಕಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸದೇ ಬಾಲ ಮಂದಿರಕ್ಕೆ ಕಳುಹಿಸಿ ಕರ್ತವ್ಯಲೋಪ ಎಸಗಿದ್ದಾಗಿ ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ವಾಸ್ತವದಲ್ಲಿ ಮಹಿಳೆ ಮತ್ತು ಅಪ್ರಾಪ್ತ ಬಾಲಕಿ ಅಪಹರಣ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ತನಿಖೆ ಮಾಡಬೇಕು. ಆದರೆ, ತನಿಖಾ ಸಹಾಯಕನಾಗಿದ್ದ ಪೇದೆ ನಾಗರಾಜ ಅವರು ಪ್ರಕರಣವನ್ನು ಅತ್ಯಂತ ಲಘುವಾಗಿ ಪರಿಗಣಿಸಿದ್ದು ಕಂಡು ಬಂದಿದೆ. ನಿಮ್ಮಿಂದ ಠಾಣೆಯ ಇತರೇ ಸಿಬ್ಬಂದಿ ಇಂಥ ನಿರ್ಲಕ್ಷ ತೋರಬಹುದು ಎಂಬ ಕಾರಣಕ್ಕೆ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಿ, ಜೂ. 12 ರಂದು ಅಮಾನತು ಮಾಡಿ ಆದೇಶ ಮಾಡಿದ್ದಾರೆ. ಮುಂದಿನ ಆದೇಶದ ವರೆಗೆ ಅಮಾನತ್ತಿನ ಅವಧಿಯಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ವರದಿ ಮಾಡಿಕೊಳ್ಳಲು ಎಸ್ಪಿ ಸೂಚಿಸಿದ್ದಾರೆ. ಜತೆಗೆ ಅಮಾನತಿನ ಅವಧಿಯಲ್ಲಿ ಕೇಂದ್ರ ಸ್ಥಾನ ಬಿಟ್ಟು ಎಲ್ಲಿಗೂ ಹೋಗುವಂತಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಶೌಚಾಲಯ ಬಳಕೆಗೆ ವಿದ್ಯಾರ್ಥಿಗಳ ಪರದಾಟ

ಕುಕನೂರು:ಪಟ್ಟಣದ ಮೌನ ಅಜಾದ ಶಾಲೆಯಲ್ಲಿ, 123ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಓದುತ್ತಿದ್ದು. ಎರಡು ವರ್ಷ ತರಗ ತಿಯಲ್ಲಿ ವಿದ್ಯಾಭ್ಯಾಸ ಸುಗಮವಾಗಿ ಸಾಗುತ್ತಿದ್ದರು ಕೂಡ ಮಕ್ಕಳಿಗೆ ಶೌಚಾಲಯಕ್ಕೆ ಬೇರೆ ಸ್ಕೂಲಿನ ಶೌಚಾಲಯ ಉಪಯೋ ಗಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪಕ್ಕದ ಸರಕಾರಿ ಪ್ರೌಢಶಾಲೆಯ ಮೂತ್ರಲಯವನ್ನು ಉಪಯೋಗಿಸುತ್ತಿರುವ ಶಾಲಾ ವಿದ್ಯಾರ್ಥಿನಿಯರು ಹಾಗೂ ವಿದ್ಯಾರ್ಥಿಗಳು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಪಾಲಕರಂತೂ ಸಾಕಷ್ಟು ಬಾರಿ ಶಾಲೆಗೆ ಹಾಗೂ ಇಲಾಖೆಗೆ ಮನವಿ ಮಾಡಿಕೊಂಡರು ಕೂಡ ಯಾವುದೇ ಪ್ರಯೋಜನವಾಗಿಲ್ಲ, ಇಲ್ಲಿವರೆಗೂ ಕೂಡ ಅಲ್ಲಿಯ ಶಾಲಾ ಮುಖ್ಯ ಶಿಕ್ಷಣ ಆಗಲಿ ಸಿಬ್ಬಂದಿಗಳಾಗಲಿ ಈ ಸಮಸ್ಯೆ ಬಗ್ಗೆ ಬೆಳಕು ಚೆಲ್ಲದೇ ಇರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಅದರಿಂದಾಗಿ ವಿದ್ಯಾರ್ಥಿನಿಯರು ಇನ್ನೊಂದು ಶಾಲೆ ಯ ಕಂಪೌಂಡು ದಾಟಿಕೊಂಡು ಮೂತ್ರಾಲಯ ಸೋಲಕ್ಕೆ ಹೋಗುತ್ತಿರುವುದು ಸಾರ್ವಜನಿಕರಲ್ಲಿ ಸಾಕಷ್ಟು ಆತಂಕ ಮನೆ ಮಾಡಿದೆ. ಎಲ್ಲಿವರೆಗೂ ಕೂಡ ಜನ ಪ್ರತಿನಿಧಿಗಳಾಗಿ ಅಧಿಕಾರಿಗ ಳಾಗಲಿ ಶಿಕ್ಷಕರಾಗಲಿ ಸಂಬಂಧಪಟ್ಟ ಸಿಬ್ಬಂದಿಗಳಾಗಲಿ ಸಮಸ್ಯೆ ಬಗ್ಗೆ ಹೇಳಿಕೊಳ್ಳುತ್ತಿರುವುದು ಸೂಚನೆ ಸಂಗತಿಯವಾಗಿದೆ. ಸಿಎಂ ಆರ್ಥಿಕ ಸಲಹಾಕಾರರು ಬಸವರಾಜ್ ರಾಯರೆಡ್ಡಿ ತಮ್ಮ ಅವಧಿಯಲ್ಲಿ ಕೂಡ ಈ ಮೂಲಕ ಮಂಜೂರು ಮಾಡಿಸಿದ್ದು . ಇಲ್ಲಿವರೆಗೂ ಕೂಡ ಆ ಶಾಲೆಯ ಕಡೆ ಭೇಟಿ ಕೊಡದೆ ಇರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ವಾಲ್ಮೀಕಿ ನಿಗಮ ಅಕ್ರಮ ಸಿಬಿಐ ತನಿಖೆಗೆ ವಹಿಸಿ

ರಾಯಚೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅಕ್ರಮ ವ್ಯವಹಾರಲ್ಲಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಇವರು ಸಹ ಭಾಗಿಯಾಗಿದ್ದು ತನಿಖಾ ಸಂಸ್ಥೆಗಳು ಅವರನ್ನು ವಿಚಾರಣೆ ನಡೆಸಿ ತನಿಖೆಯನ್ನು ಸಿಬಿಐಗೆವಹಿಸಲು ಜೆಡಿಎಸ್ ನಿಂದ ರಾಜ್ಯಪಾಲರಿಗೆ ದೂರು ನೀಡುವದಾಗಿ ಜೆಡಿಎಸ್ ಜಿಲ್ಲಾಧ್ಯಕ್ಷ ಎಂ.ವಿರೂಪಾಕ್ಷಿ ಹೇಳಿದರು. ನಗರದ ಪತ್ರಿಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಣದ ವ್ಯವಹಾರ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮುನ್ನವೇ ನಡೆದಿದೆ. ನಿಗಮದ ಅಧ್ಯಕ್ಷ ನೀತಿ ಸಂಹಿತೆ ಜಾರಿಯಾಗಿದ್ದರಿಂದ ನಿಗಮ ಕೈ ಹೋಗಿಲ್ಲ, ನನ್ನದೇನೂ ಪಾತ್ರವಿಲ್ಲ ಎಂದು ಹೇಳಿಕೊಂಡಿದ್ದಾರೆ. ಮಾ. 16 ರಂದು ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೊಂಡಿದೆ. ಮಾ. 5 ರಂದು 40 ಕೋಟಿ ರು. ಹಣವನ್ನು ಅನಧಿಕೃತ ಖಾತೆಗಳಿಗೆ ಯೂನಿಯನ್ ಬ್ಯಾಂಕ್ ಮೂಲಕ ಪಾವತಿಸಲಾಗಿದೆ. ನಿಗಮದ ಅಧ್ಯಕ್ಷರ ಮಾಹಿತಿಯಿಲ್ಲದೇ ನಡೆಯಲು ಸಾಧ್ಯವೇ ಇಲ್ಲ. ಎಸ್‌ಟಿ ಇಲಾಖೆ ಸಚಿವ ಸ್ಥಾನಕ್ಕೆ ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಸಚಿವರಷ್ಟೇ ಹೊಣೆ ನಿಗಮದ ಅಧ್ಯಕ್ಷರದ್ದಾಗಿದೆ. ಕೂಡಲೇ ದದ್ದಲ್ ಬಸನಗೌಡ ವಿರುದ್ಧವೂ ಕೇಸ್ ದಾಖಲಿಸಿ ವಿಚಾರಣೆಗೆ ಒಳಪಡಿಸಬೇಕು. ಪಕ್ಷ ವರಿಷ್ಠರಿಗೆ ಪ್ರಕರಣ ಮಾಹಿತಿ ನೀಡಲಾಗಿದೆ. ಎಸ್‌ಐಟಿ ಹಾಗೂ ಸಿಬಿಐ ತನಿಖೆಗಳನ್ನು ನಡೆಸಿ ಕ್ರಮಕ್ಕೆ ಮುಂದಾಗಬೇಕೆಂದರು ಎಂದರು.

ಶಾಲಾ ಮಕ್ಕಳಿಗೆ ನೋಟ್ ಬುಕ್

ಮುದಗಲ್: ಹೊಂಗಿರಣ ಹಾಗೂ ಕ್ರಿತ್ಯಗತ ಸಂಸ್ಥೆಯಿಂದ ಸಮೀಪದ ಬನ್ನಿಗೋಳ ವಲಯ ವ್ಯಾಪ್ತಿಯಲ್ಲಿ ಬರುವ ಜನತಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್‌ಬುಕ್ ಪೆನ್ ಪೆನ್ಸಿಲ್ ವಿತರಣೆ ಮಾಡಿದರು. ಮುದಗಲ್ ವಲಯ ಶಿಕ್ಷಣ ಸಂಯೋಜಕ ಸಂತೋಷ ಕುಮಾರ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ಬಡವರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದನ್ನು ಗುರುತಿಸಿ ನೋಟ್‌ಬುಕ್ ಪೆನ್ ಪೆನ್ಸಿಲ್ ಹಾಗೂ ನಲಿಕಲಿ ಮಕ್ಕಳಿಗೆ ಪರಿಕರಗಳು ದೇಣಿಗೆ ನೀಡಿರುವ ಹೊಂಗಿರಣ ಹಾಗೂ ಕ್ರಿತ್ಯಗತ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಹೇಳಿದರು. ಮುಖ್ಯ ಶಿಕ್ಷಕ ಗುರುಬಸಪ್ಪ, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಅಮರೇಗೌಡ ಪಾಟೀಲ, ಶಿಕ್ಷಕ ಮೌನೇಶ, ಪ್ರಶಾಂತ, ಯೋಗೇಶ, ಜ್ಯೋತಿ ಹುಡೇದ್ ಸೇರಿದಂತೆ ಶಾಲಾ ಮಕ್ಕಳು ಉಪಸ್ಥಿತರಿದ್ದರು.

@vishwavaninews
ವಿಶ್ವವಾಣಿ
ಬೆಂಗಳೂರು
ಶುಕ್ರವಾರ 21 | 06 | 2024

ಬಿ ಪಾಸಿಟಿವ್

ತಿರಸ್ಕಾರದ ತಿರುವು ಭಾಗ್ಯದ ಬಾಗಿಲು!

ತಿರಸ್ಕಾರದ ಪರಿಣಾಮ ನಿಜಕ್ಕೂ ಕೆಡುಕಿಗೆ, ದ್ವೇಷಕ್ಕೆ ದಾರಿ ತೋರಿಸುತ್ತದೆ ಎಂಬುದು ನಮ್ಮ ಬಲವಾದ ನಂಬಿಕೆ. ನಮಗೆ ಒಂದಷ್ಟು ಆರ್ಥಿಕವಾಗಿ ಸಹಾಯವನ್ನೋ, ಮಾರ್ಗದರ್ಶನವನ್ನೋ, ಉದ್ಯೋಗವನ್ನೋ ಅಗತ್ಯವಾದ ಇನ್ನೆನ್ನೋ ಪರಿಚಿತರ ಹತ್ತಿರವ ಕೇಳುತ್ತೇವೆ. ನಮ್ಮ

ಬದುಕಿಗೆ ಆಸರೆಯೊದಗಿಸುವ ಸಂಗತಿಗಳ ಕುರಿತು ಸಹಾಯ ಯಾಚಿಸುತ್ತೇವೆ. ಒಂದೊಮ್ಮೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರೆ ಅವರ ಕುರಿತು ಗೌರವ ತಾಳುತ್ತೇವೆ. ಪ್ರೀತಿಯಿಂದ ನೆನೆಯುತ್ತೇವೆ. ಅವರು ಆ ಕ್ಷಣಕ್ಕೆ ನಮ್ಮನ್ನ ತಿರಸ್ಕಾರ ಭಾವ ತೋರಿದರೆ ಅವರ ಕುರಿತಾಗಿ ಇನ್ನಿಲ್ಲದಂತೆ ಕೋಪಗೊಳ್ಳುತ್ತೇವೆ. ನಾನು ಅವರ ಕುರಿತಾಗಿ ತುಂಬ ಗೌರವ ಇಟ್ಟುಕೊಂಡಿದ್ದೆ. ನನ್ನದೇ ವಿಷಯದಲ್ಲಿ ಹೀಗೆ ಮಾಡುವುದೇ? ಅವರಿಗೆ ಕಾಲವೇ ಎಲ್ಲವನ್ನು ಕಲಿಸುತ್ತದೆ. ನನ್ನ ನೋವು ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದೆಲ್ಲ ನಮಗೆ ನಾವೇ ಹೇಳಿಕೊಳ್ಳುತ್ತ ನಮ್ಮ ನಡೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಅವರ ಮೇಲೆ ದ್ವೇಷ ಸಾಧಿಸಲು ಮುಂದಾಗುತ್ತೇವೆ. ಅವರು ಹಾಗೆ ಹೇಳಿದ್ದರ ಹಿಂದಿನ ಕಾರಣ ಏನಿರಬಹುದು? ಮತ್ತೆ ನಾನು ಪ್ರಯತ್ನಿಸಿದರೆ ನನಗೆ ಅವರು ಸಕಾರಾತ್ಮಕವಾಗಿ ಸ್ಪಂದಿಸಬಹುದು ಎಂದು ಯೋಚಿಸದೇ, ನಿರಾಶರಾಗಿ ಬಿಡುತ್ತೇವೆ. ಕೆಟ್ಟ ಅನುಭವಗಳು ನಮಗೆ ಎದುರಾದಾಗ ಉತ್ತಮ ಯೋಚನೆಗಳನ್ನು ನೇಪಥ್ಯಕ್ಕೆ ಜಾರುತ್ತವೆ, ನಮ್ಮ ಹತಾಶ ಮನೋಭಾವ ದೇಹವನ್ನು ದಣಿಯುವಂತೆ ಮಾಡುತ್ತದೆ ಎಂಬುದು ನಿಜವಾದರೂ ನಾವು ಅವುಗಳಿಂದ ಹೊರಬರುವ ಧೈರ್ಯವನ್ನು ರೂಢಿಸಿಕೊಳ್ಳಬೇಕು. ಹೊಸ ಕನಸು ಕಾಣುವುದು ನಮ್ಮ ಜಾಣತನವಾಗಿದೆ. ಯಾವುದೇ ಫಲಗಳು ಒಮ್ಮೆಲೇ ದೊರೆಯುವುದಿಲ್ಲ. ತಾಳ್ಮೆಯಿಂದ ಎಲ್ಲವನ್ನೂ ಎದುರಿಸುತ್ತ ಮೆಲ್ಲನೇ ಸಾಗುತ್ತಲೇ ಸಾಗಬೇಕು. ನಿಷ್ಠೆಯಿಂದ ನಮ್ಮ ಕೆಲಸವನ್ನು ನಿರ್ವಹಿಸುತ್ತಿರಬೇಕು. ದಾರಿಯು ಸರಿಯಾಗಿದ್ದರೆ ಗುರಿಯನ್ನು ತಲುಪುವುದರಲ್ಲಿ ಯಾವುದೇ ಸಂದೇಹವಿಲ್ಲ.

● ಮಹಾದೇವ ಬಸರಕೋಡ

ಲವ್‌ಎವೆರಿ ಬಾಡಿ

ನಮ್ಮಲ್ಲಿ ಹೆಚ್ಚಿನವರು ವೈದ್ಯರು ಒಮ್ಮೆ ನೀಡಿದ ಶಿಫಾರಸ್ಸು ಪತ್ರದ ಔಷಧಿಯನ್ನೆ ಪದೇ ಪದೇ ಶಿಫಾರಸ್ಸು ಪತ್ರವನ್ನು ತೋರಿಸದೆ ಔಷಧಿ ಅಂಗಡಿಯಿಂದ ಔಷಧಿ ಖರೀದಿಸುತ್ತಾರೆ. ವಿಶೇಷವಾಗಿ ಕಿವಿ, ಮೂಗುಗಳ ಅಸ್ವಾಸ್ಥ್ಯ ನಿವಾರಣೆಗೆ ಬಳಸುವ ಡ್ರಾಪ್ಸ್‌ಗಳು ಪದೇ ಪದೇ ತಿಂಗಳುಗಟ್ಟಲೆ, ವರ್ಷಗಳ ತನಕವೂ ಬಳಸಲ್ಪಡುತ್ತದೆ. ಆದರೆ ಈ ರೀತಿ ದೀರ್ಘಕಾಲಿಕವಾಗಿ ವೈದ್ಯರ ಸಲಹೆ ಇಲ್ಲದೇ ಡ್ರಾಪ್ಸ್‌ಗಳನ್ನು ಬಳಸುತ್ತಿರುವುದು ಎಷ್ಟು ಸುರಕ್ಷಿತ? ಹಾಗೇ ತೆಗೆದುಕೊಂಡ ಔಷಧಿಯು ಕಿವಿಯ ಕೇಳುವಿಕೆಯ ಮತ್ತು ಸಂಬಂಧಿತ ವ್ಯವಸ್ಥೆಗೆ ಹಾನಿಯುಂಟುಮಾಡಿ ಶ್ರವಣ ನಷ್ಟ ಅಥವಾ ಶ್ರವಣ ವ್ಯತ್ಯಾಸವಾಗಲು ಕಾರಣವಾಗಬಹುದು. ನಿರ್ದಿಷ್ಟ ವರ್ಗದ ಔಷಧಗಳು ಕಿವಿಯ ನಂಜನ್ನು ಉಲ್ಬಣಗೊಳಿಸುತ್ತವೆ. ಕಿವಿಯ ನಂಜಿತ್ವದಿಂದ ಸಾಮಾನ್ಯವಾಗಿ ಎರಡೂ ಪಕ್ಕದ ನರ ಸಂಬಂಧಿತ ಶ್ರವಣ ನಷ್ಟ ಮತ್ತು ಕಿವಿಯೊಳಗೆ ಗುಂಯ್ ಗುಡುವಿಕೆ ಉಂಟಾಗಬಹುದು.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ಯೋಗವು ವ್ಯಕ್ತಿಯೊಬ್ಬನ ಒಳಗಿನ ಶಕ್ತಿಯನ್ನು ಸಂತುಲಿತ ರೀತಿಯಲ್ಲಿ ಸುಧಾರಿಸಲು ಅಥವಾ ವೃದ್ಧಿಪಡಿಸಲು ಇರುವ ವಿಧಾನ. ಅದು ಸಂಪೂರ್ಣ ಸ್ವ-ಸಾಫಲ್ಯ ಪಡೆಯುವ ಹಾದಿಯನ್ನು ಒದಗಿಸುತ್ತದೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ವಿಶೇಷ ಲೇಖನ.

ಸ್ತ್ರೀ ಯೋಗ ಕ್ಷೇಮ!

ವಿಶ್ವ ಯೋಗ ದಿನ
● ಸೌಮ್ಯಾ ಬೀನಾ

ಯೋಗ ಎನ್ನುವುದು ಭಾರತವು ಪ್ರಪಂಚಕ್ಕೆ ನೀಡಿದ ಒಂದು ದೊಡ್ಡ ಕೊಡುಗೆ. ದೈಹಿಕ ಆರೋಗ್ಯ ಮತ್ತು ಮಾನಸಿಕ ಸಮತೋಲನ ಕಾಪಾಡಿಕೊಳ್ಳಲು ಯೋಗ ಅತ್ಯಂತ ಸಹಕಾರಿ. 6000 ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ, ಆದರೆ ಸರ್ವಕಾಲಕ್ಕೂ ಅನ್ವಯವಾಗುವ ಭೌತಿಕ, ಅಧ್ಯಾತ್ಮಿಕ ಅಭ್ಯಾಸವಾಗಿದೆ. ಯೋಗದ ಮಹತ್ವವನ್ನು ಪ್ರಪಂಚದಾದ್ಯಂತ ಸಾರುವ ಉದ್ದೇಶದಿಂದ, ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಕರಡು ಪ್ರಸ್ತಾವನೆಯನ್ನು 2014 ರಲ್ಲಿ, ವಿಶ್ವ ಸಂಸ್ಥೆಗೆ ಮಂಡಿಸಿದ್ದರು. 193 ರಾಷ್ಟ್ರಗಳ ಪೈಕಿ 177 ದೇಶಗಳ ಪ್ರತಿನಿಧಿಗಳು ತಕ್ಷಣಕ್ಕೆ ತಮ್ಮ ಅನುಮೋದನೆ ನೀಡಿದ ಐತಿಹಾಸಿಕ ಕ್ಷಣವದು! 2015 ಜೂನ್ 21 ರಿಂದ ಪ್ರಾರಂಭವಾಗಿ ಪ್ರತಿವರ್ಷ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿಜೃಂಭಣೆಯಿಂದ ನಡೆಸಿಕೊಂಡು ಬರಲಾಗುತ್ತಿದೆ. ಜೂನ್ 21, ಭೂಮಿಯ ಉತ್ತರ ಗೋಳಾರ್ಧದಲ್ಲಿ ಅತ್ಯಂತ ದೀರ್ಘ ಹಗಲು ಹೊಂದಿರುವ ದಿನ. ಈ ದಿನ ಸೂರ್ಯ ಬೇಗನೆ ಉದಯಿಸುತ್ತಾನೆ ಮತ್ತು ತಡವಾಗಿ ಅಸ್ತಮಿಸುತ್ತಾನೆ. ಸೂರ್ಯನಿಂದ ಬರುವ ಶಕ್ತಿಯು ಈ ದಿನಕ್ಕೆ ವೈಜ್ಞಾನಿಕವಾಗಿ ಹೆಚ್ಚು ಪರಿಣಾಮವನ್ನು ಬೀರುವ ದಿನವಾಗಿರುವುದರಿಂದ, ಪ್ರಕೃತಿಯ ಸಕಾರಾತ್ಮಕ ಶಕ್ತಿಯೊಂದಿಗೆ, ಯೋಗ ಸಾಧನೆ ನಮ್ಮ ಆರೋಗ್ಯಕ್ಕೆ ಅನುಕೂಲಕರವಾಗುತ್ತದೆ. 2024 ನೇ ಅಂತಾರಾಷ್ಟ್ರೀಯ ಯೋಗ ದಿನದ ಥೀಮ್ ಮಹಿಳಾ ಸಬಲೀಕರಣಕ್ಕಾಗಿ ಯೋಗ.

ಯೋಗ ಹೇಗೆ ಸಹಾಯಕ

ಯಾವುದೇ ಮಹಿಳೆಯ ದೇಹ ಬೆಳವಣಿಗೆಯ ಪ್ರಮುಖ ಹಂತದಿಂದ ಪ್ರಾರಂಭವಾಗಿ, ಋತುಬಂಧ, ಎಂಡೊಮೆಟ್ರಿಯೊಸಿಸ್, ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್, ಗರ್ಭಾಶಯದ ಫೈಬ್ರಾಯ್ಡ್‌ಗಳು, ಪ್ರೀ ಮೆನ್ಸ್ಟ್ರುವಲ್ ಸಿಂಡ್ರೋಮ್ ಮತ್ತು ಗರ್ಭಧಾರಣೆಯಂತಹ ಕೆಲವು ವೈದ್ಯಕೀಯ ಸ್ಥಿತಿಯನ್ನು ಅನುಭವಿಸುತ್ತಿರುವ ಮಹಿಳೆಯರು ಯೋಗದಿಂದ ನಿಜವಾಗಿಯೂ ಪ್ರಯೋಜನ ಪಡೆಯಬಹುದು. ಗರ್ಭಾವಸ್ಥೆಯಲ್ಲಿ ಧ್ಯಾನ, ಪ್ರಾಣಾಯಾಮ, ಉಸಿರಾಟದ ವ್ಯಾಯಾಮ ಮತ್ತು ಯೋಗವನ್ನು ಅಭ್ಯಾಸ ಮಾಡುವುದರಿಂದ ಮೂಡ್ ಸ್ವಿಂಗ್ ಮತ್ತು ಭಾವನಾತ್ಮಕ ಸಮಸ್ಯೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಪೆಲ್ವಿಕ್ ಮಸಲ್ಸನ್ನು ಸಡಿಲಗೊಳಿಸಿ ಹೆರಿಗೆ ಸಹಜವಾಗಿ ಆಗಲು ಯೋಗಾಸನಗಳು ಸಹಕಾರಿಯಾಗಿವೆ. ಯೋಗಾಭ್ಯಾಸ ಮತ್ತು ನಿಯಮಿತವಾಗಿ ವ್ಯಾಯಾಮ ಮಾಡುವ ಮೂಲಕ ಸಂತಾನೋತ್ಪತ್ತಿ ವ್ಯವಸ್ಥೆಯನ್ನು ಆರೋಗ್ಯಕರ ರೀತಿಯಲ್ಲಿ ಇರಿಸಿಕೊಳ್ಳಲು, ನಿಯಮಿತವಾಗಿ ಋತುಚಕ್ರವನ್ನು ಹೊಂದಲು ಮತ್ತು ಮುಟ್ಟಿನ ಸಮಯದಲ್ಲಿ ಕಂಡುಬರುವ ನೋವು ಮತ್ತು ಅಸ್ವಸ್ಥತೆಯ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಬಹುದು. ನಿಯಮಿತ ಯೋಗಾಭ್ಯಾಸವು ಸ್ತನ ಕ್ಯಾನ್ಸರ್ ರೋಗಲಕ್ಷಣಗಳನ್ನು ಸುಧಾರಿಸಲು ಸಾಧ್ಯವಾಗುತ್ತದೆ. ಮೂಳೆಗಳ ಆರೋಗ್ಯ, ಹೃದಯದ ಆರೋಗ್ಯವನ್ನೂ ಕೂಡ ಇದು ಸುಧಾರಿಸುತ್ತದೆ, ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಹಾರ್ಮೋನ್ ಸಮತೋಲನವನ್ನು ಸುಧಾರಿಸುತ್ತದೆ. ಇದು ಸ್ನಾಯುಗಳು ಮತ್ತು ಕೀಲುಗಳ ಚಲನಶೀಲತೆಯನ್ನು ಬಲಪಡಿಸುತ್ತದೆ, ನಮ್ಯತೆ ಮತ್ತು ಸಹಿಷ್ಣುತೆಯನ್ನು ಸುಧಾರಿಸುತ್ತದೆ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ, ರಕ್ತ ಪರಿಚಲನೆಯನ್ನು ಉತ್ತೇಜಿಸುತ್ತದೆ. ಮಹಿಳೆಯರ ಸೌಂದರ್ಯ ಇಮ್ಮಡಿಸಲು ಯೋಗವು ಸಹಾಯ ಮಾಡುತ್ತದೆ.

ಯೋಗವೆಂದರೆ ಕೇವಲ ಆಸನಗಳಷ್ಟೇ ಅಲ್ಲ; ಉಸಿರಾಟದ ತರಬೇತಿ ಒಂದೇ ಅಲ್ಲ! ಮೂಢ ಚಿತ್ತವನ್ನು ಶುದ್ಧಗೊಳಿಸಲು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ 8 ಮಾರ್ಗಗಳುಂಟು. ಅಹಿಂಸೆ, ಸತ್ಯ, ನಡತೆಯಲ್ಲಿ ಶುಚಿತ್ವ, ಕದಿಯದಿರುವುದು, ಅನಗತ್ಯ ವಸ್ತುಗಳಿಗೆ ಮೋಹಗೊಳ್ಳದೆ ಸರಳ ಜೀವನ ನಡೆಸುವುದು, ಶುಚಿಯಾದ ಆಚಾರ ವಿಚಾರ, ತೃಪ್ತಿ, ಕೃತಜ್ಞತೆ, ನಿರಂತರ ಕಲಿಕೆ – ಸ್ವಾಧ್ಯಾಯ, ಗುರುವಿನ ಸೇವೆ ಇತ್ಯಾದಿ ಯಮ ನಿಯಮಗಳ ಸೂತ್ರಗಳೂ ಕೂಡ ಯೋಗವೇ. ಇತರರ ಏಳಿಗೆ ಕಂಡು ಈರ್ಷ್ಯೆಗೊಳ್ಳದೇ, ಸಹಕಾರದಿಂದ ಬಾಳುವುದು ಕೂಡ ಒಂದು ಯೋಗಿಯ ಜೀವನಶೈಲಿ.

ಮಹಿಳೆಯರ ಆರೋಗ್ಯ

ಮಹಿಳೆಯರು ಕುಟುಂಬ ಮತ್ತು ಸಮಾಜದ ಮೂಲಾಧಾರ. ಪ್ರತೀ ಮಹಿಳೆಗೂ ಮನೆ, ಉದ್ಯೋಗ, ಮಕ್ಕಳು ಎಲ್ಲವನ್ನೂ ನಿರ್ವಹಿಸಬೇಕಾದ ಅನಿವಾರ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ತಾಳ್ಮೆ, ಏಕಾಗ್ರತೆ ಅತ್ಯಗತ್ಯ. ಅದರ ಜತೆಗೆ, ಸುತ್ತಲಿರುವ ಎಲ್ಲವನ್ನೂ ಕಾಳಜಿ ವಹಿಸುವಾಗ, ಅವರು ಆಗಾಗ್ಗೆ ತಮ್ಮ ಆರೋಗ್ಯದ ಕಾಳಜಿ ಮರೆತುಬಿಡುತ್ತಾರೆ. ಮಹಿಳೆಯರು ತಮ್ಮ ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನು ಸ್ತಿಮಿತದಲ್ಲಿಟ್ಟುಕೊಳ್ಳುವುದು ತಮಗೆ ತಾವೇ ಮತ್ತು ತಮ್ಮ ಮೇಲೆ ಅವಲಂಬಿತ ಎಲ್ಲ ಜನರಿಗೂ ನೀಡುವ ಕೊಡುಗೆಯದು. ಯೋಗ ಕೇವಲ ಮೈಮುರಿಯುವ, ತೂಕ ಇಳಿಸುವ ವಿಧಾನವಲ್ಲ; ಉಸಿರಾಟದ ಏರಿಳಿತದೊಂದಿಗೆ ಆಮ್ಲಜನಕದ ಪೂರೈಕೆ ಮತ್ತು ವಿಷಾಣುಗಳ ಹೊರದಬ್ಬುವಿಕೆ ಸಾಧ್ಯವಾಗುವುದರ ಜತೆಗೆ, ನಿಧಾನವಾಗಿ ದೇಹದ ಅಂಗಾಂಗಳನ್ನು ಏಕಾಗ್ರತೆಯಿಂದ ಎಳೆದು ಹಿಗ್ಗಿಸುವುದರಿಂದ, ದೇಹಕ್ಕೆ ಮತ್ತು ಮನಸ್ಸಿಗೆ ಬೇಕಾದ ವಿಶ್ರಾಂತಿಯೂ ದೊರೆತಂತಾಗುತ್ತದೆ, ದೇಹದೊಳಗಿನ ಮಲಿನ ಬೆವರಿನ ಮೂಲಕ ನೀಗಿ ನವಚೈತನ್ಯದ ಶಕ್ತಿ ಪೂರೈಕೆಯಾಗುತ್ತದೆ.

ತ್ಯಾಜ್ಯದಿಂದ ಅಲಂಕಾರ

● ಹೊಸ್ಮನೆ ಮುತ್ತು

ಕೊಯ್ಲು ಮಾಡಿದ ನಂತರ ತ್ಯಾಜ್ಯವಸ್ತುವಾಗಿ ಬಿಡಬಹುದಾಗಿದ್ದ ಸಸ್ಯದ ಭಾಗವೊಂದು ಮನುಷ್ಯನ ಕಲ್ಪನಾ ಶಕ್ತಿ, ಸೃಜನಶೀಲತೆಯಿಂದಾಗಿ ಉಪಯುಕ್ತ ವಸ್ತುವಾಗಿ ರೂಪಾಂತರಗೊಂಡಿದೆ. ಹತ್ತಿ, ಸೆಣಬು, ರೆಯಾನ್, ನೈಲಾನ್, ರೇಷ್ಮೆ ಹಾಗೂ ಲಿನಿನ್ ನಂತರ ಮತ್ತೊಂದು ವಿಶೇಷವಾದ ವಸ್ತು ತನ್ನ ನಾರಿನ ಕಾರಣದಿಂದ ಪ್ರಸಿದ್ಧಿ ಪಡೆದಿದೆ. ಅದು 'ಬಾಳೆ ನಾರು'. ಇದೊಂದು ಕ್ರಾಂತಿಕಾರಿ ಸಂಶೋಧನೆ. ಬಾಳೆ ಮರದಿಂದ ನಾರನ್ನು ಹೊರತೆಗೆಯುವ ಪ್ರಕ್ರಿಯೆ. ಬಾಳೆನಾರು ಸಂಪೂರ್ಣವಾಗಿ ಜೈವಿಕ ವಸ್ತುವಾಗಿದ್ದು, ಇದರಿಂದ ವಿವಿಧ ಆಕರ್ಷಕ ಉತ್ಪನ್ನಸಿದ್ಧವಾಗುತ್ತದೆ.

ಅನುಭವಿ ಕುಶಲಕರ್ಮಿಗಳು ಬಾಳೆ ನಾರಿನಿಂದ ಸೌಂದರ್ಯ ಸಾಧನಗಳಲ್ಲದೇ, ಅನೇಕ ಉಪಯುಕ್ತ ವಸ್ತುಗಳಾದ, ವ್ಯಾನಿಟಿ ಬ್ಯಾಗ್, ನೆಲಹಾಸು, ಟೇಬಲ್ ಮ್ಯಾಟ್, ಬೊಕ್ಕೆ, ಕೈಚೀಲಗಳು, ಪೆನ್ಸಿಲ್ ಬಾಕ್ಸ್‌ಗಳು, ಬುಟ್ಟಿಗಳು, ಡೋರ್‌ಮ್ಯಾಟುಗಳು, ಕೋಸ್ಟರ್‌ಗಳು ಫೈಲ್– ಫೋಲ್ಡರ್‌ಗಳು, ಫ್ಲವರ್‌ವಾಸ್‌ಗಳು, ಪೆನ್ ಹೋಲ್ಡರ್‌ಗಳಲ್ಲದೇ, ಗೃಹಅಲಂಕಾರಿಕ ವಸ್ತು ಸೇರಿದಂತೆ ಅನೇಕ ಉತ್ಕೃಷ್ಟ ಗುಣಮಟ್ಟದ, ವ್ಯಾಪಕ ಶ್ರೇಣಿಯ ಕರಕುಶಲ ವಸ್ತುಗಳನ್ನು ಬಾಳೆ ನಾರಿನಿಂದ ತಯಾರಿಸುತ್ತಾರೆ.

ಟ್ರೆಂಡಿಂಗ್ ಜತೆಗೆ ಆರಾಮದಾಯಕ

ನೈಸರ್ಗಿಕ ಬಾಳೆ ನಾರು ಸಾಂಪ್ರದಾಯಿಕ ಜವಳಿ ನಾರುಗಳಿಗೆ ಪರ್ಯಾಯವಾಗಿದ್ದು ಈ ನಾರಿನಿಂದ ತಯಾರಿಸಿದ ಸುಂದರ ವಸ್ತ್ರಗಳು, ಸೀರೆಗಳು ಈಗ ಟ್ರೆಂಡಿಂಗ್ ಆಗಿವೆ. ಬಾಳೆ ನಾರಿನ ವಸ್ತ್ರಗಳು ಬೇಸಿಗೆಯ ದಿನಗಳಲ್ಲಿ ದೇಹವನ್ನು ತಂಪಾಗಿರಿಸುವುದಲ್ಲದೇ, ಬಟ್ಟೆಗಳು ಆರಾಮದಾಯಕವಾಗಿದ್ದು, ಯಾವುದೇ ಕಿರಿಕಿರಿ, ಅಲರ್ಜಿಯನ್ನು ಉಂಟು ಮಾಡುವುದಿಲ್ಲ.

ಗುಣಮಟ್ಟದ ನಾರಿರುವ ಬಾಳೆದಿಂಡುಗಳನ್ನು ಆಯ್ಕೆ ಮಾಡಿಕೊಂಡು ಒಳಗಿರುವ ತೆಳುವಾದ ನಾರನ್ನು ತೆಗೆಯುವ ಕೆಲಸ ಮೊದಲಾಗುತ್ತದೆ. ಬಾಳೆ ಕೊಯ್ಲು ಮಾಡಿದ ನಂತರವೇ ಈ ಪ್ರಕ್ರಿಯೆ ಶುರುವಾಗುತ್ತದೆ. ನೀರಿನಲ್ಲಿ ನೆನೆಸಿ, ಬಿಸಿಲಲ್ಲಿ ಒಣಗಿಸಿ ಬಳಿಕ ನಾರುಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಉತ್ಕೃಷ್ಟನೂಲುಗಳಾಗಿ ಪರಿವರ್ತಿಸಲಾಗುತ್ತದೆ. ಒಣಗಿದ ನಂತರ ಗುಣ ಮಟ್ಟದ ಮೇಲೆ ವಿವಿಧ ಗುಂಪುಗಳಾಗಿ ವರ್ಗೀಕರಿಸಲಾಗುತ್ತದೆ.

ಪರಿಸರ ಸ್ನೇಹಿ ಫೈಬರ್

ಪರಿಸರದ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರದಿರುವುದರ ಕಾರಣ ಈ ಪರಿಸರ ಸ್ನೇಹಿ ಫೈಬರ್ ತನ್ನ ವಹಿವಾಟನ್ನು ಇಂದು ಅಂತಾರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಿಕೊಂಡಿದೆ. ಫೈಬರ್‌ನ ಉದ್ದ, ಬಣ್ಣ ಮತ್ತು ಶಕ್ತಿಯು ಆಯ್ದು ಕೊಳ್ಳುವ ಬಾಳೆ ಮರದಗುಣಮಟ್ಟದ ಮೇಲೆ ಅವಲಂಬಿಸಿರುತ್ತದೆ. ಕೃಷಿ ತ್ಯಾಜ್ಯವನ್ನು ಕಡಿಮೆ ಮಾಡುವ, ಪರಿಸರವನ್ನು ರಕ್ಷಿಸುವ ಹಾಗೂ ಕೃಷಿ ಆಧಾರಿತ ಉದ್ಯೋಗಾವಕಾಶಗಳನ್ನು ಒದಗಿಸಲು ಈ ಉದ್ಯಮ ಸಹಾಯಕ.

ಬಾಳೆ ನಾರು ಗುಡಿ ಕೈಗಾರಿಕೆಯಾಗಿ ಗ್ರಾಮೀಣ ಮಹಿಳೆಯರ ಸ್ವಾವಲಂಬನೆಗೆ ದಾರಿ ಮಾಡಿಕೊಡುವುದಲ್ಲದೇ, ಆರ್ಥಿಕವಾಗಿ ಸಬಲರಾಗಲೂ ಸಹಾಯ ಮಾಡುವುದು. ಹವಾಮಾನ ವಿಕೋಪದಿಂದಾಗಿ ಬಾಳೆ ಮರಗಳು ನೆಲಕಚ್ಚಿದಾಗ ಮತ್ತು ಬಾಳೆ ಹಣ್ಣುಗಳ ಬೆಲೆಯ ಏರಿಳಿತದಿಂದಾಗಿ ಬಾಳೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದಾಗ ಈ ಉದ್ಧಿಮೆ ಪರಿಹಾರವಾಗಿ ಒದಗಿಬರಬಲ್ಲದು. ನಾರಿನ ಕಾರಣದಿಂದಾಗಿ ಬಾಳೆಯ ಮೌಲ್ಯವರ್ಧನೆಯನ್ನೂ ಹೆಚ್ಚಿಸಬಹುದು.

ಇತ್ತೀಚಿಗೆ ನಗರದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಆಯೋಜಿಸಿದ ತ್ರಿಫಲ ವೈವಿಧ್ಯತಾಮೇಳದಲ್ಲಿ ಬಾಳೆನಾರಿನಿಂದ ತಯಾರಾದ ಅನೇಕ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗಿದ್ದು, ಬಾಳೆ ನಾರಿನ ವೈವಿಧ್ಯಮಯ ಕರಕುಶಲ ವಸ್ತುಗಳು ನೋಡುಗರ ಗಮನ ಸೆಳೆದವು.

ಪದಬಂಧ

1		2	■	3	■	4		
■	■	5					■	■
6	7		■		■	8	9	
■		■	10		11	■		■
12				■	13			
■		■	14	15		■		■
16		17	■		■	18		
■	■	19					■	■
20			■		■	21		

ಎಡದಿಂದ ಬಲಕ್ಕೆ
1. ನಾಡಿನ ದೊರೆ (3)
4. ಸರದ ಮಧ್ಯೆ ಸಿಲುಕಿದ ಸಲುಗೆ (3)
5. ಶ್ರೇಷ್ಠನಾದವನು ಎಂದರ್ಥ (5)
6. ಚಮರೀಮೃಗದ ಕೂದಲಿನಿಂದ ಮಾಡಿದ ಬೀಸಣಿಕೆ (3)
8. ಅಸ್ತವ್ಯಸ್ತವಾಗಿ ಬಂದಿರುವ ಕರುಣೆ (3)
10. ನರೆತ ಕೂದಲು ಇಲ್ಲಿ ಅಸ್ತವ್ಯಸ್ತವಾಗಿದೆ (3)
12. ಕಡಿಯುವಾಗ ಇರಲಿ ನಿಯಂತ್ರಣ (4)
13. ಕೈವಶ (4)
14. ಕೆಳಕ್ಕೆ ಬೀಳುವಿಕೆ (3)
16. ಅಸ್ತವ್ಯಸ್ತವಾಗಿರುವ ನಮ್ಮ ಛಾಯೆ (3)
18. ಹಸುಗೂಸಿಗೆ ಮತ್ತೊಂದು ಹೆಸರು (3)
19. ಎಣಿಸುವಾಗ ಲೆಕ್ಕಕ್ಕೆ ತೆಗೆದುಕೊಳ್ಳು (5)
20. ಸಾಮಾನು ತರುವಾಗ ಕಂಡ ಯುವಕ (3)
21. ಪರಚು ಎಂದರ್ಥ (3)

ಎಡದಿಂದ ಬಲಕ್ಕೆ
2. ಸರದ ಮಧ್ಯೆ ನಿಂತು ಮಾಡಿದ ಯುದ್ಧ (3)
3. ಅವನು ತೋರಿದ ದಯೆ (4)
4. ಕೈಯಿಂದ ನೇವರಿಸು (3)
7. ಅಂತಸ್ತು ಇರುವ ಗೃಹ (5)
9. ಮಧ್ಯೆ ಗಣಿಯಿದ್ದರೂ ಅಲಕ್ಷಿಸು (5)
10. ತಲೆಕೆಳಗಾಗಿ ಬಂದಿರುವ ಧಾನ್ಯ ಸಂಗ್ರಹಿಸುವ ಸ್ಥಳ (3)
11. ಅಸಲಿಯಲ್ಲದ್ದು ಮೇಲೇರಿ ಬಂದಿದೆ (3)
15. ಪಾಠ ಕೇಳುವ ಕಕ್ಷೆ (4)
17. ಪಣತೊಟ್ಟ ಐಶ್ವರ್ಯ (3)
18. ಮತ್ತೊಂದು ದನದಿಂದ ಆರಂಭವಾದ ವಿಭಾಗ ಅಥವಾ ಹಂಚಿಕೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಅಜಗರ 3. ಅವಸರ 6. ಮನುಜ 7. ಸುಗತ 9. ಅಂಜನ 11. ಕೊರವಂಜಿ 12. ರದ್ದುಮಾಡು 14. ಕೆರಳು 16. ಗವಾಯಿ 18. ಬಣವೆ 19. ಸವ್ಯಸಾಚಿ 20. ಅನುಮತಿ

ಮೇಲಿನಿಂದ ಕೆಳಕ್ಕೆ: 2. ಜಮೀನುದಾರ 4. ಸರಾಗ 5. ಅಗ್ರಜ 8. ತಗಡು 9. ಅಂಜಿಕೆ 10. ನರಳು 11. ಕೊಳಗ 13. ಮಾರಣಹೋಮ 15. ರಸನ 17. ವಾಯವ್ಯ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಲೌಕಿಕ ಬದುಕಿನ ನಡುವೆ ಧ್ಯಾನಸ್ಥ ಸ್ಥಿತಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಮ್ಮೆ ಈ ಚಿತ್ರವನ್ನು ಕಣ್ಮುಂದೆ ಕಲ್ಪಿಸಿಕೊಂಡರೆ ಈ ಮನುಷ್ಯ ಜನ್ಮ ನಮಗೆ ಬಹಳ ಚೆನ್ನಾಗಿ ಅರ್ಥವಾಗುತ್ತದೆ.

ಒಬ್ಬ ಮನುಷ್ಯ ಮರದ ಕೊಂಬೆಯಲ್ಲಿ ನೇತಾಡುತ್ತಿದ್ದಾನೆ. ಕೆಳಗೆ ಕೊಳವೊಂದಿದೆ. ಆನೆಯೊಂದು ಅದರ ಬುಡವನ್ನೇ ಹಿಡಿದು ಎಳೆಯುತ್ತಿದೆ. ಅವನು ಹಿಡಿದಿರುವ ಕೊಂಬೆಯನ್ನು ಎರಡು ಇಲಿಗಳು ಕೊರೆದು ತಿನ್ನುತ್ತಿವೆ. ತಲೆಯ ಮೇಲ್ಭಾಗದಲ್ಲಿ ಜೇನುಗೂಡು ಕಟ್ಟಿದೆ, ಅದರಿಂದ ಮಧು ಸುರಿಯುತ್ತುದೆ. ಆ ಮನುಷ್ಯನ ಕಾಲ ಬುಡದಲ್ಲಿನ ಕೊಳದಲ್ಲಿ ವಿಷಸರ್ಪಗಳು ಹರಿದಾಡುತ್ತಿವೆ. ಪಕ್ಕದಲ್ಲಿ ಭಗವಂತ ಆಸರೆ ಕೊಡಲು ಕೈಚಾಚಿದ್ದಾನೆ. ಆದರೆ ಮನುಷ್ಯ ನಾಲಿಗೆ ಚಾಚಿಕೊಂಡು ಮೇಲಿಂದ ತೊಟ್ಟಿಕ್ಕುತ್ತಿರುವ ಮಧುವಿನ ರುಚಿಯಲ್ಲಿ ಮೈಮರೆತಿದ್ದಾನೆ!

ಇಲ್ಲಿ, ಆನೆ ಪೂರ್ವಜನ್ಮದ ಕರ್ಮ (ಸಂಚಿತ). ಕೊಳದಲ್ಲಿರುವ ಹಾವುಗಳು ಭವಿಷ್ಯದ ಕರ್ಮಗಳು . ಮರದ ಕೊಂಬೆ ಪ್ರಸ್ತುತ ಬದುಕು. ಕಪ್ಪು – ಬಿಳುಪು ಇಲಿಗಳು ಅದನ್ನು ತಿಂದು ಮುಗಿಸುತ್ತಿರುವ ಹಗಲು-ರಾತ್ರಿಗಳು. ಮಧು ಸುರಿಯುತ್ತಿರುವ ಜೇನುಗೂಡು ಬೇರೇನಲ್ಲ, ಅದೇ ಮಾಯೆ! ವರ್ತಮಾನದ ರೆಂಬೆಗೆ ಜೋತಾಡುತ್ತಿರುವ ಮನುಷ್ಯ ತನ್ನನ್ನು ಉಳಿಸಲೆಂದು ಕೈ ಚಾಚಿದ ಭಗವಂತನನ್ನು ಕಡೆಗಣ್ಣಿಂದಲೂ ನೋಡದೆ ನಾಲ್ಕು ಹನಿ ಜೇನಿಗಾಗಿ ನಾಲಿಗೆ ಚಾಚುತ್ತಿದ್ದಾನೆ.! ಮಾಯೆಯ ಸೆಳೆತವೇ ಇಂಥದ್ದು.

ಇಲಿಗಳು ಕೊರೆಕೊರೆದು ರೆಂಬೆ ಮುರಿದು ಬೀಳಲಿದೆ; ಅಂದರೆ, ಹಗಲು ರಾತ್ರಿಗಳು ನಮ್ಮ ಆಯುಷ್ಯವನ್ನು ತಿಂದುಹಾಕಲಿವೆ. ಕೆಳಗೆ ಬಿದ್ದರೆ ಹಾವಿಗೆ, ಅರ್ಥಾತ್ – ಆಗಾಮಿ ಎಂಬ ಕರ್ಮದ ಬಾಯಿಗೆ ಆಹಾರವಾಗಲಿದ್ದೇವೆ. ಇತ್ತ ನಮ್ಮ ಹಿಂದಿನ ಕರ್ಮಗಳೆಲ್ಲವೂ ಬಲ ಹಾಕಿ ಆನೆಯಂತೆ ನಮ್ಮ ವರ್ತಮಾನವನ್ನೆ ಎಳೆಯುತ್ತಾ ಬುಡಸಹಿತ ಅಲುಗಾಡಿಸುತ್ತಿವೆ. ಆದರೆ ನಾವೇನು ಮಾಡುತ್ತೇವೆ? ಇಂಥಾ ಪರಿಸ್ಥಿತಿಯಲ್ಲಿದ್ದರೂ ಭಗವಂತನ ಕಡೆ ಗಮನ ಹರಿಸದೆ ಇಂದ್ರಿಯ ಭೋಗವೆಂಬ ಜೇನಿನ ರುಚಿಗೆ ಹಪಹಪಿಸುತ್ತಿದ್ದೇವೆ! ಈ ಮಧು – ಮಾಯೆಯ ಜಾಲಕ್ಕೆ ಬಿದ್ದು ವರ್ತಮಾನವನ್ನು ಕಳೆದುಕೊಂಡು, ನಮ್ಮ ಜನ್ಮವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದೇವೆ.

ಇಂದ್ರಿಯ ತೃಪ್ತಿಗೆ ಹಾತೊರೆಯದೆ, ಮಧು – ಮಾಯೆಗೆ ನಾಲಗೆ ಚಾಚುವ ಭೋಗಿಗಳಾಗದೆ, ಕರ್ಮಫಲವನ್ನು ಸಾಧ್ಯವಾದಷ್ಟೂ ನಿರ್ಲಿಪ್ತವಾಗಿ ಬಿಟ್ಟುಕೊಡುತ್ತಾ ಯೋಗಿಗಳಾಗುವ ನಿಟ್ಟಿನಲ್ಲಿ ಪ್ರಯತ್ನ ನಡೆಸೋಣ. ಸಂಚಿತ – ಆಗಾಮಿಗಳೆಂಬ ಆನೆ – ಮೊಸಳೆಗಳಿಂದಲೂ; ಮಧುವೆಂಬ ಮಾಯೆಯಿಂದಲೂ ನಮ್ಮನ್ನು ರಕ್ಷಿಸಿಕೊಳ್ಳೋಣ.

ನಿಜ ಮನುಷ್ಯರಾಗಿ ಹುಟ್ಟಿದ ಮೇಲೆ ನಾನಾ ರೀತಿಯ ಭೋಗದ ಆಸೆಗಳು ನಮ್ಮನ್ನು ಆವರಿಸಿಕೊಳ್ಳುತ್ತಲೇ ಇರುತ್ತವೆ. ಮನುಷ್ಯ ಸಹಜ ಬಯಕೆಗಳಂತೆ ನಾವು ಕೂಡ ಈ ಆಸೆಗಳಿಗೆ ನಮ್ಮನ್ನೇ ಒಟ್ಟಿಕೊಳ್ಳುತ್ತಾ ನಿತ್ಯ ನಿರಂತರ ಕಳೆದು ಹೋಗುತ್ತಾ ಇರುತ್ತೇವೆ. ಆದರೆ ಇದೆಲ್ಲದರ ಜತೆಗೆ ಭಗವಂತನ ಜೊತೆ ಅನುಸಂಧಾನಕ್ಕೂ ಕೂಡ ಒಂದಷ್ಟು ಸಮಯವನ್ನ ಮೀಸಲಾಗಿರಿಸಿದರೆ ನಮ್ಮ ಈ ಜನ್ಮದ ಸಾರ್ಥಕ್ಯಕ್ಕೆ ನಾವು ಗಮನಹರಿಸಲು ನೆರವಾಗುತ್ತದೆ. ಧ್ಯಾನ, ಧ್ಯಾನದಲ್ಲಿನ ಮೌನ ನಮಗೆ ಇಂತಹ ಒಂದು ಅವಕಾಶವನ್ನು ಕಲ್ಪಿಸಿ ಕೊಡುತ್ತದೆ. ಧ್ಯಾನಕ್ಕಾಗಿ ನೀವು ಎಲ್ಲೋ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಒಂಟಿಯಾಗಿ ಕುಳಿತುಕೊಳ್ಳಬೇಕಿಲ್ಲ. ಸಂತೆಯಲ್ಲಿದ್ದರೂ ನಿರ್ಲಿಪ್ತರಂತೆ ತಟಸ್ಥ ಮನಸ್ಥಿತಿಯನ್ನು ಹೊಂದಿ ಆಗು ಹೋಗುಗಳನ್ನ ಗಮನಿಸಲು ಪ್ರಾರಂಭಿಸಿದಾಗ ನಾವೊಂದು ಧ್ಯಾನಸ್ಥ ಸ್ಥಿತಿಯಲ್ಲಿ ಇರುತ್ತೇವೆ. ನಮ್ಮ ಅಕ್ಕ ಪಕ್ಕದವರು ಹೇಳುವ ಊಹಾಪೋಹದ ಮಾತುಗಳಿಗೆ ಕಿವಿಯಾಗದೆ, ಮತ್ತೊಬ್ಬರ ಏಳಿಗೆಗೆ ಕರುಬಿ ಅವರನ್ನು ಅದೋಗತಿಗೆ ಇಳಿಸಲು ನಾವು ಪ್ರಯತ್ನಿಸದೆ ಇದ್ದಾಗ ಅದು ಕೂಡ ಧ್ಯಾನಸ್ಥ ಸ್ಥಿತಿಯೇ ಅಲ್ಲವೇ.

ಕೆಸರಿನಲ್ಲಿದ್ದರೂ ಕೂಡ ಕಮಲದ ಹೂವು ಹೇಗೆ ತನ್ನ ಅಸ್ತಿತ್ವವನ್ನು ನಿರ್ಮಲವಾಗಿ ಉಳಿಸಿಕೊಂಡು ತನ್ನ ಅರಸಿ ಬರುವ ದುಂಬಿಗೆ ನಿರ್ಮೋಹದಿಂದ ಸಿಹಿ ಉಣಿಸುತ್ತದೆಯೋ, ನಾವು ಕೂಡ ನಮ್ಮ ಲೌಕಿಕ ಜಂಜಾಟಗಳ ಮಧ್ಯೆಯೂ ಕೂಡ ಭಗವಂತನ ಭಕ್ತಿಗೆ ನಿಷ್ಕಲ್ಮಶನಿಂದ ನಮ್ಮನ್ನು ಅರ್ಪಿಸಿಕೊಂಡಾಗ ಅವನ ಕೃಪಾಕಟಾಕ್ಷ ನಮಗೆ ಒದುಕುವುದರಲ್ಲಿ ಯಾವುದೇ ಸಂದೇಹವಿಲ್ಲ. ಇಂತಹ ಸಾರ್ಥಕ ಬದುಕು ನಮ್ಮದಾಗಲಿ ಎನ್ನುವ ಆಶಯ ಒಂದೊಳ್ಳೆ ಮಾತಿನ ಮೂಲಕ ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ವಿಶ್ವವಾಣಿ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್
21.06.2024
ಬೆಂಗಳೂರು • ಶುಕ್ರವಾರ

ಪೈಲ್ವಾನ್ ಆದ ಪ್ರವೀಣ್

ಪ್ರಶಾಂತ್.ಟಿ.ಆರ್

ಲವ್ 360ಯಲ್ಲಿ ಒಲವೆ ನೀ ಗೆಳೆತಿಯೇ.. ಎಂದು ಹಾಡಿ ಪೆದ್ದು ಗೆಳತಿಯ ಹಿಂದೆ ಬಿದ್ದು ಮನಗೆದ್ದ ಪ್ರವೀಣ್, ಸದ್ಯ ದೇಸಾಯಿ ಮನೆತನದ ಮಗನಾಗಿ ತೆರೆಗೆ ಬಂದಿದ್ದಾರೆ. ದೇಸಾಯಿ ಉತ್ತರ ಕರ್ನಾಟಕ ಸೊಗಡಿನ ಕಥೆಯನ್ನು ಒಳಗೊಂಡಿದ್ದು, ಪ್ರವೀಣ್ ಪೈಲ್ವಾನ್ ಅವತಾರ ತಾಳಿದ್ದಾರೆ. ಆರಂಭದಿಂದಲೂ ಕುತೂಹಲ ಕೆರಳಿಸಿದ್ದ ದೇಸಾಯಿ ರಾಜ್ಯಾಂದ್ಯತ ತೆರೆಗೆ ಬಂದಿದೆ.

ನಟನಾಗಿ ಮಿಂಚಬೇಕು ಎಂಬ ಆಸೆಯಿಂದ ಚಿತ್ರರಂಗಕ್ಕೆ ಬಂದ ಪ್ರವೀಣ, ಮೊದಲ ಚಿತ್ರದಲ್ಲಿಯೇ ಭರವಸೆ ಮೂಡಿಸಿದರು. ಈಗ ಎರಡನೇ ಚಿತ್ರಕ್ಕಾಗಿ ವಿಭಿನ್ನವಾದ ಕಥೆಯನ್ನು ಆಯ್ದುಕೊಂಡಿದ್ದು, ಚಾಲೆಂಜಿಂಗ್ ಪಾತ್ರವನ್ನು ನಿರ್ವಹಿಸಿದ್ದಾರೆ. ತಮ್ಮ ಪಾತ್ರಕ್ಕೆ ಸಾಕಷ್ಟು ಶ್ರಮವಹಿಸಿದ್ದಾರೆ.

ಗರಡಿ ಮನೆಯ ಕಟ್ಟಾಳು

ದೇಸಾಯಿ ಸುಂದರ ಕೌಟುಂಬಿಕ ಚಿತ್ರ ಎನ್ನುವುದು ಸಿನಿಮಾ ಸೆಟ್ಟೇರಿದಾಗಲೇ ತಿಳಿದಿತ್ತು. ಶೀರ್ಷಿಕೆ ಅದಕ್ಕೆ ಪುಷ್ಠಿ ನಿಡಿತ್ತು. ಅಂತೆಯೇ ದೇಸಾಯಿ ಕೌಟುಂಬಿಕ ಮನರಂಜನೆಯ ಸಿನಿಮಾ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಅದರ ಜತೆಗೆ ಗರಡಿ ಮನೆಯ ಕುಸ್ತಿ ಪಟುವಿನ ಕಥೆಯೂ ತೆರೆಯಲ್ಲಿ ಸಾಗುತ್ತದೆ. ನಾಯಕ ಕುಸ್ತಿಪಟು, ಆತ ಛಲಬಿಡದೆ ಹೇಗೆ ಗೆಲುವು ಸಾಧಿಸುತ್ತಾನೆ. ಅಷ್ಟಕ್ಕೂ ನಾಯಕ ಕುಸ್ತಿಯತ್ತ ಒಲವು ತಾಳಿದ್ದು ಯಾಕೆ ಎಂಬುದನ್ನು ಸಿನಿಮಾ ನೊಡಿಯೇ ತಿಳಿಯಬೇಕು ಎನ್ನುತ್ತಾರೆ ನಿರ್ದೇಶಕ ನಾಗಿರೆಡ್ಡಿ ಭಡ.

ಸೆಂಟಿಮೆಂಟ್ ಸ್ಪರ್ಶ

ಅದು ದೇಸಾಯಿ ಮನೆತನ, ಆ ಕುಟುಂಬದಲ್ಲಿ ಸಿರಿವಂತಿಕೆಯ ಜತೆಗೆ ಹೃದಯ ಶ್ರೀಮಂತಿಕೆಯೂ ಇರುತ್ತದೆ. ಆ ಮನೆತಲ್ಲಾಗುವ ಏರಿಳಿತ, ಸಂಬಂಧಗಳ ಮಿಳಿತವನ್ನು ಸೆಂಟಿಮೆಂಟ್ ಆಗಿ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಅದರ ಜತೆಗೆ ನವಿರಾದ ಪ್ರೇಮ ಕಥೆಯೂ ಬೆರೆತಿದೆ. ಹಾಗಾಗಿ ದೇಸಾಯಿ ಕಂಪ್ಲೀಟ್ ಪ್ಯಾಕೇಜ್ ಸಿನಿಮಾ ಎನ್ನುತ್ತಾರೆ ನಾಗಿರೆಡ್ಡಿ. ಮಹಾಂತೇಶ. ವಿ.ಚೋಳಚಗುಡ್ಡ ಕಥೆ ಬರೆದು ವೀರಭದ್ರೇಶ್ವರ ಕ್ರಿಯೇಟಿವ್ ಫಿಲಂಸ್ ಲಾಂಛನದಲ್ಲಿ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಬಾದಾಮಿ, ಬಾಗಲಕೋಟೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಚಾಲೆಂಜಿಂಗ್ ಪಾತ್ರ

ದೇಸಾಯಿಯಲ್ಲಿ ಕುಸ್ತಿಪಟುವಾಗಿ ಕಾಣಿಸಿಕೊಂಡಿರುವ ಪ್ರವೀಣ್‌ಗೆ ಇದು ಚಾಲೆಂಜಿಂಗ್ ಪಾತ್ರವಾಗಿದೆ. ಆ ಮೂಲಕ ಹೊಸತನದ ಪಾತ್ರದತ್ತ ಹೊರಳಿದ್ದಾರೆ. ರಾಧ್ಯಾ ನಾಯಕಿಯಾಗಿ ಬಣ್ಣಹಚ್ಚಿದ್ದು, ಉಳಿದಂತೆ ಒರಟ ಪ್ರಶಾಂತ್, ಚೆಲುವರಾಜು, ಮಧುಸೂದನ್ ರಾವ್, ಕಲ್ಯಾಣಿ, ಹರಿಣಿ, ಪ್ರಶಾಂತ್, ಮಂಜುನಾಥ್ ಹೆಗಡೆ, ಸೃಷ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶಾಸಕ ಲಕ್ಷ್ಮಣ್ ಸವದಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಡೆವಿಲ್ ಅಂಗಳದಲ್ಲಿ ಸದ್ದಿಲ್ಲ



ದರ್ಶನ್ ಅಭಿನಯದ ಕಾಟೇರ ಭರ್ಜರಿ ಯಶಸ್ಸು ಕಂಡಿತು, ಬಾಕ್ಸ್ ಆಫೀಸ್‌ನಲ್ಲಿ ಕೋಟಿ ಕೋಟಿ ಗಳಿಕೆ ಕಂಡಿತು. ಈ ಯಶಸ್ಸಿನ ಬೆನ್ನಲ್ಲೇ ದಾಸ, ಡೆವಿಲ್ ಚಿತ್ರದಲ್ಲಿ ನಟಿಸುತ್ತಿದ್ದರು, ಅಕ್ಟೋಬರ್‌ನಲ್ಲಿ ಡೆವಿಲ್ ದರ್ಶವಾಗಲೇಬೇಕು ಎಂದು ದರ್ಶನ್ ಹಠಕ್ಕೆ ಬಿದ್ದಿದ್ದರು. ಚಿತ್ರತಂಡ ಕೂಡ ಭರದಿಂದ ಚಿತ್ರೀಕರಣ ನಡೆಸುತ್ತಿತ್ತು. ಈ ನಡುವೆಯೇ ಡೆವಿಲ್ ಚಿತ್ರದ ಟೀಸರ್ ಕೂಡ ಬಿಡುಗಡೆಯಾಗಿತ್ತು. ಟೀಸರ್‌ನ ಸಣ್ಣ ಝಲಕ್ ಸಿನಿಪ್ರಿಯರಲ್ಲಿ ಕುತೂಹಲ ಕೆರಳಿಸಿತ್ತು. ಅಕ್ಟೋಬರ್‌ಗೆ ಡೆವಿಲ್ ದರ್ಶನ ಪಡೆಯಲು ಕಾದು ಕುಳಿತ್ತಿದ್ದರು. ಹೀಗಿರುವಾಗಲೇ ಸಾಹಸ ದೃಶ್ಯದ ಚಿತ್ರೀಕರಣದ ವೇಳೆ ದಾಸನ ಕೈಗೆ ಪೆಟ್ಟಾಗಿತ್ತು. ಅದಕ್ಕಾಗಿ ಚಿಕಿತ್ಸೆ ಪಡೆದ ದರ್ಶನ್ ಮತ್ತೆ ಚಿತ್ರೀಕರಣಕ್ಕೆ ಮರಳಿದ್ದರು.

ಮೈಸೂರಿನಲ್ಲಿ ಬೀಡು ಬಿಟ್ಟಿದ್ದ ಚಿತ್ರತಂಡ ಐಷಾರಾಮಿ ಹೊಟೇಲ್‌ನಲ್ಲಿ ಚಿತ್ರೀಕರಣ ನಡೆಸುತ್ತಿತ್ತು. ಶೂಟಿಂಗ್ ಹಿನ್ನೆಲೆ ಮುಂಗಡವನ್ನು ಪಾವತಿಸಿತ್ತು. ಆದರೆ ಇದೇ ವೇಳೇಯಲ್ಲಿ ದರ್ಶನ್ ಬಂಧನವಾಗಿದೆ. ಹಾಗಂತ ದರ್ಶನ್ ಮೇಲಿರುವುದು ಅಂತಿತ ಕೇಸ್ ಅಲ್ಲ, ಕೊಲೆ ಕೇಸ್. ಸದ್ಯ ಪ್ರಕರಣ ತನಿಖೆಯ ಹಂತದಲ್ಲಿದ್ದು, ದರ್ಶನ್ ಇದರಿಂದ ಯಾವಾಗ ಹೊರಗೆ ಬರುತ್ತಾರೆ ಎಂಬುದು ಯಾರಿಗೂ ತಿಳಿದಿಲ್ಲ. ಇದನ್ನರಿತ ಡೆವಿಲ್ ಚಿತ್ರತಂಡ ಮೈಸೂರಿನಿಂದ ಶೂಟಿಂಗ್ ಪ್ಯಾಕಪ್ ಮಾಡಿದೆ. ಡೆವಿಲ್ ಶೇ ಎಪ್ಪತ್ತರಷ್ಟು ಚಿತ್ರೀಕರಣವಾಗಿದೆ.

> ರಾಬರ್ಟ್ ಸಿನಿಮಾದ ಬಳಿಕ ಸಿಂಧೂರ ಲಕ್ಷಣ ಚಿತ್ರವನ್ನು ನಿರ್ಮಿಸಬೇಕು ಎಂದು ಇಚ್ಚಿಸಿದ್ದೆ, ಅದಕ್ಕಾಗಿ ಸ್ಕ್ರಿಪ್ಟ್ ಕೆಲಸವು ಭರದಿಂದ ಸಾಗಿತ್ತು. ಸಿಂಧೂರ ಲಕ್ಷ್ಮಣ ಶೀರ್ಷಿಕೆಯನ್ನು ರಿಜಿಸ್ಟರ್ ಮಾಡಿಸಿದ್ದೆ, ಆದರೆ ಎಲ್ಲವೂ ನನ್ನದೆ ಎಂದು ಕೆಲವರು ವಾದಿಸುತ್ತಾ ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸಿದರು. ಚಿಂತೆ ಇಲ್ಲ. ನನ್ನ ಬಳಿ ಇನ್ನೂ ನಾಲ್ಕೈದು ಸಿನಿಮಾಗಳ ಟೈಟಲ್ ರಿಜಿಸ್ಟರ್ ಆಗಿವೆ, ಆ ಚಿತ್ರಗಳನ್ನು ನಿರ್ಮಾಣ ಮಾಡೇ ಮಾಡುತ್ತೇನೆ.
>
> -ಉಮಾಪತಿ ಶ್ರೀನಿವಾಸ ಗೌಡ
> ನಿರ್ಮಾಪಕ

ಹೀಗಿದ್ದಾಗ ನಾಯಕನನ್ನು ಬಲದಿಸುವುದೂ ಕಷ್ಟ. ಚಿತ್ರವನ್ನು ಮುಗಿಸುವುದೂ ಕಷ್ಟ. ಇದು ನಿರ್ಮಾಪಕ, ನಿರ್ದೇಶಕರಿಗೆ ನುಂಗಲಾರದ ಬಿಸಿತುಪ್ಪವಾಗಿ ಪರಿಣಮಿಸಿದೆ ಈ ಚಿತ್ರೀಕರಣ ಮುಗಿಯಲಿಲ್ಲವಲ್ಲ ಎಂದು ನಿರ್ದೇಶಕ ಪ್ರಕಾಶ್ ವೀರ್ ತಲೆ ಮೇಲೆ ಕೈಹೊತ್ತು ಕೂತರೆ, ಹಾಕಿದ್ದ ಹಣವೂ ಬರುವ ದಾರಿ ಕಾಣುತ್ತಿಲ್ಲವಲ್ಲ ಎಂದು ನಿರ್ಮಾಪಕಿ ಜೆ.ಜಯಮ್ಮ ಚಿಂತಿಸುವಂತಾಗಿದೆ.

ಚಾಲೆಂಜ್ ಮಾಡಿದ ಉಮಾಪತಿ

ಡೆವಿಲ್ ಬಳಿಕ ಸಿಂಧೂರ ಲಕ್ಷ್ಮಣ ಚಿತ್ರದಲ್ಲಿ ನಟಿಸಲು ದರ್ಶನ್ ಉತ್ಸುಕರಾಗಿದ್ದರು, ತಾವೇ ಸ್ವತಃ ಆಸಕ್ತಿ ವಹಿಸಿ ಕಥೆ ಬರೆಯಲು ಹೇಳಿದ್ದರು. ಕಾಟೇರ ಬಳಿಕ ತರುಣ್ ಸುಧೀರ್, ವೀರ ಸಿಂಧೂರು ಲಕ್ಷ್ಮಣ ಚಿತ್ರವನ್ನು ನಿರ್ದೇಶನ ಮಾಡಲು ಸಿದ್ಧತೆ ನಡೆಸಿದ್ದರು. ರಿಯಲ್ ಸ್ಟೋರಿ ಆಧರಿಸಿ ಸೆಟ್ಟೇರಲಿದ್ದ ಸಿಂಧೂರ ಲಕ್ಷ್ಮಣ ಹೈಬಜೆಟ್ ಸಿನಿಮಾ. ನಿರ್ಮಾಪಕಿ ಶೈಲಜಾ ನಾಗ್ ಈ ನಿರ್ಮಾಣಕ್ಕೆ ಬಂಡವಾಳ ಹೂಡಲು ಸಿದ್ಧವಾಗಿದ್ದರು. ಆದರೆ ಕೊಲೆ ಪ್ರಕರಣ ಎಲ್ಲಾ ಪ್ಲಾನ್‌ಗಳನ್ನು ಉಲ್ಟಾ ಮಾಡಿದೆ. ಈ ಹೊತ್ತಿನಲ್ಲಿಯೇ ನಿರ್ಮಾಪಕ ಉಮಾಪತಿ ಶ್ರೀನಿವಾಸ್ ಗೌಡ ಈಗ ಸಿಂಧೂರ ಲಕ್ಷ್ಮಣ ಚಿತ್ರವನ್ನು ನಿರ್ದೇಶನ ಮಾಡುವಂತೆ ಸವಾಲು ಹಾಕಿದ್ದಾರೆ.

ಜೋಗಯ್ಯನ ದೈವ ದರ್ಶನ

ಮಂಜುನಾಥ್ ಜಯರಾಜ್ ನಟಿಸಿ, ನಿರ್ದೇಶಿಸುತ್ತಿರುವ ದೈವ ಚಿತ್ರದ ಪೋಸ್ಟರ್ ರಿಲೀಸ್ ಆಗಿದೆ. ನಿರ್ದೇಶಕ ರವಿ ಶ್ರೀವತ್ಸ ಅವರ ಬಳಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಮಂಜುನಾಥ್, ದೈವ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಮಂಜುನಾಥ್ ಜಯರಾಜ್ ಹುಟ್ಟುಹಬ್ಬದ ಪ್ರಯುಕ್ತ ಚಿತ್ರತಂಡ ಹೊಸ ಪೋಸ್ಟರ್ ರಿಲೀಸ್ ಮಾಡಿ ಶುಭಕೋರಿದೆ. ದೈವ ಚಿತ್ರದಲ್ಲಿ ಕಾಲಭೈರವನ ಆರಾಧಕನಾಗಿ ಕಾಣಿಸಿಕೊಂಡಿರುವ ಮಂಜುನಾಥ್, ಜೋಗಯ್ಯ ಎಂಬ ಪಾತ್ರದಲ್ಲಿ ಅಭಿನಯಿಸಿದ್ದಾರೆ. ನಾಯಕನ ಪಾತ್ರ ಡಬ್ಬಲ್ ಶೇಡ್‌ನಲ್ಲಿ ಸಾಗಲಿದೆ. ತನ್ನ ಸಮುದಾಯದ ಹಿತಕ್ಕಾಗಿ ಜೋಗಯ್ಯ ವಿಭಿನ್ನ ರೀತಿಯಲ್ಲಿ ಹೋರಾಟ ನಡೆಸುತ್ತಾನೆ, ಅದು ಹೇಗೆ ಎಂಬುದೇ ಚಿತ್ರದ ಸಸ್ಪೆನ್ಸ್. ಬಲರಾಜವಾಡಿ, ಸುರಭಿ, ನಿಶ್ಚಿತಾ ಶೆಟ್ಟಿ ಮುಂತಾದವರು ತಾರಗಣದಲ್ಲಿದ್ದಾರೆ. ಕಲ್ಪವೃಕ್ಷ ಕ್ರಿಯೇಷನ್ ಬ್ಯಾನರ್‌ನಲ್ಲಿ ಜಯಮ್ಮ ಪದ್ಮರಾಜ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಬಹುತೇಕ ಚಿತ್ರೀಕರಣ ಮುಗಿದಿದ್ದ ಎರಡು ಹಾಡು ಹಾಗೂ ಸಾಹಸ ದೃಶ್ಯಗಳ ಚಿತ್ರೀಕರಣ ಬಾಕಿಯಿದೆ. ಶಿರಸಿ, ಮುಂಡಗೋಡು, ಯಲ್ಲಾಪುರ, ಗೋಕರ್ಣ ಸುತ್ತಮುತ್ತಾ ಶೂಟಿಂಗ್ ನಡೆಸಲಾಗಿದೆ. ವಿಜೇತ್ ಮಂಜಯ್ಯ ಸಂಗೀತ ನಿರ್ದೇಶನ, ಹೆಚ್.ಆರ್.ಸಿದ್ದಾರ್ಥ್ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಈ ಚಿತ್ರಕ್ಕಿದೆ.

ಅಲ್ಕಾಗೆ ಶ್ರವಣ ಸಮಸ್ಯೆ

ಬಾಲಿವುಡ್‌ನ ಖ್ಯಾತ ಗಾಯಕಿ ಅಲ್ಕಾ ಯಾಗ್ನಿಕ್ ಅವರ ದನಿ ಕೇಳದ ಸಿನಿಪ್ರಿಯರೇ ಇಲ್ಲ, ಅವರ ಇಂಪಾದ ದನಿಗೆ ಎಲ್ಲರೂ ಮನಸೋತಿದ್ದಾರೆ. ತಮ್ಮ ಇಂಪಾದ ದನಿಯಲ್ಲಿಯೇ ಸಂಗೀತ ಪ್ರಿಯರ್ ಮನಗೆದ್ದಿರುವ ಅಲ್ಕಾ ಯಾಗ್ನಿಕ್ ಅವರಿಗೆ ಈಗ ಶ್ರವಣ ಸಮಸ್ಯೆ ಕಾಡುತ್ತಿದೆ. ಈ ವಿಚಾರವನ್ನು ಸ್ವತಃ ಅಲ್ಕಾ ಯಾಗ್ನಿಕ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಕೆಲವು ವಾರಗಳ ಹಿಂದೆ ನಾನು ವಿಮಾನದಿಂದ ಹೊರಬಂದಾಗ ನಮಗೇನು ಕೇಳಿಸುತ್ತಿಲ್ಲ ಎಂಬ ಭಾವನೆ ನನ್ನನ್ನು ಕಾಡಿತು. ಆ ಬಳಿಕ ಸ್ವಲ್ಪ ಧೈರ್ಯ ಮಾಡಿ ವೈದ್ಯರ ಬಳಿ ತೆರಳಿದಾಗ ಶ್ರವಣ ಸಮಸ್ಯೆ ಆಗಿದೆ ಎಂಬುದನ್ನು ವೈದ್ಯರು ತಿಳಿಸಿದರು. ನನಗೆ ತಿಳಿಯದಂತೆಯೇ ಈ ರೀತಿ ಆಗಿದೆ. ನಾನು ಇದರಿಂದ ಗುಣಮುಖವಾಗಲು ಪ್ರಯತ್ನಿಸುತ್ತಿದ್ದೇನೆ. ಈ ಸಂದರ್ಭದಲ್ಲಿ ನೀವು ನನಗಾಗಿ ಪ್ರಾರ್ಥಿಸಿ. ಹೆಡ್ ಫೋನ್ ಅಥವಾ ಇತರೆ ಸಾಧನಗಳ ಮೂಲಕ ಜೋರಾದ ಶಬ್ದವನ್ನು ಕೇಳಿಸಿಕೊಳ್ಳಬೇಡಿ ಎಂದು ಅಲ್ಕಾ ಯಾಗ್ನಿಕ್ ಮನವಿ ಮಾಡಿದ್ದಾರೆ. ನಿಮ್ಮೆಲ್ಲರ ಪ್ರೀತಿ, ಬೆಂಬಲದಿಂದ ಗುಣಮುಖಳಾಗುತ್ತೇನೆ ಎಂಬ ನಂಬಿಕೆ ನನಗಿದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ತೊಂಬತ್ತರ ದಶಕದಿಂದಲೂ ಬಾಲಿವುಡ್‌ನ ಬೇಡಿಕೆಯ ಗಾಯಕಿಯಾಗಿರುವ ಅಲ್ಕಾ ಇಂದಿಗೂ ಅದೇ ಬೇಡಿಕೆ ಉಳಿಸಿದಕೊಂಡಿದ್ದಾರೆ. ಈಗಲೂ ಅಲ್ಕಾ ಯಾಗ್ನಿಕ್ ಅವರಿಗೆ ಕೈ ತುಂಬಾ ಅವಕಾಶಗಳಿವೆ. ಇತ್ತೀಚೆಗೆ ತೆರೆಗೆ ಬಂದ ಕ್ರೂ ಮತ್ತು ಅಮರ್ ಸಿಂಗ್ ಚಮ್ಕಿಲಾ ಚಿತ್ರಗಳ ಹಾಡಿಗೆ ಅಲ್ಕಾ ಯಾಗ್ನಿಕ್ ದನಿಯಾಗಿದ್ದಾರೆ.

ಐತಿಹಾಸಿಕ ಚಿತ್ರದಲ್ಲಿ ಡಾಲಿ

ಖ್ಯಾತ ನಿರ್ದೇಶಕ ನಾಗಾಭರಣ ಅವರ ಎರಡು ದಶಕದ ಕನಸು ನನಸಾಗುತ್ತಿದೆ. ಹೌದು, ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರ ಜೀನವಾಧಾರಿತ ಕಥೆಯನ್ನು ನಿರ್ದೇಶಿಸಿ ತೆರೆಗೆ ತರಬೇಕು ಎಂಬ ಮಹಾದಾಸೆ ಅವರ ಮನದಲ್ಲಿತ್ತು. ಅದು ಈಗ ನನಸಾಗುತ್ತಿದೆ. ಅಂದುಕೊಂಡಂತೆ ನಾಡಪ್ರಭು ಕೆಂಪೇಗೌಡ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ವಿಶೇಷ ಎಂದರೆ ಕೆಂಪೇಗೌಡರ ಪಾತ್ರದಲ್ಲಿ ನಟ ಡಾಲಿ ಧನಂಜಯ ಕಾಣಿಸಿಕೊಳ್ಳಲಿದ್ದಾರೆ. ಭೂಗತ ಲೋಕದ ಡಾನ್ ಆಗಿ, ಕಾಮನ್‌ಮ್ಯಾನ್ ಆಗಿ ಮಿಂಚಿದ್ದ ಡಾಲಿಗೆ ನಾಡ ಪ್ರಭು ಕೆಂಪೇಗೌಡ ಬಹು ನಿರೀಕ್ಷಿತ ಸಿನಿಮಾವಾಗಿದೆ. ಡಾಲಿ ನಟನಾ ಜೀವನದಲ್ಲಿಯೇ ನಾಡಪ್ರಭು ಕೆಂಪೇಗೌಡ ಸಿನಿಮಾ ಮೈಲುಗಲ್ಲಾಗಲಿದೆ. ಹಾಗಾಗಿಯೇ ಈ ಚಿತ್ರದಲ್ಲಿ ನಟಿಸಲು ಬಲು ಉತ್ಸುಕರಾಗಿರುವ ಡಾಲಿ, ಚಿತ್ರಕ್ಕಾಗಿ ತಯಾರಿ ನಡೆಸುತ್ತಿದ್ದಾರೆ. ಉಳಿದಂತೆ ಚಿತ್ರದಲ್ಲಿ ದಿಗ್ಗಜ ಕಲಾವಿದರ ದಂಡೇ ಇರಲಿದೆ. ಡಾ.ಎಂ.ಎನ್ ಶಿವರುದ್ರಪ್ಪ ಮತ್ತು ಶುಭಂ ಗುಂಡಾಲ ಒಟ್ಟಾಗಿ ಚಿತ್ರ ನಿರ್ಮಾಣ ಮಡುತ್ತಿದ್ದಾರೆ. ನಾಡಪ್ರಭು ಕೆಂಪೇಗೌಡ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ಮೂಡಿಬರಲಿದ್ದು, ಅದ್ಭುತ ಐತಿಹಾಸಿಕ ಕಥನವನ್ನು ಬೆಳ್ಳಿತೆರೆಯಲ್ಲಿ ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.

DAALI PICTURES
ಡಾ॥ ಟಿ ಎಸ್ ನಾಗಾಭರಣರ ಎರಡು ದಶಕಗಳ ಕನಸು
ಕನ್ನಡ ಅಸ್ಮಿತೆಯ ಐತಿಹಾಸಿಕ ದೃಶ್ಯ ಕಾವ್ಯ
ISVARA ENTERTAINMENT
ನಟರಾಕ್ಷಸ
ಧನಂಜಯ
ನಿಜ ಕನ್ನಡಿಗನ ಚಾರಿತ್ರಿಕ ಪಾತ್ರದಲ್ಲಿ
ನಾಡಪ್ರಭು ಕೆಂಪೇಗೌಡ
ಬೆಂಗಳೂರು ಕಾರಣಿಕ
ನಿರ್ಮಾಪಕರು
ಡಾ॥ ಎಂ. ಎನ್. ಶಿವರುದ್ರಪ್ಪ, ಶುಭಂ ಗುಂಡಾಲ
ಪರಿಕಲ್ಪನೆ - ಕಥೆ - ಚಿತ್ರಕಥೆ - ಸಂಭಾಷಣೆ - ನಿರ್ದೇಶನ
ಡಾ॥ ಟಿ. ಎಸ್. ನಾಗಾಭರಣ
ಸಹ ಕಥೆ ಪ್ರತಿಭಾ ನಂದಕುಮಾರ್ ಕಾರ್ಯಕಾರಿ ನಿರ್ಮಾಪಕ - ಸಹನಿರ್ದೇಶನ ಪನ್ನಗ ಭರಣ ಸಂಗೀತ ವಿನ್ಯಾಸ ವಾಸುಕಿ ವೈಭವ್
ಛಾಯಾಗ್ರಹಣ ದೃಶ್ಯ ವಿನ್ಯಾಸ ಅದ್ವೈತ್ ಗುರುಮೂರ್ತಿ ನಿರ್ಮಾಣ ವಿನ್ಯಾಸ ಶಶಿಧರ ಅಡಪ ವಸ್ತ್ರ ವಿನ್ಯಾಸ ನಾಗಿಣಿ ಭರಣ
ಪಿ ಆರ್ ಒ ಸುಧೀಂದ್ರ ವೆಂಕಟೇಶ್ ಪ್ರಚಾರ ವಿನ್ಯಾಸ ದಿ ಲೇಜಿ ಬ್ರೈನ್ಸ್
ಸಂಶೋಧನಾ ಸಾಹಿತ್ಯ ಪ್ರೊ ಸಿದ್ಧಗಂಗಯ್ಯ ಕಂಬಾಳು, ಡಾ॥ ಎಚ್. ಎಸ್. ಗೋಪಾಲ ರಾವ್, ಪ್ರೊ. ಚಂದ್ರಶೇಖರ ಉಷಾಲ, ಡಾ॥ ಹಂಗು ರಾಜೇಶ್
KRG connects
The Lazy Brains